ಭಾನುವಾರ, ಏಪ್ರಿಲ್ 14, 2024 |₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

'ಬೈಸಾಖಿ' ಉತ್ಸವ ನಿಮಿತ್ತ ಭಕ್ತರು ಬಾಂಗ್ಲಾ ಸಾಹಿಬ್ ಗುರುದ್ವಾರದ ಕಲ್ಯಾಣಿಯಲ್ಲಿ ಪವಿತ್ರ ಸ್ನಾನ ಮಾಡಿದರು

ಕರ್ನಾಟಕ ಸರ್ಕಾರ

ಸಮಾಜ ಕಲ್ಯಾಣ ಇಲಾಖೆ

"ಜನರ ಜೀವನ ಮಟ್ಟವನ್ನು ಉತ್ತಮಗೊಳಿಸಲು ಶಿಕ್ಷಣವು ಪ್ರಮುಖ ಅಸ್ತ್ರವಾಗಿದೆ"

-ಡಾ. ಬಿ.ಆರ್. ಅಂಬೇಡ್ಕರ್

133ನೇ ಜನ್ಮದಿನಾಚರಣೆ

ಸಂವಿಧಾನ ಶಿಲ್ಪಿ, ಮಹಾ ಮಾನವತಾವಾದಿ, ಭಾರತ ರತ್ನ

ಡಾ. ಬಿ.ಆರ್. ಅಂಬೇಡ್ಕರ್ ರವರ

ಪ್ರತಿಮೆಗೆ ಮಾಲಾರ್ಪಣೆ

ಏಪ್ರಿಲ್ 14, 2024 ಭಾನುವಾರ, ಬೆಳಿಗ್ಗೆ 10.00 ಗಂಟೆಗೆ
ವಿಧಾನಸೌಧದ ಮುಂಭಾಗ, ಬೆಂಗಳೂರು

``ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
-ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ

@SWDGok

OM SHRI GURUBASAVALINGAYA NAMAHA

HIREMATH SAMSTHAN VIDYAPEETH TRUST(R), BHALKI

Sri Channabasaveshwar Gurukul (Resi.) PU Science College, Kardyal - 585 413

Tq. Bhalki - Dist. Bidar - Karnataka

Contact : 8892992222 - 8147740402 - 7353304503 - Website: www.cbgurukul.in

CONGRATULATION : OUTSTANDING ACHIEVEMENT IN II PUC ANNUAL EXAMINATION-2024

OVER ALL COLLEGE RESULT 99.67 %

APPEARED	DISTINCTIONS	FIRST CLASS
1256	865	388

ABOVE 95%	62
ABOVE 90%	459
ABOVE 85%	865

100 OUT OF 100

BIOLOGY	CHEMISTRY	PHYSICS	MATHS	KANNADA
75	16	10	06	02

03 STUDENTS WITHIN TOP 10 STATE RANKS

State 7th Rank

K	098
E	098
P	100
C	100
M	098
B	098

592
98.67%

State 8th Rank

K	099
E	094
P	100
C	100
M	098
B	100

591
98.50%

State 10th Rank

K	095
E	096
P	100
C	100
M	098
B	100

589
98.17%

RAKSHITA SANJEEVKUMAR

RAKSHITA SHARANABASAVA

RAKSHITA UMESHKUMAR

587·97.83% ADITYA
587·97.83% RAKSHITA
587·97.83% VARUN
586·97.67% AKSHATA
586·97.67% SUSHMITA
585·97.50% SANJANA
584·97.33% ARYAN
582·97.00% PRAJAPATI
581·96.83% SANGANABASAVA
580·96.67% SANDESH
579·96.50% ADARSH
579·96.50% SHRUTI



579·96.50% SHASHWATH
579·96.50% PRAGATI
578·96.33% ADINATH
577·96.17% PRATIKSHA
576·96.00% ADITYA GANGA
576·96.00% K G HARSHITHA
576·96.00% KIRAN KUMAR
576·96.00% RAVIKIRAN
576·96.00% PRAJWAL
576·96.00% PRAJWAL
575·95.83% AKSHATA
575·95.83% SUMEET

575·95.83% VEERESH
574·95.67% PRAJWAL
574·95.67% PRAJWAL
574·95.67% SANATH
574·95.67% SHARAN PRIYA
573·95.50% AKASH ADIKI
573·95.50% ANJALI
573·95.50% SOUNDARYA
573·95.50% VEERENDRA
573·95.50% PREETI
573·95.50% VISHWA
573·95.50% SAKSHI

573·95.50% VINAYAK
572·95.33% ABHISHEK RAO
572·95.33% AKSHATA
572·95.33% BHAGYASHRI
572·95.33% SNEHAL
572·95.33% VIRESH
572·95.33% SANTOSHI
572·95.33% VIVEK
571·95.17% ANKITA
571·95.17% BHAGYASHREE
571·95.17% DEEPAK
571·95.17% RAVEENA

571·95.17% SHARANABASAVA
571·95.17% VEERESH
570·95.00% ANUPAMAJYOTHI
570·95.00% KEERTI P.
570·95.00% KAVYA
570·95.00% MAYURI
570·95.00% SHIVANI
570·95.00% SHASHIKALA
570·95.00% PRARTHANA
570·95.00% SAINATH
570·95.00% SIDHANT
570·95.00% MOHIT

ADMISSIONS OPEN 2024-25

PUC 1ST YEAR SCIENCE

NEET / JEE-IIT/NDA/NATA / KCET/ MHCET / EMCET

200+ STUDENTS ELIGIBLE FOR JEE ADVANCED - 2024

ಭಾನುವಾರ, ಏಪ್ರಿಲ್ 14, 2024 |₹ 7.00 www.prajavani.net prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತರಕಾರಿ ಹಾರ
ಅಸ್ಸಾಂನ ಬಕ್ಸಾ ಜಿಲ್ಲೆಯಲ್ಲಿ ಬಿಹು ಹಬ್ಬದ ಅಂಗವಾಗಿ ವ್ಯಕ್ತಿಯೊಬ್ಬರು ಗೋವಿಗೆ ತೊಡಿಸಲು ತರಕಾರಿಯ ಹಾರವನ್ನು ಸಿದ್ಧಪಡಿಸಿದ್ದು ಹೀಗೆ...



RAMAIAH UNIVERSITY OF APPLIED SCIENCES

WHERE SUCCESS IS A TRADITI*N

ADMISSIONS OPEN FOR ALL UG & PG PROGRAMMES

Programme Offerings

Engineering & Technology | Dental Sciences | Medical | Nursing Education & Research | Social Sciences | Life & Allied Health Sciences | Law | Pharmacy | Physiotherapy | Mathematical & Physical Sciences | Management & Commerce | Art & Design | Hospitality Management & Catering Technology

Beyond the Obvious

- Advanced Learning Centre
- Technology-enabled Learning Spaces
- DSIR SIRO Recognition for Research
- Techno Centres
- Incubation Centre
- Student Exchange Initiatives

Key Recruiters

amazon, ECOLAB, VeBuln, Abbott, Radisson, Bata, TCS TATA CONSULTANCY SERVICES, Reliance Industries Limited, TAJ, MEDLIFE, Apollo Munich HEALTH INSURANCE, Vedantu LIVE ONLINE TUTORING, wipro, EY Building a better working world, Capgemini, Infosys, gsk, HYUNDAI, mahindra AEROSPACE, Syngene

Find your Dream Job Here

52 LPA
Highest National Package

25.5 LPA
Highest International Package

300+
Companies

RUAS Accreditation & Recognition

NIRF NATIONAL INSTITUTIONAL RANKING FRAMEWORK
65th Rank in Pharmacy
14th Rank in Dental
43rd Rank in Medical

ARIIA ATAL RANKING OF INSTITUTIONS ON INNOVATION ACHIEVEMENTS
ACCEDITED A+ Ramaiah Medical College
QS I-GAUGE INDIAN UNIVERSITY RATING GOLD

ADMISSIONS OPEN 2024

Call: +91 8010004444
Website: msruas.ac.in
Email: admissions@msruas.ac.in

Apply Now Through RUAS-AT

ಸಾರಿಗೆ ನಿಗಮಗಳ ಬಸ್, ಜನರ ವಾಹನ ಓಡಾಟಕ್ಕೆ ತೊಂದರೆ • ದೂರು ನೀಡಿದರೂ ಪೊಲೀಸರು ಮೌನ

ಖಾಸಗಿ ಬಸ್‌ಗಳ ಅಕ್ರಮ ನಿಲುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮೆಜೆಸ್ಟಿಕ್ ಕೇಂದ್ರ ಬಸ್ ನಿಲ್ದಾಣ ಹಾಗೂ ಮೈಸೂರು ರಸ್ತೆಯ ಸ್ಯಾಟ್‌ಲೈಟ್ ಬಸ್ ನಿಲ್ದಾಣ ಸುತ್ತಮುತ್ತಲ ಖಾಸಗಿ ಬಸ್‌ಗಳನ್ನು ಅಕ್ರಮವಾಗಿ ನಿಲುಗಡೆ ಮಾಡಲಾಗುತ್ತಿದ್ದು, ಇದರಿಂದಾಗಿ ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆ.

ಬೆಂಗಳೂರಿನಿಂದ ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಗೆ ನಿತ್ಯವೂ ನೂರಾರು ಸಂಖ್ಯೆಯಲ್ಲಿ ಖಾಸಗಿ ಬಸ್‌ಗಳು ಸಂಚರಿಸುತ್ತಿವೆ. ಬಹುತೇಕ ಖಾಸಗಿ ಬಸ್‌ಗಳನ್ನು ಪ್ರಮುಖ ರಸ್ತೆಗಳ ಬದಿಯಲ್ಲಿ ಅಕ್ರಮವಾಗಿ ನಿಲ್ಲಿಸಲಾಗುತ್ತಿದ್ದು, ಈ ಬಗ್ಗೆ ದೂರು ನೀಡಿದರೂ ಸಂಚಾರ ಪೊಲೀಸರು ಕ್ರಮ ಕೈಗೊಳ್ಳುತ್ತಿಲ್ಲವೆಂಬ ಆರೋಪ ವ್ಯಕ್ತವಾಗಿದೆ.

ಮೆಜೆಸ್ಟಿಕ್ ಬಳಿಯ ಪ್ಲಾಟ್‌ಫಾರ್ಮ್ ರಸ್ತೆ, ಧನ್ವಂತರಿ ರಸ್ತೆ, ಜೆಡಿಎಸ್ ಕಚೇರಿ ರಸ್ತೆ, ಸುಬೇದಾರ್ ಛತ್ರ ರಸ್ತೆ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ನಿತ್ಯವೂ ಖಾಸಗಿ ವಾಹನಗಳಿಂದ ದಟ್ಟಣೆ ಉಂಟಾಗುತ್ತಿರುವುದಾಗಿ ಸ್ಥಳೀಯರು ದೂರುತ್ತಿದ್ದಾರೆ.

ಮೆಜೆಸ್ಟಿಕ್ ಕೇಂದ್ರ ಬಸ್ ನಿಲ್ದಾಣಕ್ಕೆ ಹೊಂದಿಕೊಂಡಿರುವ ಪ್ಲಾಟ್‌ಫಾರ್ಮ್ ರಸ್ತೆಯ ಎರಡು ಬದಿಯೂ ಅಕ್ರಮವಾಗಿ ನಿಲುಗಡೆ ಮಾಡಿರುವ ಖಾಸಗಿ ಬಸ್‌ಗಳು

'ಬೆಂಗಳೂರಿನ ಹೃದಯ ಭಾಗ ಮೆಜೆಸ್ಟಿಕ್. ನಗರಕ್ಕೆ ಬರುವ ಹಾಗೂ ಇಲ್ಲಿಂದ ಹೊರ ಜಿಲ್ಲೆ-ಹೊರ ರಾಜ್ಯಕ್ಕೆ ಹೋಗುವ ಬಹುತೇಕರು, ಮೆಜೆಸ್ಟಿಕ್ ನಿಲ್ದಾಣದ ಮೂಲಕ ಸಂಚರಿಸುತ್ತಿದ್ದಾರೆ. ಇದೇ ನಿಲ್ದಾಣದ ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳಲ್ಲಿ ಖಾಸಗಿ ಬಸ್‌ಗಳನ್ನು ನಿಲುಗಡೆ ಮಾಡಲಾಗುತ್ತಿದ್ದು, ಇದರಿಂದ ಸಾರಿಗೆ ನಿಗಮಗಳ ಬಸ್‌ಗಳು ಹಾಗೂ ಸಾರ್ವಜನಿಕರ ವಾಹನಗಳ ಸಂಚಾರಕ್ಕೆ ಕಿರಿಕಿರಿ ಉಂಟಾಗುತ್ತಿದೆ' ಎಂದು ಗಾಂಧಿನಗರದ ವ್ಯಾಪಾರಿ ಎಂ. ರಂಗನಾಥ್ ಅಳಲು ತೋಡಿಕೊಂಡರು.

'ಬಹುತೇಕ ಖಾಸಗಿ ಬಸ್‌ಗಳು ರಾತ್ರಿ ಹೊತ್ತು ಸಂಚರಿಸುತ್ತವೆ. ಬೆಳಿಗ್ಗೆಯಿಂದ ಸಂಜೆಯವರೆಗೂ ಪ್ರಮುಖ ರಸ್ತೆ ಬದಿಯಲ್ಲಿ ಬಸ್ ನಿಲ್ಲಿಸಲಾಗುತ್ತಿದೆ. ಇಂಥ ಬಸ್‌ಗಳ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೂ ದೂರು ನೀಡಲಾಗಿದೆ. ಆದರೆ, ಯಾವುದೇ ಕ್ರಮ ಜರುಗಿಸಿಲ್ಲ' ಎಂದರು.

ಮೆಜೆಸ್ಟಿಕ್ ಬಳಿಯ ಹೋಟೆಲ್‌ವೊಂದರ ಮಾಲೀಕ, 'ಮೆಜೆಸ್ಟಿಕ್ ಸುತ್ತಮುತ್ತ ಖಾಸಗಿ ಬಸ್ ಬುಕ್ಕಿಂಗ್ ಏಜೆನ್ಸಿಗಳು ಹೆಚ್ಚಿವೆ. ಅವರೇ ತಮ್ಮ ಕಂಪನಿ ವಾಹನಗಳನ್ನು ರಸ್ತೆಯಲ್ಲಿ ನಿಲ್ಲಿಸುತ್ತಿದ್ದಾರೆ. ಇದು ದಟ್ಟಣೆಗೆ ಕಾರಣವಾಗುತ್ತಿದೆ' ಎಂದರು.

'ಬಸ್ ನಿಲ್ದಾಣಕ್ಕೆ ಬಂದು ಹೋಗಲು ಯಾರ ಆಕ್ಷೇಪವೂ ಇಲ್ಲ. ಆದರೆ, ಬೆಳಿಗ್ಗೆಯಿಂದ ಸಂಜೆಯವರೆಗೂ ರಸ್ತೆಯಲ್ಲಿ ನಿಲ್ಲಿಸಿದರೆ ಜನರಿಗೆ ತೊಂದರೆ' ಎಂದು ಹೇಳಿದರು.

ಪೊಲೀಸರಿಗೆ ಲಂಚ, ಮಾಲೀಕರ ಬೆದರಿಕೆ: 'ಬಸ್ ನಿಲುಗಡೆ ಪ್ರಶ್ನಿಸುವ ಜನರನ್ನು ಮಾಲೀಕರು ಬೆದರಿಸುತ್ತಿದ್ದಾರೆ. 'ಪೊಲೀಸರಿಗೆ ನಾವು ಲಂಚ ಕೊಡುತ್ತೇವೆ. ರಸ್ತೆಯಲ್ಲಿಯೇ ಬಸ್ ನಿಲ್ಲಿಸುತ್ತೇವೆ. ನಮ್ಮನ್ನು ಯಾರೂ ಏನು ಮಾಡುವುದಿಲ್ಲ' ಎಂಬುದಾಗಿ ಮಾಲೀಕರು ಹೇಳುತ್ತಿದ್ದಾರೆ. ಬಸ್ ನಿಲುಗಡೆ ವಿಚಾರಕ್ಕೆ ಆಗಾಗ ಗಲಾಟೆಯೂ ಆಗುತ್ತಿದೆ' ಎಂದು ಸಾರ್ವಜನಿಕರು ದೂರಿದರು.

ಮೈಸೂರು ರಸ್ತೆಯಲ್ಲೂ ದಟ್ಟಣೆ: 'ಸ್ಯಾಟಲೈಟ್ ಬಸ್ ನಿಲ್ದಾಣ ಬಳಿಯೂ ಖಾಸಗಿ ಬಸ್‌ಗಳನ್ನು ಅಕ್ರಮವಾಗಿ ನಿಲುಗಡೆ ಮಾಡಲಾಗುತ್ತಿದೆ. ಇದರಿಂದ ಮೈಸೂರು ರಸ್ತೆಯಲ್ಲಿ ದಟ್ಟಣೆ ಉಂಟಾಗುತ್ತಿದೆ. ಪೊಲೀಸರು ಖಾಸಗಿ ಬಸ್‌ಗಳನ್ನು ರಸ್ತೆಯಿಂದ ತೆರವು ಮಾಡಬೇಕು' ಎಂದು ಸ್ಥಳೀಯರು ಆಗ್ರಹಿಸಿದರು.

'ಪ್ರತ್ಯೇಕ ವ್ಯವಸ್ಥೆ ಕಲ್ಪಿಸಿ'

'ಖಾಸಗಿ ಬಸ್‌ಗಳಿಂದ ಪ್ರಯಾಣಿಕರಿಗೆ ಅನುಕೂಲ ಆಗುತ್ತಿದೆ. ಬಸ್ ನಿಲುಗಡೆ ಮಾಡಲು ಮಾತ್ರ ನಗರದಲ್ಲಿ ಸೂಕ್ತ ಜಾಗವಿಲ್ಲ. ಸೂಕ್ತ ಜಾಗ ಒದಗಿಸಿದರೆ, ರಸ್ತೆಯಲ್ಲಿ ಬಸ್ ನಿಲ್ಲಿಸುವುದಿಲ್ಲ' ಎಂದು ಖಾಸಗಿ ಬಸ್ ಕಂಪನಿಯೊಂದರ ಮಾಲೀಕ ಹೇಳಿದರು.

ಬಸ್ ಅಕ್ರಮ ನಿಲುಗಡೆ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಬಹುತೇಕ ಪ್ರಯಾಣಿಕರು ಮೆಜೆಸ್ಟಿಕ್ ನಿಲ್ದಾಣದಲ್ಲಿ ಬಸ್ ಹತ್ತುತ್ತಾರೆ. ಮೆಜೆಸ್ಟಿಕ್ ಸುತ್ತಮುತ್ತ ಖಾಸಗಿ ಬಸ್‌ಗಳ ನಿಲುಗಡೆಗೆ ಯಾವುದೇ ಜಾಗವಿಲ್ಲ. ಹೀಗಾಗಿ, ರಸ್ತೆಯಲ್ಲಿ ನಿಲ್ಲಿಸುತ್ತಿದ್ದೇವೆ' ಎಂದರು.

ಸುದ್ದಿ 2 ನಿಮಿಷ

ಕಲ್ಲು ಎಸೆತ: ಆಂಧ್ರ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿಗೆ ಗಾಯ

ವಿಜಯವಾಡ (ಪಿಟಿಐ): ಆಂಧ್ರಪ್ರದೇಶದ ವಿಜಯವಾಡದಲ್ಲಿ ಶನಿವಾರ ರೋಡ್ ಶೋ ವೇಳೆ ನಡೆದ ಕಲ್ಲು ತೂರಾಟದಲ್ಲಿ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರ ಎಡಹುಬ್ಬಿನ ಬಳಿ ಪೆಟ್ಟಾಗಿದೆ ಎಂದು ಮುಖ್ಯಮಂತ್ರಿ ಕಚೇರಿ ತಿಳಿಸಿದೆ.

ಈ ಸಂಬಂಧ ಹೇಳಿಕೆ ಬಿಡುಗಡೆ ಮಾಡಿರುವ ಸಿಎಂ ಕಾರ್ಯಾಲಯವು, 'ವಿಜಯವಾಡದ ಸಿಂಘ್ ನಗರದಲ್ಲಿ ಬಸ್ ಯಾತ್ರೆ ನಡೆಸುತ್ತಿದ್ದ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ಅವರನ್ನು ಗುರಿಯಾಗಿಸಿ ಕಲ್ಲು ತೂರಾಟ ನಡೆದಿದೆ. ಅವರಿಗೆ ಕಲ್ಲೇಟು ಬಿದ್ದ ತಕ್ಷಣವೇ ಅವರನ್ನು ಬಸ್ ಒಳಕ್ಕೆ ಕರೆದೊಯ್ದು, ವೈದ್ಯರು ಚಿಕಿತ್ಸೆ ನೀಡಿದ್ದಾರೆ' ಎಂದು ಹೇಳಿದೆ.

ದುಷ್ಕರ್ಮಿಗಳು ಕವಣೆ ಬಳಸಿ ಈ ಕೃತ್ಯ ಎಸಗಿರಬಹುದು ಎಂದು ಅಧಿಕಾರಿಗಳು ಶಂಕಿಸಿದ್ದಾರೆ.

ಈ ದಾಳಿಯ ಹಿಂದೆ ಟಿಡಿಪಿ ಇದೆ ಎಂದು ವೈಎಸ್ಆರ್‌ಸಿಪಿ ಮುಖಂಡರು ದೂರಿದ್ದಾರೆ.

ಜಗನ್ ಮೋಹನ್ ರೆಡ್ಡಿ ಅವರು ಕಡಪಾ ಜಿಲ್ಲೆಯ ಇಡುಪುಲಪಾಯದಿಂದ ಶ್ರೀಕಾಕುಳಂ ಜಿಲ್ಲೆಯ ಇಚ್ಛಾಪುರಂವರೆಗೆ 21 ದಿನಗಳ ಬಸ್ ಯಾತ್ರೆಯನ್ನು ಕೈಗೊಂಡಿದ್ದಾರೆ.

ಮೋದಿ 'ಗ್ಯಾರಂಟಿ'ಗೆ ರಾಜ್ಯದ ಹಣ ಹರಿವು: ಕೃಷ್ಣ ಬೈರೇಗೌಡ

ಮಂಡ್ಯ: 'ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಿಗೆ ಕೇಂದ್ರದಿಂದ ಒಂದು ರೂಪಾಯಿ ಹಣ ಪಡೆದಿಲ್ಲ, ಸ್ವಂತ ಶಕ್ತಿಯ ಮೇಲೆ ನಮ್ಮ ಸರ್ಕಾರ ನಡೆಯುತ್ತಿದೆ. ಆದರೆ ಪ್ರಧಾನ ಮಂತ್ರಿ ಹೆಸರಿನ ಮೋದಿ ಗ್ಯಾರಂಟಿಗಳಿಗೆ ರಾಜ್ಯದ ಅಪಾರ ಹಣ ಹರಿದು ಹೋಗುತ್ತಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಶನಿವಾರ ಹೇಳಿದರು.

ರೈತಸಂಘ, ದಸಂಸ, ಜನಶಕ್ತಿ ಸಂಘಟನೆಗಳ ವತಿಯಿಂದ ನಗರದಲ್ಲಿ ನಡೆದ 'ಕರ್ನಾಟಕಕ್ಕೆ ತೆರಿಗೆ ವಂಚನೆ' ವಿಚಾರಸಂಕಿರಣದಲ್ಲಿ ಅವರು ಮಾತನಾಡಿದರು.

'ಪಿಎಂ ಆವಾಸ್ ಯೋಜನೆ, ಪಿಎಂ ಫಸಲ್ ಬಿಮಾ ಯೋಜನೆ, ಜಲಜೀವನ ಮಿಷನ್ ಸೇರಿದಂತೆ ಕೇಂದ್ರದ ಹಲವು ಯೋಜನೆಗಳಿಗೆ ರಾಜ್ಯ ಸರ್ಕಾರ ಶೇ 60ರಷ್ಟು ಅನುದಾನ ನೀಡುತ್ತಿದೆ. ಆದರೆ, ಕೇಂದ್ರ ಸರ್ಕಾರ ತಮ್ಮ ಯೋಜನೆ ಎಂದು ಹೆಸರು ಪಡೆಯುತ್ತಿದೆ. ರಾಜ್ಯದಲ್ಲಿ ಶೇ 77ರಷ್ಟು ಸಂಪನ್ಮೂಲ ಕ್ರೋಡೀಕರಣವಾಗುತ್ತಿದ್ದು, ಇಡೀ ದೇಶದಲ್ಲಿ ಸ್ವಂತ ಶಕ್ತಿಯಿಂದ ನಡೆಯುತ್ತಿರುವ ರಾಜ್ಯಗಳ ಪೈಕಿ ಕರ್ನಾಟಕ ರಾಜ್ಯ ಮೊದಲ ಸ್ಥಾನದಲ್ಲಿದೆ' ಎಂದರು.

'ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಬಜೆಟ್‌ನಲ್ಲಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಂ ₹1,300 ಕೋಟಿ ಹಣ ಘೋಷಿಸಿದ್ದರು. ಈವರೆಗೂ ಒಂದು ರೂಪಾಯಿ ಬಂದಿಲ್ಲ. ಬಿಜೆಪಿ ಜೊತೆ ಸೇರಿರುವ ಎಚ್.ಡಿ.ಕುಮಾರಸ್ವಾಮಿ ಅವರೂ ತಪ್ಪು ಲೆಕ್ಕ ನೀಡಿ ಜನರ ದಿಕ್ಕು ತಪ್ಪಿಸುತ್ತಿದ್ದಾರೆ. ದೇವೇಗೌಡರು, ಕುಮಾರಸ್ವಾಮಿ ಈಗಲಾದರೂ ನಮ್ಮ ನೀರಾವರಿ ಯೋಜನೆಗಳಿಗೆ ಅನುಮತಿ ಕೊಡಿಸಲಿ' ಎಂದರು.

ನಂದಿನಿ ಹಾಲು, ಮೊಸರು, ಮಜ್ಜಿಗೆ ದಾಖಲೆ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಪ್ರಿಲ್ ಎರಡನೇ ವಾರದಲ್ಲಿ ಸಾಲುಸಾಲು ಹಬ್ಬಗಳು ಇದ್ದಿದ್ದರಿಂದ ನಂದಿನಿ ಹಾಲು ಮತ್ತು ಮೊಸರು ದಾಖಲೆ ಪ್ರಮಾಣದಲ್ಲಿ ಮಾರಾಟವಾಗಿದೆ.

'ಏ.11ರಂದು 51.60 ಲಕ್ಷ ಲೀಟರ್ ಹಾಲು ಮತ್ತು ಏ.6ರಂದು 13.56 ಲಕ್ಷ ಲೀಟರ್ ಮೊಸರು ಮಾರಾಟವಾಗಿದೆ. ಇದು ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳದ (ಕೆಎಂಎಫ್) ಇತಿಹಾಸದಲ್ಲೇ ದಾಖಲೆಯಾಗಿದೆ' ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಎಂ.ಕೆ. ಜಗದೀಶ್ ತಿಳಿಸಿದ್ದಾರೆ.

ಕಳೆದ ಸಾಲಿಗೆ ಹೋಲಿಸಿದರೆ ಪ್ರಸ್ತುತ ಹಾಲು ಮಾರಾಟದ ಪ್ರಗತಿ ಶೇ 10ರಷ್ಟು ಹೆಚ್ಚಾಗಿದೆ. ಮೊಸರಿನ

ಮಾರಾಟವೂ ಶೇ 22ರಷ್ಟು ಅಧಿಕವಾಗಿದೆ. ಮಜ್ಜಿಗೆ, ಲಸ್ಸಿಗೆ ಶೇ 30ರಷ್ಟು ಬೇಡಿಕೆ ಹೆಚ್ಚಾಗಿದ್ದು, ದಿನಕ್ಕೆ 1.5 ಲಕ್ಷ ಲೀಟರ್ ಮಾರಾಟವಾಗುತ್ತಿದೆ.

'ಕಳೆದ ವರ್ಷದ ಮಾರ್ಚ್ ತಿಂಗಳಿಗೆ ಹೋಲಿಸಿದರೆ, ನಂದಿನಿ ಐಸ್‌ಕ್ರೀಂ ಮಾರಾಟ ಶೇ 36ರಷ್ಟು ಹೆಚ್ಚಳವಾಗಿದೆ. ದಿನಕ್ಕೆ ಸರಾಸರಿ 25,439 ಲೀಟರ್ ಐಸ್‌ಕ್ರೀಂ ಮಾರಾಟವಾಗುತ್ತಿದ್ದು, ಇದು ಕೂಡಾ ದಾಖಲೆಯಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

43 ಸಾವಿರ ಸಿಬ್ಬಂದಿ ನಿಯೋಜನೆ

ನಗರದ 28 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ 8,984 ಮತಗಟ್ಟೆಗಳು

ಪ್ರಜಾವಾಣಿ ವಾರ್ತೆ

ಪ್ರಜಾ ಮತ ಜನತಂತ್ರದ ಹಬ್ಬ
ಲೋಕಸಭಾ ಚುನಾವಣೆ - 2024

ಬೆಂಗಳೂರು: ನಗರ ವ್ಯಾಪ್ತಿಯ 28 ವಿಧಾನಸಭಾ ಕ್ಷೇತ್ರಗಳಲ್ಲಿರುವ ಒಟ್ಟಾರೆ 8,984 ಮತಗಟ್ಟೆಗಳಿಗೆ 43,123 ಅಧಿಕಾರಿ ಹಾಗೂ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿದೆ.

ಬೆಂಗಳೂರು ಕೇಂದ್ರ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರಗಳಲ್ಲಿ 24 ವಿಧಾನಸಭಾ ಕ್ಷೇತ್ರಗಳಿದ್ದು, ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರಕ್ಕೆ ಒಂದು ಹಾಗೂ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಮೂರು ವಿಧಾನಸಭಾ ಕ್ಷೇತ್ರಗಳಿವೆ.

ಲೋಕಸಭಾ ಚುನಾವಣೆ ಸಂಬಂಧಿಸಿದಂತೆ ಮತಗಟ್ಟೆ ಸಿಬ್ಬಂದಿಯ ಎರಡನೇ ಹಂತದ 'ರ‍್ಯಾಂಡಮೈಸೇಷನ್' ಅನ್ನು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಅವರು ಸಾಮಾನ್ಯ ವೀಕ್ಷಕರ ಸಮ್ಮುಖದಲ್ಲಿ ಶನಿವಾರ ನಡೆಸಿದರು.

ನಿಯೋಜನೆಯಾಗಿರುವ ಮತಗಟ್ಟೆ ಅಧಿಕಾರಿಗಳಿಗೆ ಏಪ್ರಿಲ್ 17ರಂದು ಆಯಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಿಗದಿಪಡಿಸಿರುವ ಸ್ಥಳಗಳಲ್ಲಿ ಬೆಳಿಗ್ಗೆ 9.30ರಿಂದ ಎರಡನೇ ಹಂತದ ತರಬೇತಿ ನಡೆಸಲು ನೀಡಲು ನಿರ್ಧರಿಸಲಾಗಿದೆ. ಏಪ್ರಿಲ್ 24ರಂದು ಅಂತಿಮ ಹಂತದ 'ರ‍್ಯಾಂಡಮೈಸೇಷನ್' ನಡೆಸಲಾಗುತ್ತದೆ.

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಾಮಾನ್ಯ ವೀಕ್ಷಕ ಮಕರಂದ್ ಪಾಂಡುರಂಗ, ಉತ್ತರದ ಲೋಕಸಭಾ ಕ್ಷೇತ್ರದ ಸಾಮಾನ್ಯ ವೀಕ್ಷಕರಾದ ಗಾಯತ್ರಿ ರಾಥೋರ್, ಕೇಂದ್ರ ಲೋಕಸಭಾ ಕ್ಷೇತ್ರದ ಸಾಮಾನ್ಯ ವೀಕ್ಷಕರಾದ ವಾಣಿ ಮೋಹನ್ ಹಾಗೂ ಎಂಸಿಸಿ ನೋಡಲ್ ಅಧಿಕಾರಿ ಮುನೀಶ್ ಮೌದ್ಗಿಲ್, ಚುನಾವಣಾ ವಿಭಾಗದ ವಿಶೇಷ ಆಯುಕ್ತ ಸೆಲ್ವಮಣಿ, ಚುನಾವಣಾಧಿಕಾರಿಗಳಾದ ಡಾ. ಹರೀಶ್ ಕುಮಾರ್, ಕೆ.ಎ ದಯಾನಂದ್, ವಿನೋತ್ ಪ್ರಿಯಾ, ಸಹಾಯಕ ಆಯುಕ್ತರಾದ ರವಿಚಂದ್ರ ನಾಯ್ಕ್, ಜಿಲ್ಲಾಮಟ್ಟದ ಮಾನವ ಸಂಪನ್ಮೂಲ ನೋಡಲ್ ಅಧಿಕಾರಿ ಅಶೋಕ್, ಸಿಬ್ಬಂದಿ ಇದ್ದರು.

ಮಲಬಾರ್ ಆಭರಣ ಹಿಂದಿರುಗಿಸಿದ ಚುನಾವಣಾ ಅಧಿಕಾರಿಗಳು

ರಾಮನಗರ: ತಾಲ್ಲೂಕಿನ ಹೆಜ್ಜಾಲ ಬಳಿಯ ಚೆಕ್‌ಪೋಸ್ಟ್‌ನಲ್ಲಿ ಶನಿವಾರ ವಶಕ್ಕೆ ಪಡೆದಿದ್ದ ಮಲಬಾರ್ ಗೋಲ್ಡ್ ಕಂಪನಿಗೆ ಸೇರಿದ ₹19 ಕೋಟಿ ಮೌಲ್ಯದ 29 ಕೆ.ಜಿ ಚಿನ್ನಾಭರಣ ಮತ್ತು 28 ಕೆ.ಜಿ ಬೆಳ್ಳಿ ಆಭರಣಗಳನ್ನು ಚುನಾವಣಾ ಅಧಿಕಾರಿಗಳು ದಾಖಲೆಗಳನ್ನು ಪರಿಶೀಲನೆ ನಡೆಸಿದ ಬಳಿಕ ಹಿಂದಿರುಗಿಸಿದ್ದಾರೆ.

ಕಂಪನಿಯು ಮೈಸೂರಿನಲ್ಲಿರುವ ತನ್ನ ಮಳಿಗೆಗಳಿಗೆ ವಿತರಿಸಲು ಚಿನ್ನ ಮತ್ತು ಬೆಳ್ಳಿ ಆಭರಣಗಳನ್ನು ಸೂಕ್ತ ದಾಖಲೆಗಳೊಂದಿಗೆ ಕೊಂಡೊಯ್ಯುತ್ತಿತ್ತು. ಚೆಕ್‌ಪೋಸ್ಟ್‌ನಲ್ಲಿ ವಾಹನ ತಡೆದ ಚುನಾವಣಾ ಸಿಬ್ಬಂದಿ ತಪಾಸಣೆ ನಡೆಸಿದ್ದರು. ಕಂಪನಿಯ ಸಿಬ್ಬಂದಿ ತೋರಿಸಿದ ದಾಖಲೆಗಳನ್ನು ಪರಿಶೀಲಿಸಿದ ಅಧಿಕಾರಿಗಳು, ಎಲ್ಲವೂ ಸರಿ ಇದ್ದಿದ್ದರಿಂದ ವಾಹನ ಬಿಟ್ಟು ಕಳಿಸಿದ್ದಾರೆ ಎಂದು ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಕಂಪನಿ ತಿಳಿಸಿದೆ.

ಕಾಂಗ್ರೆಸ್ ಅಭ್ಯರ್ಥಿ ಮನ್ಸೂರ್ ಅಲಿಖಾನ್ ಪರ ಪ್ರಚಾರ

'ಮತ ಕೇಳುವ ನೈತಿಕತೆ ಬಿಜೆಪಿಗಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮನ್ಸೂರ್ ಅಲಿ ಖಾನ್ ಪರ ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಕಾಮಾಕ್ಷಿಪಾಳ್ಯದಲ್ಲಿ ವಿಧಾನ ಪರಿಷತ್ ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹಮದ್ ಮತಯಾಚನೆ ನಡೆಸಿದರು.

'ಕೇಂದ್ರ ಸರ್ಕಾರದ ದುರಾಡಳಿತ, ಭ್ರಷ್ಟಾಚಾರದಿಂದ ಜನ ರೋಸಿಹೋಗಿದ್ದು, ಬದಲಾವಣೆ ಬಯಸಿದ್ದಾರೆ. ಜನರಿಗೆ ನೀಡಿದ್ದ ಆಶ್ವಾಸನೆಗಳನ್ನು ಬಿಜೆಪಿ ಸರ್ಕಾರ ಈಡೇರಿಸಿಲ್ಲ. ಹೀಗಾಗಿ, ಮತ ಕೇಳುವ ನೈತಿಕತೆಯನ್ನು ಬಿಜೆಪಿ ಕಳೆದುಕೊಂಡಿದೆ' ಎಂದು ಸಲೀಂ ಹೇಳಿದರು.

'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಐದು ಗ್ಯಾರಂಟಿ ಯೋಜನೆಗಳು ಜಾರಿ ಆಗಿವೆ. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ನಮ್ಮ ಸಂಕಲ್ಪ. ರಾಜ್ಯವನ್ನು ಸರ್ವ ಜನಾಂಗದ ಶಾಂತಿಯ

ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮನ್ಸೂರ್ ಆಲಿ ಖಾನ್ ಪರ ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಕಾಮಾಕ್ಷಿಪಾಳ್ಯದಲ್ಲಿ ವಿಧಾನ ಪರಿಷತ್ ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹ್ಮದ್ ಮತ ಯಾಚನೆ ನಡೆಸಿದರು

ತೋಟವನ್ನಾಗಿ ರೂಪಿಸುವುದೇ ಉದ್ದೇಶ. ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರವೂ ಸೇರಿದಂತೆ ಈ ಬಾರಿಯ ರಾಜ್ಯದಲ್ಲಿ ಕಾಂಗ್ರೆಸ್ 20ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಕೆಪಿಸಿಸಿ ಉಪಾಧ್ಯಕ್ಷ ವಿ.ಎಸ್. ಆರಾಧ್ಯ, ಕಾರ್ಯದರ್ಶಿ ಸುಧಾಕರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಧಾಕೃಷ್ಣ ಜೊತೆಗಿದ್ದರು.

'ಕಾಂಗ್ರೆಸ್ ಕೊಟ್ಟಿದ್ದನ್ನು ಎಂದಿಗೂ ಕಸಿದುಕೊಂಡಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಸಭೆ ಚುನಾವಣೆ ನಂತರ 'ಗ್ಯಾರಂಟಿ' ಯೋಜನೆಗಳು ಸ್ಥಗಿತ ವಾಗಲಿವೆ ಎಂದು ಬಿಜೆಪಿಯವರು ಸುಳ್ಳು ಹೇಳುತ್ತಿದ್ದಾರೆ. ಕಾಂಗ್ರೆಸ್ ಪಕ್ಷ ಕೊಟ್ಟಿದ್ದನ್ನು ಎಂದಿಗೂ ಕಸಿದುಕೊಂಡಿಲ್ಲ' ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ಹೇಳಿದರು.

ಬನ್ನೇರುಘಟ್ಟದಲ್ಲಿ ಚುನಾವಣಾ ಪ್ರಚಾರ ನಡೆಸಿದ ಅವರು, 'ನಾವು ಬಿ

ಭಾನುವಾರ, ಏಪ್ರಿಲ್ 14, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 104 | ಪುಟ 26

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

ಅಂಬೇಡ್ಕರ್ ಕೋಟ್ಯಂತರ ಯುವ ಮನಸ್ಸುಗಳ ಒಳಗೆ ಇಳಿದು ಬೆಳೆದ ಬಗೆ ನಿಜಕ್ಕೂ ಅಚ್ಚರಿ. ಇಂತಹ ಕೆಲ ಮನಸ್ಸುಗಳ ಗುಚ್ಛ ಇಲ್ಲಿದೆ.



ಪ್ರಸಾದ್ ಭೇಟಿಯಾದ ಸಿ.ಎಂ 8

ಸಂತ್ರಸ್ತರ ಮೇಲೆ ದೌರ್ಜನ್ಯ ನಡೆದಿರುವುದು ತನಿಖೆಯಿಂದ ಬಹಿರಂಗ– ಎನ್‌ಎಚ್‌ಆರ್‌ಸಿ

ಬಿಜೆಪಿ ಪ್ರಣಾಳಿಕೆ ಬಿಡುಗಡೆ ಇಂದು 9

ಸಂದೇಶ್‌ಖಾಲಿ: ಮಾನವ ಹಕ್ಕುಗಳ ಉಲ್ಲಂಘನೆ 7

ಯಾಂತ್ರೀಕರಣದಿಂದ ಅವಸಾನದ ಅಂಚಿಗೆ ಸರಿದ ಕಮ್ಮಾರಿಕೆ

ಕುಲುಮೆ ಕಳಚಿದ ಕಮ್ಮಾರರು

ಕಮ್ಮಾರರ ಬೇಡಿಕೆಗಳು

- ಕಮ್ಮಾರರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು
- ಗ್ರಾಮ ಪಂಚಾಯಿತಿಯಿಂದ ಕುಲುಮೆಗೆ ಜಾಗ ಒದಗಿಸಬೇಕು
- ವಸತಿಗೆ ಸರ್ಕಾರದಿಂದಲೇ ಜಾಗ ನೀಡಬೇಕು
- ವಸತಿ ಯೋಜನೆಗಳಲ್ಲಿ ಕಮ್ಮಾರರನ್ನೂ ಪರಿಗಣಿಸಿ ಮನೆ ನೀಡಬೇಕು
- ಕಮ್ಮಾರ ಮಕ್ಕಳಿಗೆ ವಸತಿನಿಲಯಗಳಲ್ಲಿ ಅವಕಾಶ ಕಲ್ಪಿಸಬೇಕು
- ಪ್ರತಿ ಊರಲ್ಲಿ ಕಮ್ಮಾರ ಕಲ್ಲಯ್ಯ ಸಮುದಾಯ ಭವನ ನಿರ್ಮಿಸಬೇಕು

ಒಳನೋಟ

• ಪ್ರಭು ಬ. ಅಡವಿಹಾಳ

ಕಲಬುರಗಿ: 'ನಾವು ಕಲಬುರಗಿಗೆ ಬಂದು 40 ವರ್ಷ ಮೇಲಾತು. ನಾವೆಲ್ಲಾ ಇಲ್ಲೇ ಹುಟ್ಟಿ, ಇಲ್ಲೇ ಬೆಳದೀವಿ. ಸಿಟಿ ಬಸ್‌ಸ್ಟ್ಯಾಂಡ್ ಮುಂದಿನ ಹೆಡ್ ಪೋಸ್ಟ್ ಆಫೀಸ್ ಹತ್ತಿರ ಜೋಪಡಿ ಕಟ್ಟಿಕೊಂಡು ಜೀವನ ಮಾಡಕತ್ತೀವಿ. ಇದುವರೆಗೂ ನಮಗೆ ಮನಿ ಅನ್ನೋದು ಕನಸಿನ ಮಾತ ಆಗೇದ ನೋಡ್ರೀ ಸರ್. ಮಳಿ ಬಂದ್ರ ಬಾಳ ಪರೇಶ್ಯಾನ ಆಗ್ತದ...' ಇದು ಕಲಬುರಗಿಯಲ್ಲಿ ಕಮ್ಮಾರಿಕೆ ಮಾಡುತ್ತಿರುವ ಹಣಮಂತ ಸೋಳಂಕಿಯವರ ಅಳಲು.

'ನಮ್ಮ ಅಪ್ಪರ ಕಾಲದಾಗ ನಾವು ಧನ್ನೂರಿಗೆ ಬಂದೀವ್ರಿ. ನಮದ ಇಲ್ಲೇ ಪಕ್ಕದ ಹುಲ್ಲಳ್ಳಿ, ನಮ್ಮ ಅಪ್ಪರ ಅಣ್ತಮ್ಮಂದಿರು ಐದ ಮಂದಿ ಇದ್ರೀ. ಒಂದ ಊರಾಗ ಎಲ್ರಿಗೂ ಹೊಟ್ಟ ತುಂಬಲ್ಲ ಅಂತ ನಮ್ಮ ಅಪ್ಪ ಇಲ್ಲಿಗೆ ಬಂದನ್ರೀ. 50 ವರ್ಷ ಸಮೀಪ ಆತ್ರಿ, ಖಾಲಿ ಜಾಗದಾಗ ಕುಲುಮೆ ಶುರು ಮಾಡಿದ. ಅದ ಜಗದಾಗ ಅದೀವಿ ನೋಡ್ರಿ. ಆದ್ರ ಇದುವರಗೂ ಮನಿ ಇಲ್ರಿ, ಜಾಗ ಕೂಡ ನಮ್ಮ ಹೆಸರಾಗಿಲ್ಲ. ಗ್ರಾಮ ಪಂಚಾಯಿತಿಯಿಂದ ಹಿಡಿದು ಜಿಲ್ಲಾಧಿಕಾರಿ ಕಚೇರಿ ತನಕ ಅಡ್ಡಾಡೇನ್ರಿ. ಜಾಗ ನಮ್ಮ ಹೆಸರಿಗೆ ಮಾಡಿಲ್ಲ. ಯಾರಾದ್ರೂ ಎದ್ದ ಹೋಗ ಅಂದ್ರ ಇಲ್ಲೇ ಪಕ್ಕದ ಹೊಳಿಗೆ ಹೋಗ್ಬೇಕ ನೋಡ್ರಿ ನಾವು...' ಇವು ಬಾಗಲಕೋಟೆ ಜಿಲ್ಲೆಯ ಧನ್ನೂರಿನ ಕಮ್ಮಾರ ಮುತ್ತಪ್ಪನ ಭಾವುಕ ಮಾತುಗಳು.

ಕಲಬುರಗಿಯ ಬಂಬೂ ಬಜಾರ್‌ನಲ್ಲಿ ದುಸ್ಥಿತಿಯಲ್ಲಿರುವ ಕಮ್ಮಾರರ ಕುಲುಮೆ
ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಪ್ರತ್ಯೇಕ ಕಮ್ಮಾರ ಅಭಿವೃದ್ಧಿ ನಿಗಮದ ಬೇಡಿಕೆ

ಕಮ್ಮಾರರನ್ನು ವಿಶ್ವಕರ್ಮ ಉಪಜಾತಿಗಳಲ್ಲಿ ಗುರುತಿಸಲಾಗಿದೆ. ವಿಶ್ವಕರ್ಮರಲ್ಲಿ 41 ಉಪಜಾತಿಗಳಿವೆ. ಅವರ ಅಭಿವೃದ್ಧಿಗಾಗಿ 2014ರಲ್ಲಿ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ಸ್ಥಾಪಿಸಲಾಗಿದೆ. ಆದರೆ, ವಿಶ್ವಕರ್ಮರಲ್ಲೇ ತಮ್ಮನ್ನು ಕಡೆಗಣಿಸಲಾಗುತ್ತಿದ್ದು, ಪ್ರತ್ಯೇಕ ಕಮ್ಮಾರ ಅಭಿವೃದ್ಧಿ ನಿಗಮ ರಚಿಸಿ ಎಂಬ ಬೇಡಿಕೆಯನ್ನು ಕಮ್ಮಾರರು ಮುಂದಿಟ್ಟಿದ್ದಾರೆ.

'ಈಗ ಕುಲುಮ್ಯಾಗ ಹೊಟ್ಟ ತುಂಬಲ್ಲ ಬಿಡ್ರಿ.. ಎಲ್ಲಾ ಮಷಿನರಿ ಬಂದಾವು, ನಮನ್ನ ಯಾರ್ ಕೇಳತಾರ. ಅದ್ಯ ಎಲ್ಲಾ ಬಿಟ್ಟ ಸುಮ್ನ ದುಡ್ಯಾಕ ನಿಂತೀವಿ ನೋಡ್ರಿ. ನಾನೂ 10 ವರ್ಷ ಬಾಂಬೇಕ ಹೋಗಿದ್ದೆ. ಭೀವಂಡ್ಯಾಗ ಗೌಂಡಿ ಕೆಲಸ ಮಾಡಿ ಬಂದೀನ್ರಿ. ಈಗ ವೆಲ್ಡಿಂಗ್ ಶಾಪ್ ಇಟ್ಕೊಂಡ ಜೀವನ ಮಾಡಕತ್ತೀನಿ. ಕುಲುಮಿ ಕೆಲಸ ಬಂದ್ರನೂ ಮಾಡ್ತೀನ್ರಿ, ಆದ್ರ ವೆಲ್ಡಿಂಗ್ ಕಮಾಯಿನ ಸ್ವಲ್ಪ ಚೊಲೋ ಐತ್ರಿ...' ಎಂದು ಬಾಗಲಕೋಟೆ ಜಿಲ್ಲೆಯ ಜಂಬಲದಿನ್ನಿ ಗ್ರಾಮದ ಕಮ್ಮಾರ ಕಾಳಪ್ಪ ತಮ್ಮ ಬದುಕಿನ ಕತೆಯನ್ನು ಹೇಳಿಕೊಂಡರು.

ಇವೆಲ್ಲಾ ಪ್ರಸ್ತುತ ಕಮ್ಮಾರಿಕೆ ಯಾವ ಪರಿಸ್ಥಿತಿಯಲ್ಲಿದೆ ಅನ್ನೋದಕ್ಕೆ ಕೆಲ ಉದಾಹರಣೆಗಳಷ್ಟೇ. ರಾಜ್ಯದ ಬಹುತೇಕ ಕಡೆ ಕಮ್ಮಾರಿಕೆ ಮತ್ತು ಕಮ್ಮಾರರ ಪರಿಸ್ಥಿತಿ ಶೋಚನೀಯವಾಗಿದೆ. ಈ ಹಿಂದೆ 'ಕಮ್ಮಾರನಿಲ್ಲದ ಊರು ಊರೇ ಅಲ್ಲ' ಅನ್ನೋ ಮಾತಿತ್ತು. ಕೃಷಿಗೆ ಬೇಕಾದ ಕುಡ, ನೇಗಿಲು, ಮುಂಜ, ತಾಳಿನ ಮಳಿ, ಎತ್ತಿನಗಾಡಿಗೆ ಹಳಿ ಸೇರಿದಂತೆ ರೈತನ ಕಬ್ಬಿಣದ ಕೆಲಸಗಳಿಗೆ ಕಮ್ಮಾರರು ಅತ್ಯಗತ್ಯವಾಗಿದ್ದರು. ಹೀಗಾಗಿಯೇ ಊರಿಗೊಂದು ಕಮ್ಮಾರರ ಕುಲುಮೆ ಇರುತ್ತಿದ್ದವು. ಚಿಕ್ಕ, ಚಿಕ್ಕ ಹಳ್ಳಿಗಳಿದ್ದರೆ, ನಾಲ್ಕಾರು ಹಳ್ಳಿಗಳ ರೈತರ ಕೆಲಸಗಳನ್ನು ಒಬ್ಬನೇ ಕಮ್ಮಾರ ಮಾಡುತ್ತಿದ್ದ.

ಆದರೆ, ಇಂದು ಕೃಷಿ ಸಲಕರಣೆಗಳು ಕಾರ್ಖಾನೆಯಲ್ಲೇ ತಯಾರಾಗಿ ಬರುತ್ತಿರುವುದರಿಂದ ಇವರು ಕುಡುಗೋಲು, ಮಚ್ಚು, ಕೊಡಲಿ ಮಾತ್ರ ತಯಾರಿಸುತ್ತಿದ್ದಾರೆ. ಬಿಟ್ಟರೆ ಅವುಗಳನ್ನು ಹರಿತ ಮಾಡಲು ಮಾತ್ರ ಸೀಮಿತವಾಗುತ್ತಿದ್ದಾರೆ.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಚಚಡಿ ಗ್ರಾಮದಲ್ಲಿ ಕಮ್ಮಾರರ ಓಣಿ ಎಂಬ ಪ್ರತ್ಯೇಕ ಜನ ವಸತಿಯೇ ಇದೆ. ಎರಡು ದಶಕಗಳ ಹಿಂದೆ ಇಲ್ಲಿ 60 ಕುಟುಂಬಗಳು ಕಮ್ಮಾರಿಕೆ ನಂಬಿಕೊಂಡಿದ್ದವು. 10ಕ್ಕೂ ಹೆಚ್ಚು ಕಮ್ಮಾರರ ಶಾಲೆಗಳಿದ್ದವು. 150ಕ್ಕೂ ಹೆಚ್ಚು ಮಂದಿ ದುಡಿಯುತ್ತಿದ್ದರು. ಎಲ್ಲ ಶಾಲೆಗಳೂ ಈಗ ಪಾಳು ಬಿದ್ದಿವೆ. ಯಾವಾಗಲೂ ಉರಿಯುತ್ತಿದ್ದ ಕುಲುಮೆಯಲ್ಲಿ ಬೂದಿ ಮಾತ್ರ ಉಳಿದಿದೆ. ಕುಟುಂಬಗಳೆಲ್ಲ ಉದ್ಯೋಗ ಅರಸಿ ವಲಸೆ ಹೋಗಿವೆ. ಸದ್ಯ ಈ ಊರಿನಲ್ಲಿ ಬೆರಳೆಣಿಕೆಯಷ್ಟು ಜನ ಮಾತ್ರ ಪರ್ಯಾಯ ಉದ್ಯೋಗ ಕಂಡುಕೊಂಡು ಉಳಿದಿದ್ದಾರೆ

6ನೇ ಪುಟ ನೋಡಿ

ಕೋವಿಡ್ ಸಮಯದಲ್ಲಿ ಸಮಯದಲ್ಲಿ ಅಸಂಘಟಿತ ವಲಯದ ಕಾರ್ಮಿಕರಿಗೆ ₹5 ಸಾವಿರ ಪರಿಹಾರದ ಜತೆಗೆ ಆಹಾರದ ಕಿಟ್ ನೀಡಿದರು. ನಮ್ಮ ಕುಲುಮೆಗಳು ಬಂದ್ ಆದರೂ ಯಾವ ನೆರವೂ ಸಿಗಲಿಲ್ಲ
ಬಸವರಾಜ ಕಮ್ಮಾರ, ಹುನಗುಂದ ಕಮ್ಮಾರ ಸಂಘದ ಅಧ್ಯಕ್ಷ

ಕಮ್ಮಾರರಿಗೆ ಎಂದು ಯಾವುದೇ ಪ್ರತ್ಯೇಕ ಯೋಜನೆಗಳಿಲ್ಲ. ಅಸಂಘಟಿತ ಕಾರ್ಮಿಕರಿಗೆ ನೀಡುವ ಎಲ್ಲ ಸವಲತ್ತುಗಳನ್ನೂ ಅವರಿಗೂ ನೀಡಲಾಗುತ್ತಿದೆ.
ಸಂತೋಷ್ ಲಾಡ್, ಕಾರ್ಮಿಕ ಸಚಿವ

'ಅಲ್– ಉಮ್ಮಾ' ಉಗ್ರರ ನಂಟು

ದಾಳಿಯ ವೇಳೆ ಕಬಾಬ್ ಅಂಗಡಿಯಿಂದ ಪರಾರಿಯಾಗಿದ್ದ ಬಾಲ್ಯ ಸ್ನೇಹಿತರು

• ಸಂತೋಷ ಜಿಗಳಿಕೊಪ್ಪ

ಮುಸಾವೀರ್ ಹುಸೇನ್

ಅಬ್ದುಲ್ ಮಥೀನ್

ಕೆಫೆ ಬಾಂಬ್ ಸ್ಫೋಟ

ಬೆಂಗಳೂರು: ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದಲ್ಲಿ ಬಂಧಿಸಲಾಗಿರುವ ಮುಸಾವೀರ್ ಹುಸೇನ್ ಶಾಜೀಬ್ ಹಾಗೂ ಅಬ್ದುಲ್ ಮಥೀನ್ ಅಹಮದ್ ತಾಹಾ, ನಿಷೇಧಿತ 'ಅಲ್– ಉಮ್ಮಾ' ಭಯೋತ್ಪಾದನಾ ಸಂಘಟನೆಯ ಸದಸ್ಯರ ಜೊತೆ ನಂಟು ಹೊಂದಿದ್ದರೆಂಬ ಅನುಮಾನ ವ್ಯಕ್ತವಾಗಿದೆ.

'ತೀರ್ಥಹಳ್ಳಿಯ ತಾಹಾ ಹಾಗೂ ಮುಸಾವೀರ್, ಅಲ್– ಉಮ್ಮಾ ಸಂಘಟನೆಯ ರೂವಾರಿಗಳ ಜೊತೆ ಸಂಪರ್ಕದಲ್ಲಿದ್ದರೆಂಬ ಮಾಹಿತಿ ಇದೆ. ಇದೇ ಸಂಘಟನೆ, ತಮಿಳುನಾಡು ಹಾಗೂ ಕರ್ನಾಟಕದಲ್ಲಿ ವಿಧ್ವಂಸಕ ಕೃತ್ಯ ಎಸಗಲು ಸಂಚು ರೂಪಿಸುತ್ತಿದ್ದ ಸಂಗತಿ ಈ ಹಿಂದಿನ ಕೆಲ ಪ್ರಕರಣಗಳಲ್ಲಿ ಗೊತ್ತಾಗಿತ್ತು' ಎಂದು ತನಿಖಾ ಸಂಸ್ಥೆ ಮೂಲಗಳು ಹೇಳಿವೆ.

ಕರ್ನಾಟಕಕ್ಕೆ ವಿಸ್ತರಣೆ: 'ಇಸ್ಲಾಮಿಕ್ ಸ್ಟೇಟ್ (ಐಎಸ್) ಸಂಘಟನೆ ಉಗ್ರರ ಜೊತೆ ನಂಟು ಹೊಂದಿದ್ದ ತಮಿಳುನಾಡಿನ ಶಂಕಿತ ಸೈಯದ್ ಅಹಮದ್ ಬಾಷಾ, 'ಅಲ್– ಉಮ್ಮಾ' ಸಂಘಟನೆ ಕಟ್ಟಿದ್ದ. ಹಿಂದೂ ಮುಖಂಡರ ಹತ್ಯೆ, ಕೋಮು ಗಲಭೆ ಹಾಗೂ ವಿಧ್ವಂಸಕ ಕೃತ್ಯ ಎಸಗುವ ಉದ್ದೇಶ ಸಂಘಟನೆಯದ್ದಾಗಿತ್ತು' ಎಂದು ಮೂಲಗಳು ಹೇಳಿವೆ.

'ಮುಸ್ಲಿಂ ಸಮುದಾಯದ ಯುವಕರನ್ನು ಪ್ರಚೋದಿಸಿ, ಸಂಘಟನೆಗೆ ಸೇರಿಸಲಾಗಿತ್ತು. ಇವರ ಮೂಲಕವೇ 2014ರಲ್ಲಿ ಚೆನ್ನೈ ಅಂಬತ್ತೂರಿನಲ್ಲಿ ಹಿಂದೂ ಸಂಘಟನೆಯ ಮುಖಂಡ ಸುರೇಶ್ ಕುಮಾರ್ ಹತ್ಯೆ ಮಾಡಿಸಲಾಗಿತ್ತು. ಈ ಪ್ರಕರಣದಲ್ಲಿ ತಮಿಳುನಾಡು ಕಡಲೂರಿನ ಖ್ವಾಜಾ ಮುಹಿನುದ್ದೀನ್ ಅಲಿಯಾಸ್ ಜಲಾಲ್ ಮತ್ತು ಆತನ ಸಹಚರರು ಸಿಕ್ಕಿಬಿದ್ದಿದ್ದರು. ಆಗಲೇ, 'ಅಲ್–ಉಮ್ಮಾ' ಹೆಸರು ಮುಂಚೂಣಿಗೆ ಬಂದಿತ್ತು. ಇದಾದ ಕೆಲ ವರ್ಷಗಳಲ್ಲಿ ಕರ್ನಾಟಕಕ್ಕೂ ಸಂಘಟನೆ ಕಾಲಿಟ್ಟಿತ್ತು. ಜೊತೆಗೆ, 2020ರ ಜನವರಿ 9ರಂದು ತಮಿಳುನಾಡಿನಲ್ಲಿ ವಿಶೇಷ ಸಬ್ ಇನ್‌ಸ್ಪೆಕ್ಟರ್ ವಿಲ್ಸನ್ ಹತ್ಯೆಯಲ್ಲೂ ಸಂಘಟನೆ ಪಾತ್ರವಿತ್ತು' ಎಂದು ಹೇಳಿವೆ.

'ಖ್ವಾಜಾ ಮುಹಿನುದ್ದೀನ್, ವಾರಕ್ಕೊಮ್ಮೆ ಕರ್ನಾಟಕಕ್ಕೆ ಬರಲಾರಂಭಿಸಿದ್ದ. ಬೆಂಗಳೂರಿನ ಗುರಪ್ಪನಪಾಳ್ಯ ಹಾಗೂ ಇತರೆ ಸ್ಥಳಗಳಲ್ಲಿ ಸಭೆ ನಡೆಸಲಾರಂಭಿಸಿದ್ದ. ಇದೇ ಸಭೆಯಲ್ಲಿ ಗುರಪ್ಪನಪಾಳ್ಯದ ಮೆಹಬೂಬ್ ಪಾಷಾ, ಮೊಹಮ್ಮದ್ ಹನೀಫ್, ಮೊಹಮ್ಮದ್ ಮನ್ಸೂರ್ ಅಲಿ ಖಾನ್, ನಾಯಂಡಹಳ್ಳಿಯ ಇಮ್ರಾನ್ ಖಾನ್, ಕೋಲಾರದ ಸಲೀಂ ಖಾನ್, ಚನ್ನಪಟ್ಟಣದ ಹನೀಸ್, ರಾಮನಗರದ ಅಜಾಜ್ ಪಾಷಾ, ತೀರ್ಥಹಳ್ಳಿಯ ಅಬ್ದುಲ್ ಮಥೀನ್ ಅಹಮದ್ ತಾಹಾ ಹಾಗೂ ಮುಸಾವೀರ್ ಹುಸೇನ್ ಶಾಜೀಬ್ ಸಂಘಟನೆ ಪಾತ್ರವಿತ್ತು' ಎಂದು ಹೇಳಿವೆ.

'ಖ್ವಾಜಾ ಮುಹಿನುದ್ದೀನ್, ನಕಲಿ ದಾಖಲೆ ಕೊಟ್ಟು ಖರೀದಿಸುತ್ತಿದ್ದ ಸಿಮ್ ಕಾರ್ಡ್‌ಗಳನ್ನು ತಮಿಳುನಾಡಿನಿಂದ ಕರ್ನಾಟಕಕ್ಕೆ ತರುತ್ತಿದ್ದ. ಅವುಗಳನ್ನು ಸಹಚರರಿಗೆ ಹಂಚುತ್ತಿದ್ದ. ಅದೇ ಸಿಮ್ ಕಾರ್ಡ್ ಬಳಸುವಂತೆ ಸೂಚಿಸುತ್ತಿದ್ದ. ಸಿಮ್‌ಕಾರ್ಡ್ ಬಗ್ಗೆ ತಮಿಳುನಾಡು ಪೊಲೀಸರು, ಕರ್ನಾಟಕ ಪೊಲೀಸರಿಗೆ ಮಾಹಿತಿ ನೀಡಿದ್ದರು' ಎಂದು ಮೂಲಗಳು ಹೇಳಿವೆ.

ಸಿಮ್ ಸುಳಿವು, ಕಬಾಬ್ ಅಂಗಡಿಯಿಂದ ಪರಾರಿ: 'ಖ್ವಾಜಾ ಮುಹಿನುದ್ದೀನ್, ನಕಲಿ ದಾಖಲೆ ಕೊಟ್ಟು ಖರೀದಿಸುತ್ತಿದ್ದ ಸಿಮ್ ಕಾರ್ಡ್‌ಗಳನ್ನು ತಮಿಳುನಾಡಿನಿಂದ ಕರ್ನಾಟಕಕ್ಕೆ ತರುತ್ತಿದ್ದ. ಅವುಗಳನ್ನು ಸಹಚರರಿಗೆ ಹಂಚುತ್ತಿದ್ದ. ಅದೇ ಸಿಮ್ ಕಾರ್ಡ್ ಬಳಸುವಂತೆ ಸೂಚಿಸುತ್ತಿದ್ದ. ಸಿಮ್‌ಕಾರ್ಡ್ ಬಗ್ಗೆ ತಮಿಳುನಾಡು ಪೊಲೀಸರು, ಕರ್ನಾಟಕ ಪೊಲೀಸರಿಗೆ ಮಾಹಿತಿ ನೀಡಿದ್ದರು' ಎಂದು ಮೂಲಗಳು ಹೇಳಿವೆ.

7ನೇ ಪುಟ ನೋಡಿ

'₹ 80 ಲಕ್ಷಕ್ಕೂ ಹೆಚ್ಚು ನಗದು ಸಂದಾಯ'

'ಐಎಸ್ ಉಗ್ರರ ಜೊತೆ ಅಬ್ದುಲ್ ಮಥೀನ್ ಸಂಪರ್ಕದಲ್ಲಿದ್ದ. ಈತನ ಎಲ್ಲ ಕೆಲಸಕ್ಕೆ ಮುಸಾವೀರ್ ಜೊತೆಯಲ್ಲಿದ್ದ. ಕೊಯಮತ್ತೂರು ಕಾರು ಬಾಂಬ್ ಸ್ಫೋಟ, ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ, ಶಿವಮೊಗ್ಗ ಟ್ರಯಲ್ ಬಾಂಬ್ ಸ್ಫೋಟ, ಮಂಗಳೂರು ಗೋಡೆ ಬರಹ ಪ್ರಕರಣದಲ್ಲೂ ಇವರಿಬ್ಬರ ಪಾತ್ರವಿತ್ತು' ಎಂದು ಮೂಲಗಳು ಹೇಳಿವೆ.

'ನಾಲ್ಕು ವರ್ಷಗಳಲ್ಲಿ ಅಬ್ದುಲ್ ಮಥೀನ್‌ಗೆ ಹಲವರು ₹ 80 ಲಕ್ಷಕ್ಕೂ ಹೆಚ್ಚು ನಗದು ಸಂದಾಯ ಮಾಡಿರುವ ಮಾಹಿತಿ ಇದೆ. ಕೆಫೆ ಸ್ಫೋಟದ ನಂತರ ಪರಾರಿಯಾಗಿದ್ದ ವೇಳೆ ಎಲ್ಲ ಖರ್ಚುಗಳನ್ನು ತಾಹಾ ನೋಡಿಕೊಂಡಿದ್ದ. ಎಲ್ಲ ಕಡೆಯೂ ಆತನೇ ಹಣ ನೀಡಿದ್ದ. ಪಾಕಿಸ್ತಾನ ಹಾಗೂ ದುಬೈ ನಿಂದ ಹಣ ಬಂದಿರುವ ಅನುಮಾನವಿದ್ದು, ಪರಿಶೀಲಿಸಲಾಗುತ್ತಿದೆ' ಎಂದು ತಿಳಿಸಿವೆ.

ಪ್ರಧಾನಿ ಮೋದಿ ಇಂದಿನಿಂದ ಪ್ರಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯದಲ್ಲಿ ಭಾನುವಾರದಿಂದ ಚುನಾವಣಾ ಪ್ರಚಾರ ಆರಂಭಿಸಲಿದ್ದು, ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿಗಳ ಪರ ಮತ ಯಾಚಿಸಲಿದ್ದಾರೆ.

ಮೊದಲ ದಿನವೇ ಮೈಸೂರಿನಲ್ಲಿ ಬಹಿರಂಗ ಸಭೆ ಮತ್ತು ಮಂಗಳೂರಿನಲ್ಲಿ ರೋಡ್ ಶೋ ಮೂಲಕ ಚುನಾವಣಾ ಕಹಳೆ ಮೊಳಗಿಸಲಿದ್ದಾರೆ.

ರಾಜ್ಯದಲ್ಲಿ ಎರಡು ಹಂತಗಳಲ್ಲಿ ತಲಾ 14 ಕ್ಷೇತ್ರಗಳಲ್ಲಿ ಚುನಾವಣೆ ನಡೆಯಲಿದೆ. ಮೊದಲ ಹಂತದ ಕ್ಷೇತ್ರಗಳಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿಗಳ ಪರ ಮತ ಸೆಳೆಯುವ ಗುರಿ ಯೊಂದಿಗೆ ಮೋದಿ ಭಾನುವಾರ ರಾಜ್ಯಕ್ಕೆ ಬರಲಿದ್ದಾರೆ. ಜಂಟಿ ಪ್ರಚಾರ ಸಭೆಗಳ ಮೂಲಕ ಎರಡೂ ಪಕ್ಷಗಳ ಮತಗಳ ಧ್ರುವೀಕರಣಕ್ಕೆ ಚಾಲನೆ ನೀಡುವ ಕಾರ್ಯತಂತ್ರವೂ ಇದರ ಹಿಂದಿದೆ.

ನೇರವಾಗಿ ಮೈಸೂರಿಗೆ ಬಂದಿಳಿಯಲಿರುವ ಪ್ರಧಾನಿ, ಅಲ್ಲಿ ಸಂಜೆ 4 ಗಂಟೆಗೆ ನಡೆಯುವ ಬಹಿರಂಗ ಸಮಾವೇಶದಲ್ಲಿ ಭಾಗವಹಿಸುವರು. ಜೆಡಿಎಸ್‌ನ ಎಚ್.ಡಿ. ದೇವೇಗೌಡ, ಮಂಡ್ಯ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯೂ ಆಗಿರುವ ಎಚ್.ಡಿ. ಕುಮಾರಸ್ವಾಮಿ ಕೂಡ ವೇದಿಕೆಯಲ್ಲಿ ಇರಲಿದ್ದಾರೆ. ಬಿ.ಎಸ್. ಯಡಿಯೂರಪ್ಪ, ಬಿ.ವೈ. ವಿಜಯೇಂದ್ರ ಹಾಗೂ ಎರಡೂ ಪಕ್ಷಗಳ ಹಲವು ಅಭ್ಯರ್ಥಿಗಳು ವೇದಿಕೆಯಲ್ಲಿ ಇರುತ್ತಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

14ನೇ ಪುಟ ನೋಡಿ

ಇಂದಿನ ಸಂಚಿಕೆಯೊಂದಿಗೆ
ಪ್ರಜಾವಾಣಿ
ಕ್ಲಾಸಿಫೈಡ್ಸ್
ಪುರವಣಿ
ಲಭ್ಯವಿರುತ್ತದೆ

ಮುಂದುವರಿದ ಮಳೆಯ ಆರ್ಭಟ

ಸಿಡಿಲಿಗೆ 3 ಮಂದಿ ಸಾವು • ಹಲವೆಡೆ ಧರೆಗುರುಳಿದ ಮರ, ವಿದ್ಯುತ್ ಕಂಬಗಳು

ಪ್ರಜಾವಾಣಿ ವಾರ್ತೆ

ಕೊಪ್ಪಳದಲ್ಲಿ ಶನಿವಾರ ರಾತ್ರಿ ಕೆಲಸ ಮುಗಿಸಿ ಸುರಿವ ಮಳೆಯಲ್ಲಿ ನೆನೆಯುತ್ತಾ ಟ್ರ್ಯಾಕ್ಟರ್‌ನಲ್ಲಿ ಮನೆಗೆ ಹೊರಟ ಕೃಷಿಕಾರ್ಮಿಕರು ಕಂಡದ್ದು ಹೀಗೆ
–ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಬೆಂಗಳೂರು: ಕಲ್ಯಾಣ ಕರ್ನಾಟಕ ಭಾಗ ಮತ್ತು ಮಧ್ಯ ಕರ್ನಾಟಕ ಹಾಗೂ ಮಲೆನಾಡಿನ ಕೆಲವು ಭಾಗಗಳಲ್ಲಿ ಶನಿವಾರ ಮಳೆ ಆರ್ಭಟಿಸಿದೆ. ಇನ್ನು ಕೆಲವು ಕಡೆ ಸಾಧಾರಣ ಮಳೆಯಾಗಿದೆ.

ಬೀದರ್, ರಾಯಚೂರು ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ತಲಾ ಒಬ್ಬರಂತೆ ಒಟ್ಟು ಮೂವರು ಮೃತಪಟ್ಟಿದ್ದಾರೆ. ಕೆಲವೆಡೆ ಜಾನುವಾರುಗಳೂ ಮೃತಪಟ್ಟ ಬಗ್ಗೆ ವರದಿಯಾಗಿದೆ. ಗಾಳಿ–ಮಳೆಯ ಅಬ್ಬರಕ್ಕೆ ಕೆಲವು ಕಡೆಗಳಲ್ಲಿ ಮನೆಗಳ ಮೇಲ್ಚಾವಣಿ ಶೀಟುಗಳು ಹಾರಿಹೋಗಿವೆ. ಮರಗಳು ಧರೆಗುರುಳಿವೆ.

ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲ್ಲೂಕಿನ ಅರಳಿಕೊಪ್ಪ ಗ್ರಾಮದ ಸಾಲೂರು ನಿವಾಸಿ, ರೈತ ಶಂಕರ್ (50) ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ಶನಿವಾರ ಸಂಜೆ 4.30ರ ವೇಳೆಗೆ ತೋಟದ ಕೆಲಸ ಮುಗಿಸಿ ಮನೆಗೆ ಹಿಂದಿರುಗಿ ಬರುವಾಗ ಸಿಡಿಲು ಬಡಿದಿದೆ ಎಂ

ಕಾರ್ಯಕ್ರಮದಲ್ಲಿ ಸಾಹಿತಿ ಆಗ್ರಹಾರ ಕೃಷ್ಣಮೂರ್ತಿ ಪ್ರತಿಪಾದನೆ

ಸಮುದಾಯಗಳ ಮಧ್ಯೆ ಕಂದಕ ಸೃಷ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲರನ್ನೂ ಸಮಾನವಾಗಿ ಕಾಣುವುದು ಸರ್ಕಾರಗಳ ಕರ್ತವ್ಯ. ಆದರೆ, ಜಾತಿ, ಧರ್ಮ, ಸಮುದಾಯಗಳ ಮಧ್ಯೆ ಸರ್ಕಾರಗಳೇ ಕಂದಕ ಸೃಷ್ಟಿಸುತ್ತಿವೆ ಎಂದು ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಹೇಳಿದರು.

ಸಮುದಾಯ ಕರ್ನಾಟಕ ಹಾಗೂ ಸಮಾನಮನಸ್ಕ ಸಂಘಟನೆಗಳು ಶನಿವಾರ ಹಮ್ಮಿಕೊಂಡಿದ್ದ 'ಸಂವಿಧಾನ ಉಳಿವಿಗಾಗಿ ಸಾಂಸ್ಕೃತಿಕ ಪ್ರತಿಶೋಧ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಭಾರತದ ಸಾಂಸ್ಕೃತಿಕ ಚರಿತ್ರೆಯ ಒಳಗೇ ಸಹಿಷ್ಣುತೆಯ ಶಕ್ತಿಯೂ ಅಡಗಿದೆ. ಆದಿಕಾಲದಲ್ಲೂ ಸಮಾನತೆ ಇತ್ತು. ಜನರು ಅನಾಗರಿಕರಾದರೂ ಭೇದ ಇರಲಿಲ್ಲ. ನಾಗರಿಕತೆ ಜತೆಗೇ ಅಸಮಾನತೆಯೂ ಜನ್ಮ ತಾಳಿತು. ಉಡುಪು ಮನುಷ್ಯರ ನಡುವಿನ ಭೇದದ ಬೌಕಟ್ಟು ಸೃಷ್ಟಿಸಿತು ಎಂದರು.

ಕರ್ನಾಟಕ ಸಹಿಷ್ಣುತೆಯ ತವರು. ಜೈನ, ಶೈವ ಧರ್ಮ ಪ್ರವರ್ಧಮಾನಕ್ಕೆ ಕಾರಣವಾಗಿದ್ದು, ರಾಮಾನುಜಾಚಾರ್ಯರಿಗೆ ಆಶ್ರಯ ನೀಡಿದ್ದು ಕರ್ನಾಟಕ. ಬಸವ ತತ್ವ ಆಧಾರದಲ್ಲಿ ಜನ್ಮ ತಾಳಿದ ವೀರಶೈವ ಪರಂಪರೆ, ಶರಣ ಚಳವಳಿ ಕ್ರಾಂತಿಗೆ ನಾಂದಿ ಹಾಡಿತು. ಇಸ್ಲಾಂ, ಕ್ರೈಸ್ತರ ಸಹಬಾಳ್ವೆಗೂ ಪ್ರತೀಕವಾಗಿದೆ. ಅಂತಹ ವಾತಾವರಣವನ್ನು ಉಳಿಸಿಕೊಳ್ಳಬೇಕು, ಮತ್ತೆ ಸಹಿಷ್ಣುತೆಯ ನೆಲೆಯಾಗಿಸಬೇಕು. ಪಂಪ ಮಹಾಕವಿ ಆಶಯದಂತೆ 'ಮನುಷ್ಯ ಜಾತಿ ತಾನೊಂದೆ ವಲಂ' ಎನ್ನುವುದು ಮೂಲಮಂತ್ರವಾಗಬೇಕು ಎಂದು ಹೇಳಿದರು.

'ಕೊಡುವ ದಾನವನ್ನೆಲ್ಲಾ ಪಡೆದು ಸಂಗ್ರಹಿಸಿ ಇಟ್ಟುಕೊಳ್ಳಬೇಕು. ಯಾರೇ ನೆರವು ಕೇಳಿದರೂ, ಕೊಡುವ ಭರವಸೆಯನ್ನಷ್ಟೇ ನೀಡಬೇಕು. ಜನರು ನೆರವಿನ ನಿರೀಕ್ಷೆಯಲ್ಲೇ ಜೀವನ ಕಳೆಯಬೇಕು– ಇದು ಶಕುನಿ ದುರ್ಯೋಧನನಿಗೆ ಹೇಳಿಕೊಟ್ಟ ಸಂದೇಶ. ಭಾರತದ ಚುನಾವಣಾ ಬಾಂಡ್ ಕಥೆಯೂ ಇದೇ ಆಗಿದೆ' ಎಂದರು.

ರಾಜಪ್ಪ ದಳವಾಯಿ ರಚನೆಯ, ಶಶಿಧರ್ ಭಾರಿಘಾಟ್ ನಿರ್ದೇಶನದ 'ಜನ ಸತ್ತಿಲ್ಲ' ಕಿರು ನಾಟಕವನ್ನು 'ಬೆಂಗಳೂರು ಸಮುದಾಯ'ದ ಸದಸ್ಯರು ಪ್ರಸ್ತುತಪಡಿಸಿದರು.

ಸಮುದಾಯ ಕರ್ನಾಟಕದ ಗೌರವಾಧ್ಯಕ್ಷ ಜನಾರ್ಧನ (ಜನ್ನಿ) ಪ್ರಾಸ್ತವಿಕ ಮಾತನಾಡಿದರು. ಸಾಹಿತಿ ರಾಜಪ್ಪ ದಳವಾಯಿ, ಜನವಾದಿ ಮಹಿಳಾ ಸಂಘಟನೆ ಅಧ್ಯಕ್ಷೆ ಮೀನಾಕ್ಷಿ ಬಾಳಿ, ಚಿಂತಕ ಶಿವಸುಂದರ್, ಸಮುದಾಯ ಕರ್ನಾಟಕದ ಅಧ್ಯಕ್ಷ ಜೆ.ಸಿ. ಶಶಿಧರ್, ಪ್ರಧಾನ ಕಾರ್ಯದರ್ಶಿ ಮನೋಜ್ ವಾಮಂಜೂರು, ವಲಯ ಕಾರ್ಯದರ್ಶಿ ರವಿಂದ್ರನಾಥ ಸಿರಿವರ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ಸಹಿಷ್ಣುತೆಯ ತವರಿನಲ್ಲಿ ಉಳಿಯಲಿ ಸಮಾನತೆ
- ಚುನಾವಣಾ ಬಾಂಡ್ ಕಥೆಯಲ್ಲಿ ಶಕುನಿ ಸಂದೇಶ
- 'ಜನ ಸತ್ತಿಲ್ಲ' ಕಿರುನಾಟಕ ಪ್ರದರ್ಶನ

ಬೆಂಗಳೂರಿನಲ್ಲಿ ಶನಿವಾರ ಸಮುದಾಯ ಕರ್ನಾಟಕ ಯೋಜಿಸಿದ್ದ 'ಸಂವಿಧಾನದ ಉಳಿವಿಗಾಗಿ ಸಂಸ್ಕೃತಿಕ ಪ್ರತಿಶೋಧ' ಕಾರ್ಯಕ್ರಮದಲ್ಲಿ ಜನಾರ್ಧನ, ಆಗ್ರಹಾರ ಕೃಷ್ಣಮೂರ್ತಿ, ರಾಜಪ್ಪ ದಳವಾಯಿ, ಮೀನಾಕ್ಷಿ ಬಾಳಿ, ಮನೋಜ್ ವಾಮಂಜೂರು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

'ದುಬಾರಿ ಚಿಕಿತ್ಸಾ ವೆಚ್ಚಕ್ಕೆ ಕಡಿವಾಣ ಬೀಳಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಡ ರೋಗಿಗಳ ಸುಲಿಗೆ ನಡೆಸುತ್ತಿರುವ ಖಾಸಗಿ ಆಸ್ಪತ್ರೆಗಳ ವಿರುದ್ಧ ಸರ್ಕಾರವು ಬಿಗಿ ನಿಲುವು ತೆಗೆದುಕೊಂಡು, ದುಬಾರಿ ಚಿಕಿತ್ಸಾ ವೆಚ್ಚಕ್ಕೆ ಕಡಿವಾಣ ಹಾಕಬೇಕು' ಎಂದು ಸಾಹಿತಿ ಕೆ.ಮರುಳಸಿದ್ದಪ್ಪ ಹೇಳಿದರು.

ನಗರದಲ್ಲಿ ಶನಿವಾರ ವಸಂತ ಪ್ರಕಾಶನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವೈದ್ಯರಾದ ವಸುಂಧರಾ ಭೂಪತಿ ಅವರ ಸಂಪಾದಕತ್ವದಲ್ಲಿ ಹೊರತರಲಾಗಿರುವ ಆರೋಗ್ಯ ಚಿಂತನ ಮಾಲಿಕೆಯ 4ನೇ ಕಂತಿನ 12 ಕೃತಿಗಳ ಬಿಡುಗಡೆ ಮತ್ತು ಮನೋವೈದ್ಯ ಡಾ.ಸಿ.ಆರ್. ಚಂದ್ರಶೇಖರ್ ಅವರ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಖಾಸಗಿ ಆಸ್ಪತ್ರೆಗಳ ಧನದಾಹ ಕಂಡರೆ ದೇಶದ ಬಡವರಿಗೆ ಕಾಯಿಲೆಗಳೇ ಬರುವುದು ಬೇಡವೆಂದು ಪ್ರಾರ್ಥಿಸುವ ಸ್ಥಿತಿಯಿದೆ. ಬಡವರು ಬದುಕಬೇಕಾದರೆ ಸರ್ಕಾರಿ ಆಸ್ಪತ್ರೆಗಳ ಸಂಖ್ಯೆಗಳನ್ನು ಹೆಚ್ಚಿಸಬೇಕು. ಅವುಗಳ ಸ್ಥಿತಿ ಸುಧಾರಣೆ ಮಾಡಬೇಕು. ಬಡ ರೋಗಿಗಳಿಗೆ ಉತ್ತಮ ಆರೋಗ್ಯ ಸೇವೆ ದೊರೆಯದಿದ್ದರೆ ಪ್ರಜಾಪ್ರಭುತ್ವಕ್ಕೆ ಅರ್ಥವೇ ಇರುವುದಿಲ್ಲ' ಎಂದು ಹೇಳಿದರು.

'ಇಂದು ಜನರಲ್ಲಿ ಆರೋಗ್ಯದ ಬಗ್ಗೆ ಹೆಚ್ಚಿನ ಎಚ್ಚರ ಕಾಣಿಸುತ್ತಿದೆ. 'ಆರೋಗ್ಯ ನಮ್ಮ ಹಕ್ಕು' ಎಂದು ಜನರು ಪ್ರತಿಪಾದಿಸುತ್ತಿದ್ದಾರೆ' ಎಂದು ಹೇಳಿದರು.

'ದೇಶದ ಅಭಿವೃದ್ಧಿ ಎಂದರೆ ಹೆದ್ದಾರಿ, ಕ್ರೀಡಾಂಗಣ, ದೊಡ್ಡ ಕಟ್ಟಡ ಕಟ್ಟುವುದಲ್ಲ. ಉತ್ತಮ ಶಿಕ್ಷಣ, ಗುಣಮಟ್ಟದ ಆರೋಗ್ಯ ಸೇವೆ ದೊರೆತರೆ ಮಾತ್ರ ಅಭಿವೃದ್ಧಿಗೆ ಅರ್ಥ ಬರುತ್ತದೆ' ಎಂದರು.

ಸಾಹಿತಿ ಕೆ.ಮರುಳಸಿದ್ದಪ್ಪ ಅವರು ಆರೋಗ್ಯ ಚಿಂತನ ಮಾಲಿಕೆಯ 12 ಕೃತಿಗಳನ್ನು ಬಿಡುಗಡೆ ಮಾಡಿದರು. (ಎಡದಿಂದ) ವೈದ್ಯರಾದ ವಸುಂಧರಾ ಭೂಪತಿ, ನಾ.ಸೋಮೇಶ್ವರ, ಆರ್.ಕೆ.ಸರೋಜಾ, ಸಿ.ಆರ್.ಚಂದ್ರಶೇಖರ್, ಕೆ.ಎಸ್.ಪವಿತ್ರ, ಸುರೇಶ ವಿ. ಸಗರದ, ವೀಣಾ ಭಟ್ ಪಾಲ್ಗೊಂಡಿದ್ದರು. – ಪ್ರಜಾವಾಣಿ ಚಿತ್ರ

ಸ್ತ್ರೀರೋಗ ತಜ್ಞೆ ಡಾ.ವೀಣಾಭಟ್ ಮಾತನಾಡಿ, 'ಮನುಷ್ಯನ ದೇಹ, ರೋಗಗಳ ವಿರುದ್ಧ ನಿರಂತರ ಹೋರಾಟ ನಡೆಸುತ್ತಲೇ ಇರುತ್ತದೆ. ಜನ್ಮದಾತವಾಗಿ ಕೆಲವು ರೋಗಗಳು ಬಂದಿರುತ್ತವೆ. ಈ ವೇಗದ ಕಾಲದಲ್ಲಿ ಅವುಗಳಿಂದಲೂ ರಕ್ಷಣೆ ಮಾಡಿಕೊಳ್ಳಬೇಕಿದೆ' ಎಂದು ಹೇಳಿದರು.

ವಸುಂಧರಾ ಭೂಪತಿ ಮಾತನಾಡಿ, 'ವೈದ್ಯರ ಅನುಭವಗಳನ್ನು ಸಮಾಜದ ಎದುರು ಪ್ರಸ್ತುತಪಡಿಸುವ ಅಗತ್ಯವಿದೆ. ಕನ್ನಡ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸುವಲ್ಲಿ ವೈದ್ಯರ ಪಾತ್ರ ಪ್ರಮುಖವಾಗಿದೆ. ಹಿರಿಯರು ಹಾಗೂ ಕಿರಿಯ ಕೃತಿಗಳನ್ನು ಹೊರತರಲಾಗಿದೆ. ಎಲ್ಲ ವೈದ್ಯ ಲೇಖಕರೂ ಸರಳವಾದ ಭಾಷೆಯಲ್ಲಿ ಕೃತಿ ರಚಿಸಿದ್ದಾರೆ' ಎಂದು ಮಾಹಿತಿ ನೀಡಿದರು.

ಇದೇ ವೇಳೆ 'ಅಸ್ಮಿತೆ ಪ್ರಕಾಶನ' ಹೊರತಂದಿರುವ, ಕೆ. ಪ್ರಭಾಕರ್ ಅವರು ಕನ್ನಡಕ್ಕೆ ಅನುವಾದಿಸಿರುವ ರಾಸಿತ್ ಅಶೋಕನ್ ಅವರ 'ಧನ್ಯವಾದಗಳು ಗಿಲ್ಲನ್ ಬ್ಯಾರಿ ಸಿಂಡ್ರೋಮ್' ಕೃತಿಯನ್ನು ಗಣ್ಯರು ಬಿಡುಗಡೆ ಮಾಡಿದರು.

ಕಾರ್ಯಕ್ರಮದಲ್ಲಿ ವೈದ್ಯರಾದ ಆರ್. ಕೆ.ಸರೋಜಾ, ಎಚ್.ಜಿ.ಜಯಲಕ್ಷ್ಮಿ, ಸುರೇಶ್ ವಿ. ಸಗರದ, ಕೆ.ಎಸ್.ಪವಿತ್ರಾ ಹಾಜರಿದ್ದರು.

ಬಿಡುಗಡೆಯಾದ ಕೃತಿಗಳ ವಿವರ

ಕೃತಿಯ ಶೀರ್ಷಿಕೆ	ವೈದ್ಯ ಲೇಖಕರು
ಆರೋಗ್ಯ ಮತ್ತು ಜೀವನ	ಪಿ.ಎಸ್.ಶಂಕರ್
ಹರೆಯದವರ ಮನೋಲೋಕ	ಸಿ.ಆರ್.ಚಂದ್ರಶೇಖರ್
ಆರೋಗ್ಯ ಮತ್ತು ಅರಿವು	ವಸುಂಧರಾ ಭೂಪತಿ
ಚರ್ಮ ರೋಗಗಳು	ಬಿ.ಡಿ.ಸತ್ಯನಾರಾಯಣ
ಮಾನವ ದೇಹದ ಮಿಲಿಟರಿ ಪಡೆ	ನಾ.ಸೋಮೇಶ್ವರ
ಜೀವನ ಶೈಲಿಯ ಕಾಯಿಲೆಗಳು	ಸುರೇಶ ವಿ. ಸಗರದ
ಕಣ್ಣಿನ ಕಾಯಿಲೆಗಳು	ಎಚ್.ಎಂ.ರವೀಂದ್ರನಾಥ್
ಪ್ರಕೃತಿಯ ಅದ್ಭುತ ಸೃಷ್ಟಿಸ್ತ್ರಿ	ವೀಣಾ ಎನ್. ಸುಳ್ಯ
ಚಿತ್ತ ವೃತ್ತಿ	ಕೆ.ಎಸ್.ಪವಿತ್ರಾ
ಮಕ್ಕಳ ಮನ ಮೊಗ್ಗಿನ ಹೂವನ	ಅರುಣ ಯಡಿಯಾಳ್
ಸ್ವಯಂ ಪ್ರತಿರೋಧಕ ಕಾಯಿಲೆಗಳು	ವೀಣಾ ಅರ್ಹಂತ್
ಸಾಮಾನ್ಯ ಪ್ರಯೋಗಾಲಯ ಪರೀಕ್ಷೆಗಳು	ವಿನಯ ಶ್ರೀನಿವಾಸ್

ಸರ್ಜಾಪುರ ರಸ್ತೆಯಲ್ಲಿ ರಾಮ್‌ರಾಜ್ ನೂತನ ಮಳಿಗೆ ಆರಂಭ

ಬೆಂಗಳೂರು: ಧೋತಿ ಮತ್ತು ಶರ್ಟ್‌ಗಳಿಗೆ ಹೆಸರು ವಾಸಿಯಾದ ರಾಮರಾಜ್ ಕಾಟನ್ ಕಂಪನಿಯ ನೂತನ ಮಳಿಗೆ ಸರ್ಜಾಪುರ ಮುಖ್ಯ ರಸ್ತೆಯ ಚೆಂಬೇನಹಳ್ಳಿ, ಎಂಎನ್‌ಆರ್ ಕಾಂಪ್ಲೆಕ್ಸ್‌ನಲ್ಲಿ ಇತ್ತೀಚೆಗೆ ಆರಂಭಗೊಂಡಿದೆ.

ಮಳಿಗೆಯನ್ನು ಉದ್ಘಾಟಿಸಿದ ಚಾರ್ಟರ್ಡ್ ಅಕೌಂಟೆಂಟ್ ಪದಮ್ ಚಂದ್ ಕಿಂಚಾ ಅವರು ಎಂಎನ್‌ಆರ್ ಕಾಂಪ್ಲೆಕ್ಸ್ ಮಾಲೀಕ ಎಸ್. ಮಹೇಶ್ ಮತ್ತು ಎಂ. ಶ್ರೀನಿವಾಸ್ ಅವರಿಗೆ ರಾಮರಾಜ್ ಉತ್ಪನ್ನಗಳ ಮೊದಲ ಮಾರಾಟ ಮಾಡಿದರು.

ರಾಮ್‌ರಾಜ್ ಬಟ್ಟೆಗಳು ಸೌಂದರ್ಯ ಮತ್ತು ಸಂತೋಷದ ಸಂಕೇತವಾಗಿದ್ದು, ಗುಣಮಟ್ಟದ ಹತ್ತಿಯಿಂದ ಮಾಡಲ್ಪಟ್ಟಿವೆ. ಅಲ್ಲದೆ, ಸದಾ ಗೌರವ ಮತ್ತು ಸ್ಥಾನಮಾನ ತಂದುಕೊಡುವ ಸಾಮರ್ಥ್ಯವನ್ನು ಹೊಂದಿವೆ ಎಂದು ಕಂಪನಿ ತಿಳಿಸಿದೆ.

ಆನ್‌ಲೈನ್ ಸೇವೆ: ಬಿಳಿ ಬಟ್ಟೆಗಳ ಮಾರಾಟದಲ್ಲಿ ಕಂಪನಿ ದಕ್ಷಿಣ ಭಾರತದಲ್ಲಿ ಪ್ರಗತಿ ಸಾಧಿಸಿದ್ದಲ್ಲದೇ ಸಂಪ್ರದಾಯ ಮತ್ತು ಸಂಸ್ಕೃತಿ ಕಾಯ್ದುಕೊಳ್ಳುವುದರಲ್ಲಿ ಯಶಸ್ವಿಯಾಗಿದೆ. ತಮಿಳು ನಾಡಿನ ಪ್ರಮುಖ ನಗರಗಳಲ್ಲಿ ಮಳಿಗೆಗಳನ್ನು ಹೊಂದಿರುವ ರಾಮ ರಾಜ್ ಉತ್ತರ ಭಾರತ ಹಾಗೂ ಹೊರದೇಶಗಳ ಗ್ರಾಹಕರನ್ನು ತಲುಪಲು ಆನ್‌ಲೈನ್ ಸೇವೆ www.ramrajcotton.in ಅನ್ನು ಆರಂಭಿಸಿದೆ.

ಬ್ಯಾಕ್ಟೀರಿಯಾ ಮತ್ತು ವೈರಲ್ ಸೋಂಕುಗಳಿಂದ ರಕ್ಷಿಸುವ ವಿಶೇಷ ಧೋತಿಗಳನ್ನು ಪರಿಚಯಿಸಿರುವ ಕಂಪನಿ, ಫ್ಯಾನ್ಸಿ ಬಾರ್ಡರ್, ಸ್ಟೇನ್ ಗಾರ್ಡ್, ಸುಗಂಧಭರಿತ, ಸುಕ್ಕುಮುಕ್ತ, ಶುಭಮುಹೂರ್ತ, ಕಸೂತಿ, ಮಾಯಿಲ್ಕನ್, ಪಂಚಕಚ್ಚೆ, ರೇಷ್ಮೆ ಮುಂತಾದವುಗಳನ್ನು ಪರಿಚಯಿಸಿದೆ. ಲಿನಿನ್, ಬಾರ್ಡರ್ ಮ್ಯಾಚಿಂಗ್, ಬಿಳಿ ಮತ್ತು ಬಣ್ಣದ ಶರ್ಟ್‌ಗಳನ್ನು ಬಿಡುಗಡೆ ಮಾಡಿದೆ. ಯುವಕರ ಆಕರ್ಷಣೆಯ ಟೀ ಶರ್ಟ್‌ಗಳೂ ಕೂಡ ಲಭ್ಯ. ಒಳಉಡುಪುಗಳು, ಡಿಸೈನ್ ಬನಿಯನ್‌ಗಳು, ಧೋತಿ ಮತ್ತು ಇತರ ಉತ್ಪನ್ನಗಳು ಇಲ್ಲಿ ದೊರೆಯುತ್ತವೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ರಾಮರಾಜ್ ಕಾಟನ್ ಶೋರೂಂ ಅನ್ನು ಪದಮ್‌ಚಂದ್ ಕಿಂಚಾ ಉದ್ಘಾಟಿಸಿದರು.

ರಾಮಚಂದ್ರಸ್ವಾಮಿ ಬ್ರಹ್ಮರಥೋತ್ಸವ

ರಾಜರಾಜೇಶ್ವರಿನಗರ: ರಾಮೋಹಳ್ಳಿ ಕೆರೆಯ ದಡದಲ್ಲಿರುವ ರಾಮಚಂದ್ರಸ್ವಾಮಿ ದೇವರ ಬ್ರಹ್ಮರಥೋತ್ಸವ ಸಡಗರ ಸಂಭ್ರಮದಿಂದ ನಡೆಯಿತು.

ಜೈರಾಮ್, ಗೋವಿಂದಾ, ಗೋವಿಂದಾ ಘೋಷಣೆಯೊಂದಿಗೆ ಬ್ರಹ್ಮರಥೋತ್ಸವ ನೆರವೇರಿತು. ಬ್ರಹ್ಮರಥೋತ್ಸವ ಮತ್ತು ಜಾನಪದ ಜಾತ್ರೆಯ ಉತ್ಸವವನ್ನು ರತ್ನಮ್ಮ ವೆಂಕಟೇಶಪ್ಪ, ಸುವರ್ಣ ಸೋಮಶೇಖರ್, ಶಾಂತ ಚಂದ್ರಶೇಖರ್ ಕುಟುಂಬದವರು ನಡೆಸಿಕೊಟ್ಟರು. ವಿವಿಧ ಪೂಜಾ ಕೈಂಕರ್ಯಗಳು ಜರುಗಿದವು.

ಸಂಗೀತ ಉತ್ಸವ

ನಗರದ 'ಕೋಟೆ ಹೈಸ್ಕೂಲ್' ಆವರಣದಲ್ಲಿ ಶ್ರೀರಾಮಸೇವಾ ಮಂಡಳಿ ಮತ್ತು ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಜಂಟಿಯಾಗಿ ಶನಿವಾರ ಆಯೋಜಿಸಿದ್ದ 86ನೇ ಶ್ರೀರಾಮನವಮಿ ಸಂಗೀತೋತ್ಸವ-2024ರಲ್ಲಿ ವಿಶಾಖಾ ಹರಿ ಅವರು ಹರಿದಾಸ ವಿಜಯ ಹರಿಕಥೆ ಪ್ರಸ್ತುತಪಡಿಸಿದರು

ನಗರದಲ್ಲಿ ಇಂದು

ಹುತಾತ್ಮರ ದಿನಾಚರಣೆ ಹಾಗೂ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಧ್ವಜ ದಿನಾಚರಣೆ,

ಕಮಲ್ ಪಂತ್

ಅಗ್ನಿಶಾಮಕ ಸೇವಾ ಸಪ್ತಾಹ: ಮುಖ್ಯ ಅತಿಥಿ: ಕಮಲ್ ಪಂತ್, ಉಪಸ್ಥಿತಿ: ಎಂ.ನಂಜುಂಡಸ್ವಾಮಿ, ರವಿ ಡಿ. ಚನ್ನಣ್ಣನವರ್, ಟಿ.ಎನ್. ಶಿವಶಂಕರ, ಆಯೋಜನೆ: ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 9.30

ಜ್ಞಾನಾಕ್ಷೀ ರಾಜರಾಜೇಶ್ವರಿ ದೇವಸ್ಥಾನದ ವಸಂತ ನವರಾತ್ರಿ ಬ್ರಹ್ಮೋತ್ಸವ: ಇಂದ್ರ ವಿಮಾನ ಉತ್ಸವ, ಕಾಮಧೇನು ವಾಹನ ಉತ್ಸವ, ಆಯೋಜನೆ ಮತ್ತು ಸ್ಥಳ: ಜ್ಞಾನಾಕ್ಷೀ ರಾಜರಾಜೇಶ್ವರಿ ದೇವಸ್ಥಾನ, ರಾಜರಾಜೇಶ್ವರಿನಗರ, ಬೆಳಿಗ್ಗೆ 9.30

ಬೃಹತ್ ಉಚಿತ ಆರೋಗ್ಯ ತಪಾಸಣೆ ಶಿಬಿರದ ಉದ್ಘಾಟನೆ ಸಮಾರಂಭ: ಸಾನ್ನಿಧ್ಯ: ಸೌಮ್ಯನಾಥ ಸ್ವಾಮೀಜಿ, ಅಧ್ಯಕ್ಷತೆ: ಸುದರ್ಶನ್ ಚೆನ್ನಂಗಿಹಳ್ಳಿ, ಮುಖ್ಯ ಅತಿಥಿಗಳು: ರವಿ ಪಿ., ರಮೇಶ್ ನಾಯಕ್, ಬಿ.ಕೆ. ಪವಿತ್ರ, ರಂಜಿತ್ ಎಚ್. ಅಶ್ವತ್, ಟಿ.ಆರ್. ಚಂದ್ರಶೇಖರ್, ಡಾ.ಕೇಶವಮೂರ್ತಿ, ಡಾ.ಗೋಪಿನಾಥ್ ರಾಮಯ್ಯ, ಆಯೋಜನೆ: ಒಕ್ಕಲಿಗ ಯುವ ಬ್ರಿಗೇಡ್ ಹಾಗೂ ಎನ್‌ಆರ್‌ಐ ಒಕ್ಕಲಿಗರ ಬ್ರಿಗೇಡ್, ಸ್ಥಳ: ಬಿಲ್ವ ಮಲ್ಟಿ-ಸ್ಪೆಷಾಲಿಟಿ ಆಸ್ಪತ್ರೆ, ವಿನಾಯಕ ಸರ್ಕಲ್ ಹತ್ತಿರ, ಪ್ಯಾಲೆಸ್ ಗುಟ್ಟಹಳ್ಳಿ, ಬೆಳಿಗ್ಗೆ 10

ಯುಗಾದಿ ಸಂಭ್ರಮ: ಪಂಚಾಂಗ ಶ್ರವಣ: ಸುದರ್ಶನ ಶರ್ಮ, ಕರ್ನಾಟಕ ಸಂಗೀತ ಕಛೇರಿ: ಗಾಯನ: ಅರ್ಚನಾ ಭೋಜ್, ಅಶ್ವಿನಿ ಸತೀಶ್, ಶಿಲ್ಪಾ ಶಶಿಧರ್, ಪಿಟೀಲು: ಜ್ಯೋತ್ಸ್ನಾ ಮಂಜುನಾಥ್, ಮೃದಂಗ: ಜಿ.ಎಸ್. ನಾಗರಾಜ್, ಖಂಜಿರ: ಎಎಸ್‌ಎನ್ ಸ್ವಾಮಿ, ಭರತನಾಟ್ಯ: ಪದ್ಮಿನಿ ಉಪಾಧ್ಯ, ಐಶ್ವರ್ಯ ನಿತ್ಯಾನಂದ, ಸ್ಮೃತಿ ವಿಶ್ವನಾಥ್, ಆಯೋಜನೆ ಹಾಗೂ ಸ್ಥಳ: ಖಿಂಚ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್ ಕೋರ್ಸ್ ರಸ್ತೆ, ಬೆಳಿಗ್ಗೆ 10

ರುಕ್ಮಿಣಿ ರಘುರಾಮ್ ಅವರ 'ರಾಮಾಯಣ ಪರೀಕ್ಷಣಂ' ಪುಸ್ತಕ ಬಿಡುಗಡೆ: ಜಗದೀಶ ಶರ್ಮಾ ಸಂಪ, ಪುಸ್ತಕದ ಬಗ್ಗೆ ಮಾತು: ಬಿ.ಆರ್. ಗುರುಪ್ರಸಾದ್, ಅಧ್ಯಕ್ಷತೆ: ಪ್ರೊ.ಜಿ. ಅಶ್ವತ್ಥನಾರಾಯಣ, ಆಯೋಜನೆ: ಕದಂಬ ಪ್ರಕಾಶನ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ.ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

ವರನಟ ಡಾ.ರಾಜ್‌ಕುಮಾರ್ ಸ್ಮರಣೆ, ಯುಗಾದಿ ಕವಿಗೋಷ್ಠಿ, ಗೀತ ಗಾಯನ, ಪ್ರಶಸ್ತಿ ಪ್ರದಾನ: ಜರಗನಹಳ್ಳಿ ಸದಾಶಿವಯ್ಯ, ಅಧ್ಯಕ್ಷತೆ: ವಿ.ರೇಣುಕಾ ಪ್ರಸನ್ನ, ಅತಿಥಿ: ಬಿ.ಆರ್. ಮಲ್ಲಿಕಾರ್ಜುನ್, 'ಗಾಯಕ ಎನ್. ಯಲ್ಲಪ್ಪ ಸ್ಮಾರಕ ಪ್ರಶಸ್ತಿ' ಪುರಸ್ಕೃತ: ಶರತ್ ಪಿ. ಕಾಳಿಂಗರಾವ್, 'ಸಮ್ಮಿಲನ ಡಾ.ರಾಜ್ ಅಭಿಮಾನಿ ಸಮ್ಮಾನ': ಶಂಕರ್ ಬಸಪ್ಪ ಮಾವಳ್ಳಿ, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

'ಸಂವಿಧಾನ ಸಾಥಿ' ನೃತ್ಯ ಕಾರ್ಯಕ್ರಮ: ಆಯೋಜನೆ: ಸಹಚಾರಿ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಬೆಳಿಗ್ಗೆ 11

'ಬದುಕಿನ ಬೆರಗು, ನಮ್ಮ ಕಣ್ಣಲ್ಲಿ ಸುಜ್ಞಾನಮೂರ್ತಿ' ಪುಸ್ತಕ ಬಿಡುಗಡೆ: ಬರಗೂರು ರಾಮಚಂದ್ರಪ್ಪ,

ಬರಗೂರು ರಾಮಚಂದ್ರಪ್ಪ

ಪುಸ್ತಕದ ಬಗ್ಗೆ ಮಾತು: ರಾಜಪ್ಪ ದಳವಾಯಿ, ಉಪಸ್ಥಿತಿ: ಪಲ್ಲವ ವೆಂಕಟೇಶ್, ಪ್ರದೀಪ್ ಮಾಲ್ಗುಡಿ, ಸುಜ್ಞಾನಮೂರ್ತಿ, ಆಯೋಜನೆ: ಪಲ್ಲವ ಪ್ರಕಾಶನ, ಸ್ಥಳ: ಬಿ.ಎಂ.ಶ್ರೀ.ಪ್ರತಿಷ್ಠಾನ, ಎನ್.ಆರ್.ಕಾ

ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ 4 ದಶಕ ಕ್ಯಾಂಟೀನ್ ನಿರ್ವಹಣೆಗೆ ಮೆಚ್ಚುಗೆ

ಕಾರಂತರ ಕ್ಯಾಂಟೀನ್ ಅವಧಿ ಅಂತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ಕು ದಶಕಗಳಿಂದ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿನ ಕ್ಯಾಂಟೀನ್ ನಿರ್ವಹಿಸುತ್ತಿದ್ದ ಎ.ಪಿ. ಕಾರಂತ್ ಅವರ ಗುತ್ತಿಗೆ ಅವಧಿ ಇದೇ ತಿಂಗಳು ಮುಕ್ತಾಯವಾಗಲಿದೆ. ಸಾಂಸ್ಕೃತಿಕ ಜಗತ್ತಿನೊಂದಿಗೆ ನಂಟನ್ನು ಹೊಂದಿದ್ದ ಅವರು ಕ್ಯಾಂಟೀನ್‌ನಿಂದ ಹೊರಗೆ ಹೋಗುತ್ತಿರುವುದರ ಬಗ್ಗೆ ಕಲಾವಿದರು, ಸಾಹಿತಿಗಳು, ರಂಗಕರ್ಮಿಗಳು ಸೇರಿ ವಿವಿಧ ಕ್ಷೇತ್ರದವರು ಬೇಸರ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಕ್ಯಾಂಟೀನ್ ಹಾಗೂ ಕಾರಂತ್ ಅವರ ಜತೆಗಿನ ನಂಟಿನ ಬಗ್ಗೆ ಹಲವರು ಬರೆದುಕೊಂಡಿದ್ದಾರೆ. ತಮ್ಮ ಕಾರ್ಯಾವಧಿ ಮುಕ್ತಾಯದ ಬಗ್ಗೆ ಕಾರಂತ್ ಅವರು ಕ್ಯಾಂಟೀನ್ ಮುಂಭಾಗ ಫ್ಲೆಕ್ಸ್ ಹಾಕಿದ್ದು, 'ಕಲಾಕ್ಷೇತ್ರದ ಅಂಗಳದಲ್ಲಿ ಕಳೆದ ನಾಲ್ಕು ದಶಕಗಳಿಂದ ನಮ್ಮೊಡನಾಡಿದ ಸಾಹಿತಿ, ಕಲಾವಿದರು, ಸಂಘಟಕರು, ರಂಗಕರ್ಮಿಗಳಿಗೆ ಪ್ರೀತಿಪೂರ್ವಕ ಧನ್ಯವಾದಗಳು. ಇದೇ ತಿಂಗಳು 26ರಿಂದ ನಮ್ಮ ಸೇವೆ ಅಂತ್ಯವಾಗಲಿದೆ. ಸುಂದರ ನೆನಪುಗಳನ್ನು ಹೊತ್ತು ಹೊರಟಿದ್ದೇನೆ' ಎಂದು ತಿಳಿಸಿದ್ದಾರೆ.

ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿನ ಕ್ಯಾಂಟೀನ್‌ನಲ್ಲಿ ಎ.ಪಿ. ಕಾರಂತ್

ಕ್ಯಾಂಟೀನ್ ನಿರ್ವಹಣೆಗೆ ಸಂಬಂಧಿಸಿದಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕಳೆದ ಜನವರಿಯಲ್ಲಿ ಟೆಂಡರ್ ಪ್ರಕ್ರಿಯೆ ನಡೆಸಿದೆ. ಕ್ಯಾಂಟೀನ್ ಬಾಡಿಗೆಯನ್ನು ಹಲವು ಪಟ್ಟು ಹೆಚ್ಚಿಸಿದ್ದರಿಂದ ಕಾರಂತ್ ಅವರು ಟೆಂಡರ್‌ನಲ್ಲಿ ಪಾಲ್ಗೊಳ್ಳಲಿಲ್ಲ. ಜಿಎಸ್‌ಟಿ ಸಹಿತ ₹ 59 ಸಾವಿರ ಬಾಡಿಗೆ ನಿಗದಿ ಮಾಡಲಾಗಿದೆ. ಸದ್ಯ ₹ 7 ಸಾವಿರ ಬಾಡಿಗೆಯನ್ನು ಕಾರಂತ್ ಅವರು ಪಾವತಿಸುತ್ತಿದ್ದರು.

'ಕಾರಂತರ ಕ್ಯಾಂಟೀನ್ ಕೇವಲ ಕಾಫಿ-ತಿಂಡಿ-ಊಟದ ತಾಣವಲ್ಲ. ನಾವು ಹೇಳಿದ, ಕೇಳಿದ ಎಲ್ಲವನ್ನೂ ವಿಲೇವಾರಿ ಮಾಡುವ ಒಂದು ಸಾಂಸ್ಕೃತಿಕ ಕೇಂದ್ರ ಅದಾಗಿತ್ತು. ಕಾರಂತರು ಕೇವಲ ಗಲ್ಲದ ಮೇಲೆ ಕುಳಿತು ವ್ಯಾಪಾರ ಮಾಡಿದವರಲ್ಲ. ಅವರು ಸಂಸ್ಕೃತಿ ಇಲಾಖೆಯ ಎಲ್ಲ ನಿರ್ದೇಶಕರ ಜತೆಗೆ ಆತ್ಮೀಯ ಗೆಳೆತನ ಇಟ್ಟುಕೊಂಡಿದ್ದರು. ಲೀಲಾದೇವಿ ಪ್ರಸಾದ್, ಲಲಿತಾ ನಾಯಕ್, ಉಮಾಶ್ರೀ ಮುಂತಾದ ಸಂಸ್ಕೃತಿ ಸಚಿವರು ಅವರ ಕ್ಯಾಂಟೀನ್ ಕಾಫಿ ಕುಡಿಯದೆ ಮುಂದುವರೆದವರಲ್ಲ. ಅವರು ಎಷ್ಟೋ ಸಾರಿ ಹಲವು ರಂಗ ತಂಡಗಳ ಕಷ್ಟಗಳಿಗೆ ನೆರವಾಗಿದ್ದಾರೆ' ಎಂದು ರಂಗಕರ್ಮಿ ಗುಂಡಣ್ಣ ಚಿಕ್ಕಮಗಳೂರು ಸ್ಮರಿಸಿಕೊಂಡಿದ್ದಾರೆ.

'ಕಾರಂತರು ಸಾಹಿತಿಗಳು, ಕಲಾವಿದರ ಒಡನಾಡಿಯಾಗಿದ್ದರು. ಅನೇಕ ಕಲಾ ತಂಡಗಳು ಅವರನ್ನು ಅಲ್ಲಿಯೇ ಉಳಿಸಿಕೊಳ್ಳುವ ಪ್ರಯತ್ನ ಮಾಡಿದರೂ ಸರ್ಕಾರದ ವ್ಯವಸ್ಥೆಯ ಮುಂದೆ ಏನೂ ಮಾಡಲು ಸಾಧ್ಯವಾಗಿಲ್ಲ. ಎಲ್ಲ ತಂಡಗಳ ಕಲಾವಿದರ ಪರವಾಗಿ ಅವರ ಸೇವೆಗೆ ಧನ್ಯವಾದ' ಎಂದು ಭಾಗವತರು ಸಾಂಸ್ಕೃತಿಕ ಸಂಘಟನೆಯ ಅಧ್ಯಕ್ಷ ಕೆ. ರೇವಣ್ಣ ತಿಳಿಸಿದ್ದಾರೆ.

'ಕಾರಂತರ ಗುತ್ತಿಗೆ ಅವಧಿ ಅಂತ್ಯವಾಗುತ್ತಿರುವುದು ನೋವಿನ ಸಂಗತಿ' ಎಂದು ದಾವಣಗೆರೆಯ ಶ್ರೀಗುರು ವಾದ್ಯವೃಂದದ ಅಧ್ಯಕ್ಷ ಚಿಂದೋಡಿ ಶಂಭುಲಿಂಗಪ್ಪ ಬೇಸರ ವ್ಯಕ್ತಪಡಿಸಿದ್ದಾರೆ.

'ಬಾಡಿಗೆ ಹಣವನ್ನು ಹಲವು ಪಟ್ಟು ಹೆಚ್ಚಿಸಿದ್ದರಿಂದ ಟೆಂಡರ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲಿಲ್ಲ. ಇತ್ತೀಚೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಕಲಾ ಚಟುವಟಿಕೆಗಳೂ ಕಡಿಮೆ ಆಗಿವೆ. ನಾಲ್ಕು ದಶಕದಿಂದ ಕ್ಯಾಂಟೀನ್ ನಡೆಸಿಕೊಂಡು ಬಂದಿದ್ದು, ಇದನ್ನು ವಾಣಿಜ್ಯದ ದೃಷ್ಟಿಯಲ್ಲಿ ನೋಡಿರಲಿಲ್ಲ' ಎಂದು ಕಾರಂತ್ ತಿಳಿಸಿದರು.

'ದಾಸಿಮಯ್ಯನ ಬದುಕೇ ಮಾದರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೇಡರದಾಸಿಮಯ್ಯ ಅವರು ಬದುಕನ್ನು ಕಾಯಕದೊಂದಿಗೆ ಅಧ್ಯಾತ್ಮಿಕತೆಯ ನೆಲೆಗಟ್ಟಿನಲ್ಲಿ ಕಟ್ಟಿಕೊಟ್ಟಿದ್ದರು' ಎಂದು ಕನ್ನಡ ಸಂಘರ್ಷ ಸಮಿತಿ ಅಧ್ಯಕ್ಷ ನಾಗರಾಜಸ್ವಾಮಿ ಹೇಳಿದರು.

ವಚನಜ್ಯೋತಿ ಬಳಗ, ಆಯೋಜಿಸಿದ್ದ ಜೇಡರದಾಸಿಮಯ್ಯ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, 'ಜೇಡರದಾಸಿಮಯ್ಯ ಅವರು ಮೌಲ್ಯಯುತ ಬದುಕಿನ ಬಗ್ಗೆ ತಿಳಿಸಿ ಮಾದರಿ ಆಗಿದ್ದರು' ಎಂದು ಬಣ್ಣಿಸಿದರು.

ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಮಾತನಾಡಿ, ಆದ್ಯ ವಚನಕಾರ ಎಂದು ಬಣ್ಣಿತರಾಗಿರುವ ಜೇಡರದಾಸಿಮಯ್ಯ ಅವರು ಅತ್ಯಂತ ಆದರ್ಶವಾಗಿ ಬದುಕಿದ್ದರು ಎಂದು ತಿಳಿಸಿದರು.

'ಜೇಡರದಾಸಿಮಯ್ಯನವರು ಕನ್ನಡಕ್ಕೆ ನೀಡಿದ ಕೊಡುಗೆ' ವಿಚಾರ ಸಂಕಿರಣದಲ್ಲಿ ಬನಹಟ್ಟಿಯ ಶಕುಂತಲ ಬಾಗಲಕೋಟ ಅವರು ನೇಕಾರರ ಶಿವ ಜೇಡರದಾಸಿಮಯ್ಯ ಕುರಿತು, ಅಂಕಣಗಾರ ಪ್ರಭು ಇಸುವನಹಳ್ಳಿಯವರು ಸೂಳ್ನೂಡಿಕಾರ ಜೇಡರದಾಸಿಮಯ್ಯ ಕುರಿತು, ಕವಿ ಗುಂಡೀಗೆರೆ ವಿಶ್ವನಾಥ್ ರೂಪಕ ಚಕ್ರವರ್ತಿ ಜೇಡರದಾಸಿಮಯ್ಯ ಕುರಿತು ವಿಚಾರಗಳನ್ನು ಮಂಡಿಸಿದರು.

ವಚನಜ್ಯೋತಿ ಬಳಗವು ಆಯೋಜಿಸಿದ್ದ ಜೇಡರದಾಸಿಮಯ್ಯ ಜಯಂತಿಯಲ್ಲಿ ಬಳಗದ ಅಧ್ಯಕ್ಷ ಪಿನಾಕಪಾಣಿ, ಕನ್ನಡ ಸಂಘರ್ಷ ಸಮಿತಿ ಅಧ್ಯಕ್ಷ ನಾಗರಾಜಸ್ವಾಮಿ, ಬಳಗದ ಪ್ರಧಾನ ಕಾರ್ಯದರ್ಶಿ ಪ್ರಭು ಇಸುವನಹಳ್ಳಿ, ಕಲಾವಿದೆ ಶಕುಂತಲ ಬಾಗಲಕೋಟ ಪಾಲ್ಗೊಂಡಿದ್ದರು.

ಬನಹಟ್ಟಿಯ ಶಕುಂತಲ ಬಾಗಲಕೋಟ್, ಪ್ರಭು ಇಸುವನಹಳ್ಳಿ, ಗುಂಡೀಗೆರೆ ವಿಶ್ವನಾಥ್ ಅವರು ವಿಚಾರ ಮಂಡಿಸಿದರು. ಮೀನಾಕ್ಷಿ ಮೇಟಿ, ಟಿ.ಎಂ. ಜಾನಕಿ, ಚಿ. ದಿಶಾ ಹಾಗೂ ವಚನ ಕಲಿಕೆಯ ವಿದ್ಯಾರ್ಥಿಗಳು ಜೇಡರದಾಸಿಮಯ್ಯ ಅವರ ವಚನಗಳ ಗಾಯನ ಮಾಡಿದರು.

ನಿಧನ ವಾರ್ತೆ

ಚಿಕ್ಕತಿಮ್ಮಪ್ಪ

ಹೆಸರಘಟ್ಟ: ದಾಸನಪುರ ಹೋಬಳಿ ಹುಸ್ಕೂರು ಗ್ರಾಮದ ಚಿಕ್ಕತಿಮ್ಮಪ್ಪ (75) ಅವರು ಶನಿವಾರ ನಿಧನರಾದರು.

ಅವರು ಅನಾರೋಗ್ಯದಿಂದ ಬಳಲುತ್ತಿದ್ದರು. ಮೃತರಿಗೆ ಪತ್ನಿ, ಮೂವರು ಪುತ್ರ ಇದ್ದಾರೆ.

ಭಾನುವಾರ ಚಿಕ್ಕತಿಮ್ಮಪ್ಪ ಅವರ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

'ತಂತ್ರಜ್ಞಾನ ಜನಾಂಗದ ಏಳ್ಗೆ, ಪ್ರಕೃತಿಗೆ ಪೂರಕವಾಗಿರಲಿ'

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ಭೂಕಂಪದಂತಹ ಪ್ರಾಕೃತಿಕ ವಿಕೋಪಗಳ ಬಗ್ಗೆ ನಿಖರ ಮಾಹಿತಿ ನೀಡುವ ಸೂಪರ್ ಕಂಪ್ಯೂಟರ್‌ಗಳು ದೇಶದ ಅರ್ಥ ವ್ಯವಸ್ಥೆಯಲ್ಲಿ ಬಹುದೊಡ್ಡ ಪಾತ್ರ ವಹಿಸುತ್ತಿವೆ' ಎಂದು ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್ ಸಂಸ್ಥೆ ಕಾರ್ಯ ನಿರ್ವಾಹಕ ಎಸ್.ಡಿ.ಸುದರ್ಶನ್ ಹೇಳಿದರು.

ಮಲ್ಲತ್ತಹಳ್ಳಿ ಬಳಿಯ ಅಂಬೇಡ್ಕರ್ ತಾಂತ್ರಿಕ ಮಹಾ ವಿದ್ಯಾಲಯದಲ್ಲಿ ಆಯೋಜಿಸಿದ್ದ ಬಿ.ಆರ್. ಅಂಬೇಡ್ಕರ್ ಅವರ 133ನೇ ಜಯಂತ್ಯುತ್ಸವ ಹಾಗೂ 8ನೇ ರಾಷ್ಟ್ರೀಯ ತಾಂತ್ರಿಕ ಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ಅಭಿವೃದ್ಧಿ ಹಾಗೂ ಸುರಕ್ಷತೆಗೆ ಕಂಪ್ಯೂಟರ್ ಕ್ಷೇತ್ರ ಗಣನೀಯ ಕೊಡುಗೆ ನೀಡಿದೆ. ತಂತ್ರಜ್ಞಾನವು ಎಂದಿಗೂ ಮಾನವ ಜನಾಂಗದ ಏಳ್ಗೆಗೆ ಹಾಗೂ ಪ್ರಕೃತಿಗೆ ಪೂರಕವಾಗಿರಬೇಕು. ಈ ನಿಟ್ಟಿನಲ್ಲಿ ಸಂಶೋಧನೆಗಳು ವಿಪ್ಲವಗಳು ಹಾಗೂ ವಿಭಜನೆಗೆ ಅವಕಾಶ ನೀಡದೆ ಸಮಗ್ರತೆಯನ್ನು ಕಾಪಾಡುವಂತಿರಬೇಕು ಎಂದು ಅಭಿಪ್ರಾಯಪಟ್ಟರು.

ಭಾರತೀಯ ಸಮಾಜವು ಇಂದಿಗೂ ಅನೇಕ ಕ್ರೂರ ಆಚರಣೆಗಳಿಗೆ ಸಾಕ್ಷಿಯಾಗಿದೆ. ಜಾತೀವಾದ ಇಂದಿಗೂ ಬಲವಾಗಿ ಬೇರೂರಿದೆ ಎಂದು ಪಿವಿಪಿ ಟ್ರಸ್ಟ್ ಖಜಾಂಚಿ ಎಂ.ಮಹಾದೇವ್ ಬೇಸರ ವ್ಯಕ್ತಪಡಿಸಿದರು.

ಭಾರತೀಯ ಸಮಾಜವನ್ನು ಅಂಬೇಡ್ಕರ್ ಅತ್ಯಂತ ಸೂಕ್ಷ್ಮವಾಗಿ ಅಧ್ಯಯನ ಮಾಡಿದ್ದರು. ಹಾಗಾಗಿ, ಸರ್ವರಿಗೂ ಸಲ್ಲುವ, ಸರ್ವರನ್ನೂ ಒಳಗೊಳ್ಳುವ ಸಂವಿಧಾನ ರೂಪಿಸಲು ಸಾಧ್ಯವಾಯಿತು. ಸಂವಿಧಾನದ ಪೀಠಿಕೆಯೇ ಸಂವಿಧಾನದ ಸಾರವನ್ನು ಪ್ರತಿಬಿಂಬಿಸುವಂತಿದೆ. ಪ್ರತಿಯೊಬ್ಬರೂ ಈ ಪೀಠಿಕೆಯ ಧ್ಯೇಯೋದ್ದೇಶಗಳನ್ನು ದೈನಂದಿನ ಜೀವನದಲ್ಲಿ ರೂಢಿಸಿಕೊಳ್ಳಬೇಕು ಎಂದರು.

'ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ಅಮೋಘ ಸಂಶೋಧನೆಯಾಗಿದೆ. ಸ್ವಯಂ ನಿರ್ಧಾರ ಸಾಮರ್ಥ್ಯ ಹೊಂದಿರುವ ಎಐ ತಂತ್ರಜ್ಞಾನಾಧಾರಿತ ರೋಬೋಗಳು ವೈದ್ಯಕೀಯ ಕ್ಷೇತ್ರದಲ್ಲಿ ಸಹಾಯಕಾರಿಯಾಗಿವೆ. ದುರ್ಬಳಕೆಯಾದರೆ ಮಾನವ ಜನಾಂಗಕ್ಕೆ ಅತ್ಯಂತ ಮಾರಕವಾಗುವ ಸಾಧ್ಯತೆಯೂ ನಿಚ್ಚಳವಾಗಿದೆ' ಎಂದು ಪಿವಿಪಿ ಟ್ರಸ್ಟಿನ ಕಾರ್ಯದರ್ಶಿ ಶಿವಮಲ್ಲು ಆತಂಕ ವ್ಯಕ್ತಪಡಿಸಿದರು.

ಪಿಇಎಸ್‌ನಲ್ಲಿ 'ಐಡಿಯಾಥಾನ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಇಎಸ್ ಪಾಲಿಟೆಕ್ನಿಕ್ ಶಿಕ್ಷಣ ಸಂಸ್ಥೆಯು ನೀರಿನ ಸಮರ್ಥ ನಿರ್ವಹಣೆಗೆ ಸಂಬಂಧಿಸಿದಂತೆ ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ 'ಐಡಿಯಾಥಾನ್'ನಲ್ಲಿ 120ಕ್ಕೂ ಅಧಿಕ ವಿದ್ಯಾರ್ಥಿಗಳು ವಿನೂತನ ಆಲೋಚನೆಗಳ ಮೂಲಕ ನಗರದ ನೀರಿನ ಸಮಸ್ಯೆ ಪರಿಹರಿಸುವ ಪ್ರಯತ್ನ ಮಾಡಿದರು.

ಈ ಕಾರ್ಯಕ್ರಮದಲ್ಲಿ ವಿವಿಧ ಪಾಲಿಟೆಕ್ನಿಕ್ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪಿಇಎಸ್ ಪಾಲಿಟೆಕ್ನಿಕ್‌ನ 4ನೇ ಸೆಮಿಸ್ಟರ್ ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿಗಳಾದ ಪುಣ್ಯ ಚಂದ್ರಶೇಖರ್, ಮನಸ್ವಿನಿ ಮತ್ತು ಸಾಯಿಕೃಷ್ಣ ಶರ್ಮಾ ಅವರು ಪ್ರಥಮ ಬಹುಮಾನ ಪಡೆದರು. ಅವರು ನೀರಿನ ಸೋರಿಕೆ ಪತ್ತೆ ಹಚ್ಚುವ ಹಾಗೂ ಅದನ್ನು ತಡೆಯುವ ಐಒಟಿ ತಂತ್ರಜ್ಞಾನ ಆಧಾರಿತ ನಿರ್ವಹಣಾ ವ್ಯವಸ್ಥೆಯ ಪರಿಕಲ್ಪನೆಯನ್ನು ಪ್ರಸ್ತುತಪಡಿಸಿದ್ದರು.

'ಐಡಿಯಾಥಾನ್'ನಲ್ಲಿ ನೀರಿನ ಸಮಸ್ಯೆ ಪರಿಹರಿಸುವ ಮಾರ್ಗೋಪಾಯಗಳನ್ನು ವಿದ್ಯಾರ್ಥಿಗಳು ನಿರ್ಣಾಯಕರಿಗೆ ವಿವರಿಸಿದರು

ಪಿಇಎಸ್ ಪಾಲಿಟೆಕ್ನಿಕ್‌ನ 4ನೇ ಸೆಮಿಸ್ಟರ್‌ನ ಮೆಕ್ಯಾನಿಕಲ್ ಎಂಜಿನಿಯರಿಂಗ್‌ನ ನಿತೇಶ್ ಕುಮಾರ್, ಸುಮನ್ ಕೆ.ಟಿ. ಮತ್ತು ಮನೋಜ್ ಕುಮಾರ್ ಅವರು ಅಪಾರ್ಟ್‌ಮೆಂಟ್ ಸಂಕೀರ್ಣದಲ್ಲಿ ಉಪ ರಸ್ತೆಗಳು ಮತ್ತು ಆಂತರಿಕ ರಸ್ತೆಗಳಿಗಾಗಿ ಪರ್ವಿಯಸ್ ಕಾಂಕ್ರೀಟ್‌ನ ಕಲ್ಪನೆ ರೂಪಿಸಿದ್ದರು. ಅವರು ಎರಡನೇ ಬಹುಮಾನ ಪಡೆದರು.

ಈಸ್ಟ್ ವೆಸ್ಟ್ ಪಾಲಿಟೆಕ್ನಿಕ್‌ನ ಸಿವಿಲ್ ಎಂಜಿನಿಯರಿಂಗ್‌ನ ಯಶವಂತ್, ಬಾಲಾಜಿ ಮತ್ತು ಧನುಷ್ ಅವರು ಅಂತರ್ಜಲ ಮರುಪೂರಣ ವ್ಯವಸ್ಥೆಯ ಮಾದರಿಗೆ ಮೂರನೇ ಬಹುಮಾನ ಪಡೆದರು. ಈ ಬಹುಮಾನವು ಕ್ರಮವಾಗಿ ₹ 15 ಸಾವಿರ, ₹ 12 ಸಾವಿರ ಹಾಗೂ ₹ 9 ಸಾವಿರ ನಗದು ಒಳಗೊಂಡಿವೆ.

ಹನುಮಂತನಗರ ಪಿಇಎಸ್ ಕಾಲೇಜಿನ ನಿರ್ದೇಶಕ ಪ್ರೊ.ಎಂ.ವಿ. ಸತ್ಯನಾರಾಯಣ ಅವರು ವಿಜೇತರಿಗೆ ನಗದು ಬಹುಮಾನವನ್ನು ವಿತರಿಸಿದರು.

ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್.ದೊರೆಸ್ವಾಮಿ ಅವರು ವಿಜೇತರ ಪರಿಕಲ್ಪನೆಯನ್ನು ಶ್ಲಾಘಿಸಿದರು.

HOSMAT HOSPITALS - BANGALORE

Orthopaedics, Accidents, Injuries, Spine/Neuro & Plastic Surgery Hospital

HOSMAT HOSPITALS Your Life Matters

HOSMAT Hospitals, established in 1993, is one of the first major private trauma and orthopaedic hospitals in India, and the first in Bengaluru. Dr Thomas Chandy, Orthopaedic Surgeon, started the hospital after years of specialised orthopaedic training, and as a consultant. He was running a successful orthopaedic practice, as Chief of Orthopaedics in Tulsa Oklahoma USA. The original HOSMAT Hospital was founded with high American standards, which the organization strives to maintain to this day. With 3 Orthopaedic hospitals in Bangalore today, HOSMAT is one the largest, and one of the best equipped, group of Orthopaedic hospitals in India, having 550 beds and 28 operation theatres. In 30 years, HOSMAT has treated over 16 lakh-satisfied patients. It is one of the premier Orthopaedic specialities hospitals, with knee/hip/shoulder replacement, Arthroscopy (Key Hole Surgery) - Knee & Shoulder, Ligaments. Spine, Hand, Children Orthopaedics. All orthopaedic specialties and other departments as below

THE WEEK 10-12-2023
National Survey Best Hospitals
Specialisation - Orthopaedics
2nd in Bengaluru
7th in South India
18th Best Hospital in India

HEALTH CARE SURVEY BEST HOSPITALS NATIONAL

HOSMAT Hospital at Sadashivanagar
is now fully open

Neuro Surgery, Spine (Back & Neck) & Brain

3rd Generation latest Cuvis Robotic Knee Replacement

Our Expertise
• Orthopaedics • Accident & Injuries • Complex Fractures • Joint Replacement • Arthroscopy & Ligaments • Neurology & Brain
• Spine Surgery • Hand Surgery • Plastic & Reconstructive Surgery • Foot & Ankle Surgery • Avascular necrosis (AVN) • Rheumatology
• Urology • Laparoscopic & GI Surgery • Bone Cancer • Dental & Maxillofacial Surgery • Dental Implant Centre • Ilizarov-Leg Lengthening
• Paediatric Orthopaedics • Surgery for Spastics & Children's Orthopaedics, Neurology & Hand Problems • Internal Medicine • ENT
• Pulmonology • Physiotherapy • Orthotics & Prosthetics (Braces & Artificial Limbs) • Varicose Veins - Non Invasive Surgery. (At Kalyan Nagar)
• Recuperation/Rehabilitation Centre for Orthopaedic Neuro/Stroke • First hospital in Bangalore to have homecare services since 1992

Our Services
• 24/7 Accident & Trauma Care • 24/7 Ambulance
• 24/7 Pharmacy • 24/7 X-Ray, CT Scan
• 24/7 Laboratory Services

HOSMAT Hospitals - Sadashivanagar
#18, Bellary Road, Sadashivanagar,
Bengaluru, Karnataka 560080
080-69575555 / +91 81474 00755

HOSMAT Hospitals - Magrath Road
45, Magrath Rd, Bengaluru,
Karnataka 560025
080-25593796 / +91 91084 50310

HOSMAT Hospitals - Kalyan Nagar
No. 1, Hennur Cross, Kalyan Nagar,
Bengaluru, Karnataka 560043
080-45332400 / +91 96637 06440

www.hosmathospitals.com info@hosmathospitals.com

ಮಗು ವಿಚಾರಕ್ಕೆ ಗಲಾಟೆ: ಪತ್ನಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಎಲ್ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಗಿರಿಜಾ (30) ಅವರನ್ನು ಕತ್ತು ಹಿಸುಕಿ ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿರುವ ಆರೋಪದಡಿ ಪತಿ ನವೀನ್‌ಕುಮಾರ್‌ನನ್ನು (32) ಪೊಲೀಸರು ಬಂಧಿಸಿದ್ದಾರೆ.

'ಅನ್ನಸಂದ್ರಪಾಳ್ಯದಲ್ಲಿ ಗಿರಿಜಾ ಹಾಗೂ ನವೀನ್‌ಕುಮಾರ್ ದಂಪತಿ ವಾಸವಿದ್ದರು. ಮಗು ಮಾಡಿಕೊಳ್ಳುವ ವಿಚಾರಕ್ಕೆ ದಂಪತಿ ನಡುವೆ ಆಗಾಗ ಜಗಳ ಆಗುತ್ತಿತ್ತು. ಶುಕ್ರವಾರ ರಾತ್ರಿಯೂ ಜಗಳ ನಡೆದು, ಗಿರಿಜಾ ಕೊಲೆ ಆಗಿದೆ. ಕೃತ್ಯದ ಬಳಿಕ ಪರಾರಿಯಾಗಿದ್ದ ನವೀನ್‌ಕುಮಾರ್‌ನನ್ನು ಕೆಲವೇ ಗಂಟೆಗಳಲ್ಲಿ ಸೆರೆಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.

'ಉತ್ತರ ಕನ್ನಡ ಜಿಲ್ಲೆಯ ಭಟ್ಕಳದ ಗಿರಿಜಾ ಹಾಗೂ ಪೋಷಕರು, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಯಶವಂತಪುರದಲ್ಲಿ ನೆಲೆಸಿದ್ದರು. ರಾಮನಗರ ತಾಲ್ಲೂಕಿನ ಮಾಯಗಾನಹಳ್ಳಿಯ ನವೀನ್ ಕುಮಾರ್, ನಗರದ ಬೇಕರಿಗಳಿಗೆ ಬ್ರೆಡ್ ವಿತರಣೆ ಕೆಲಸ ಮಾಡುತ್ತಿದ್ದ. ಗಿರಿಜಾ ಹಾಗೂ ನವೀನ್‌ಕುಮಾರ್ ನಡುವೆ ಪರಿಚಯವಾಗಿ, ಸ್ನೇಹ ಏರ್ಪಟ್ಟಿತ್ತು. ಮದುವೆಯಾಗಲು ತೀರ್ಮಾನಿಸಿದ್ದರು. ಎರಡೂ ಕುಟುಂಬದವರು ಮದುವೆಗೆ ಒಪ್ಪಿಗೆ ನೀಡಿದ್ದರು' ಎಂದು ತಿಳಿಸಿದರು.

'ಎಂಟು ತಿಂಗಳ ಹಿಂದೆಯಷ್ಟೇ ಮದುವೆಯಾಗಿದ್ದ ದಂಪತಿ, ಅನ್ನಸಂದ್ರ ಪಾಳ್ಯದಲ್ಲಿ ನೆಲೆಸಿದ್ದರು. ಗಿರಿಜಾ ಅವರು ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದರು. ಮಗು ಮಾಡಿಕೊಳ್ಳುವ ವಿಚಾರದಲ್ಲಿ ದಂಪತಿ ನಡುವೆ ಜಗಳ ಶುರುವಾಗಿತ್ತು. ಇದೇ ಜಗಳ ಕೊಲೆಯಲ್ಲಿ ಅಂತ್ಯವಾಗಿದೆ' ಎಂದು ಹೇಳಿದರು.

ಇಬ್ಬರು ಮಕ್ಕಳನ್ನು ಕೊಲೆ ಮಾಡಿದ್ದ ಆರೋಪದಡಿ ಬಂಧನದಲ್ಲಿದ್ದ ಮಹಿಳೆ

ಜೈಲಿನಲ್ಲಿ ತಾಯಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಇಬ್ಬರು ಮಕ್ಕಳನ್ನು ಕೊಲೆ ಮಾಡಿದ್ದ ಆರೋಪದಡಿ ಬಂಧಿತರಾಗಿದ್ದ ತಾಯಿ ಗಂಗಾದೇವಿ (30) ಅವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಶೌಚಾಲಯದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಬಗ್ಗೆ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಜಾಲಹಳ್ಳಿಯ ಭೋವಿ ಕಾಲೊನಿಯ ಗಂಗಾದೇವಿ, ಏಪ್ರಿಲ್ 9ರಂದು ತಡರಾತ್ರಿ ತಮ್ಮ ಮಕ್ಕಳಾದ ಲಕ್ಷ್ಮಿ (7) ಹಾಗೂ ಗೌತಮ್‌ನನ್ನು (9) ತಲೆದಿಂಬಿನಿಂದ ಉಸಿರುಗಟ್ಟಿಸಿ ಕೊಲೆ ಮಾಡಿದ್ದರು. ಮರುದಿನ ನಸುಕಿನಲ್ಲಿ ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿ, ಮಕ್ಕಳನ್ನು ಕೊಂದಿರುವುದಾಗಿ ತಪ್ಪೊಪ್ಪಿಕೊಂಡು ಶರಣಾಗಿದ್ದರು' ಎಂದು ಪೊಲೀಸರು ಹೇಳಿದರು.

'ಗಂಗಾದೇವಿ ಅವರನ್ನು ಬಂಧಿಸಿದ್ದ ಜಾಲಹಳ್ಳಿ ಠಾಣೆ ಪೊಲೀಸರು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು. ಅಂದಿನಿಂದ ಗಂಗಾದೇವಿ, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದರು' ಎಂದು ತಿಳಿಸಿದರು.

'ಗಂಗಾದೇವಿ ಗುರುವಾರ ರಾತ್ರಿ ಶೌಚಾಲಯಕ್ಕೆ ಹೋಗಿದ್ದರು. ಅಲ್ಲಿಯೇ ಸೀರೆಯಿಂದ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಮೃತದೇಹ ನೋಡಿದ್ದ ಸಹ ಕೈದಿಗಳು ಜೈಲಿನ ಸಿಬ್ಬಂದಿಗೆ ಮಾಹಿತಿ ನೀಡಿದ್ದರು. ಬಳಿಕ, ಜೈಲಿಗೆ ಹೋಗಿ ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲಾಗಿತ್ತು. ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ' ಎಂದು ಹೇಳಿದರು.

ಜೈಲಿನಲ್ಲಿದ್ದ ಪತಿ: 'ಆಂಧ್ರಪ್ರದೇಶ ಗಂಗಾದೇವಿ, ನರೇಶ್ ಎಂಬುವವರನ್ನು 10 ವರ್ಷಗಳ ಹಿಂದೆಯಷ್ಟೇ ಮದುವೆಯಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದರು. ಪುತ್ರಿಯ ಜೊತೆ ಅಸಭ್ಯವಾಗಿ ವರ್ತಿಸುತ್ತಿದ್ದ ಕಾರಣಕ್ಕೆ ಪತಿ ವಿರುದ್ಧವೇ ಗಂಗಾದೇವಿ ಪೊಲೀಸರಿಗೆ ದೂರು ನೀಡಿದ್ದರು. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ (ಪೋಕ್ಸೊ) ಕಾಯ್ದೆಯಡಿ ನರೇಶ್‌ನನ್ನು ಬಂಧಿಸಲಾಗಿತ್ತು. ಸದ್ಯ ನರೇಶ್‌ನೂ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದಾನೆ' ಎಂದು ಪೊಲೀಸರು ತಿಳಿಸಿದರು.

'ಪತಿ ಜೈಲು ಸೇರಿದ್ದರಿಂದ ಹಾಗೂ ಮಕ್ಕಳನ್ನು ಕೊಲೆ ಮಾಡಿದ್ದರಿಂದ ಗಂಗಾದೇವಿ ನೊಂದಿದ್ದರೆಂದು ಗೊತ್ತಾಗಿದೆ. ಆತ್ಮಹತ್ಯೆ ಸಂಬಂಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

ಮೇಲ್ಸೇತುವೆಯಿಂದ ಬಿದ್ದು ಸವಾರ ಸಾವು

ಬೆಂಗಳೂರು: ಪೀಣ್ಯ ಮೇಲ್ಸೇತುವೆಯಲ್ಲಿ ಶನಿವಾರ ಅಪಘಾತ ಸಂಭವಿಸಿದ್ದು, ಮೇಲ್ಸೇತುವೆಯಿಂದ ಕೆಳಗಿನ ರಸ್ತೆಗೆ ಬಿದ್ದು ಬೈಕ್ ಸವಾರ ಪ್ರಸಾದ್ (38) ಮೃತಪಟ್ಟಿದ್ದಾರೆ.

'ಮಹಾಲಕ್ಷ್ಮಿ ಲೇಔಟ್ ಬಳಿಯ ಕೃಷ್ಣಾನಂದನಗರದ ಪ್ರಸಾದ್, ದಾಸನಪುರ ಎಪಿಎಂಪಿ ಮಾರುಕಟ್ಟೆಯ ಮಳಿಗೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ರಾತ್ರಿ ಪಾಳಿ ಕೆಲಸ ಮುಗಿಸಿಕೊಂಡು ಶನಿವಾರ ಬೆಳಿಗ್ಗೆ ಮನೆಗೆ ಬೈಕ್‌ನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಪೀಣ್ಯ ಪೊಲೀಸರು ಹೇಳಿದರು.

'ಹೆದ್ದಾರಿಯಲ್ಲಿರುವ ಪೀಣ್ಯ ಮೇಲ್ಸೇತುವೆಯಲ್ಲಿ ಪ್ರಸಾದ್ ಹೊರಟಿದ್ದರು. ಜಾಲಹಳ್ಳಿ ಸಮೀಪದ ರಾಕ್‌ಲೈನ್ ಮಾಲ್ ಬಳಿ ಬೈಕ್‌ಗೆ ಕಾರೊಂದು ಡಿಕ್ಕಿ ಹೊಡೆದಿತ್ತು. ಅಪಘಾತದಿಂದಾಗಿ ಬೈಕ್ ನಿಂದ ಹಾರಿದ್ದ ಪ್ರಸಾದ್, ಮೇಲ್ಸೇತುವೆಯಿಂದ ಕೆಳಗಿನ ರಸ್ತೆಗೆ ಬಿದ್ದಿದ್ದರು. ಸ್ಥಳದಲ್ಲೇ ಅವರು ಮೃತಪಟ್ಟಿದ್ದಾರೆ' ಎಂದು ತಿಳಿಸಿದರು. 'ಅಪಘಾತದ ಬಳಿಕ ಕಾರು ಸಮೇತ ಚಾಲಕ ಪರಾರಿಯಾಗಿದ್ದಾನೆ. ಚಾಲಕನ ವೇಗದ ಚಾಲನೆಯಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ತನಿಖೆ ಮುಂದುವರಿಸಲಾಗಿದೆ' ಎಂದಿದ್ದಾರೆ.

ಸುದ್ದಿ 2 ನಿಮಿಷ

ಐಪಿಎಲ್: ಬಿಎಂಟಿಸಿಯಿಂದ ಹೆಚ್ಚುವರಿ ಬಸ್ ವ್ಯವಸ್ಥೆ

ಬೆಂಗಳೂರು: ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯಗಳು ನಡೆಯುವ ದಿನಗಳಲ್ಲಿ ಪ್ರಯಾಣಿಕರ ಅನುಕೂಲಕ್ಕೆ ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಮಾಡಲು ಬಿಎಂಟಿಸಿ ನಿರ್ಧರಿಸಿದೆ.

ಏಪ್ರಿಲ್ 15, ಮೇ 4, 12 ಮತ್ತು ಮೇ 18ರಂದು ಐಪಿಎಲ್ ಕ್ರಿಕೆಟ್ ಪಂದ್ಯಗಳು ನಡೆಯಲಿದೆ. ಈ ದಿನಗಳಲ್ಲಿ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಿಂದ ಎಚ್‌ಎಎಲ್ ರಸ್ತೆ ಮೂಲಕ ಕಾಡುಗೋಡಿ ಬಸ್ ನಿಲ್ದಾಣಕ್ಕೆ, ಹೂಡಿ ರಸ್ತೆ ಮೂಲಕ ಕಾಡುಗೋಡಿ ಬಸ್ ನಿಲ್ದಾಣಕ್ಕೆ, ಹೊಸೂರು ರಸ್ತೆ ಮೂಲಕ ಎಲೆಕ್ಟ್ರಾನಿಕ್ ಸಿಟಿಗೆ, ನಾಗವಾರ-ಟ್ಯಾನರಿ ರಸ್ತೆ ಮೂಲಕ ಆರ್.ಕೆ. ಹೆಗಡೆ ನಗರಕ್ಕೆ, ಮಾಗಡಿ ರಸ್ತೆ ಮೂಲಕ ಜನಪ್ರಿಯ ಟೌನ್‌ಶಿಪ್‌ಗೆ, ಎಂಟಿಸಿಟಿ-ನಾಯಂಡಹಳ್ಳಿ ಮೂಲಕ ಕೆಂಗೇರಿ ಕೆಎಚ್‌ಬಿ ಕ್ವಾರ್ಟರ್ಸ್‌ಗೆ, ಹೆಣ್ಣೂರು ರಸ್ತೆ ಮೂಲಕ ಬಾಗಲೂರಿಗೆ ಹೆಚ್ಚುವರಿ ಬಸ್‌ಗಳು ಸಂಚರಿಸಲಿವೆ.

ಸರ್ಜಾಪುರ, ಬನ್ನೇರುಘಟ್ಟ ಮೃಗಾಲಯ, ನೆಲಮಂಗಲ, ಯಲಹಂಕ 5ನೇ ಹಂತ, ಹೊಸಕೋಟೆಗೆ ಹೆಚ್ಚುವರಿ ಬಸ್ ವ್ಯವಸ್ಥೆ ಇರಲಿದೆ ಎಂದು ಬಿಎಂಟಿಸಿ ಸಾರ್ವಜನಿಕ ಅಧಿಕಾರಿ ತಿಳಿಸಿದ್ದಾರೆ.

ಅರುಣ್ ಯೋಗಿರಾಜ್‌ಗೆ 'ವಿಶ್ವಕರ್ಮ ಕುಲ ತಿಲಕ'

ಮಂಗಳೂರು: ಅಯೋಧ್ಯೆಯ ಬಾಲರಾಮನ ಮೂರ್ತಿ ತಯಾರಕ, ಮೈಸೂರಿನ ಅರುಣ್ ಯೋಗಿರಾಜ್ ಅವರನ್ನು ಶೃಂಗಾರಗೊಂಡ ವಾಹನದಲ್ಲಿ ಪೀಠದಲ್ಲಿ ಕುಳ್ಳಿರಿಸಿ ಮೆರವಣಿಗೆ ಮಾಡಲಾಯಿತು. ಭಾವುಕರಾದ ಅರುಣ್ ಯೋಗಿರಾಜ್ ದಾರಿಯುದ್ದಕ್ಕೂ ವಿನಮ್ರವಾಗಿ ನಮಸ್ಕರಿಸುತ್ತ ಸಾಗಿದರು.

ರಥಬೀದಿಯ ಕಾಳಿಕಾಂಬಾ ವಿನಾಯಕ ದೇವಸ್ಥಾನದ ಆಶ್ರಯದಲ್ಲಿ ವಿಶ್ವಕರ್ಮ ಕಲಾ ಪರಿಷತ್ ಮಂಗಳೂರು ವತಿಯಿಂದ ಶನಿವಾರ ಆಯೋಜಿಸಿದ್ದ 'ಸಮರ್ಪಣಂ ಕಲೋತ್ಸವ' ಕಾರ್ಯಕ್ರಮಕ್ಕೆ ಅರುಣ್ ಅವರನ್ನು ಮೆರವಣಿಗೆಯಲ್ಲಿ ಕರೆತಂದು 'ವಿಶ್ವಕರ್ಮ ಕುಲ ತಿಲಕ' ಬಿರುದು ನೀಡಿ ಸನ್ಮಾನಿಸಲಾಯಿತು.

'ಶ್ರೀರಾಮ ಮೂರ್ತಿ ನಿರ್ಮಾಣಕ್ಕಾಗಿಯೇ ನಾನು ಹುಟ್ಟಿರುವುದೇನೋ ಅನ್ನಿಸುತ್ತಿದೆ. ವಿಶ್ವಕರ್ಮ ಸಮುದಾಯದಲ್ಲಿ ಹುಟ್ಟಿದ್ದು ನನ್ನ ಪುಣ್ಯ. ಕೋಟ್ಯಂತರ ಜನರ ಆಶೀರ್ವಾದದಿಂದ ಧನ್ಯನಾಗಿದ್ದೇನೆ. ಯುವ ತಲೆಮಾರು ಈ ಕಲೆಯನ್ನು ಕಲಿತು, ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಬೇಕು. ಈ ನಿಟ್ಟಿನಲ್ಲಿ ಮಕ್ಕಳಿಗೆ ಇದನ್ನು ಕಲಿಸುವ ಉದ್ದೇಶವಿದೆ' ಎಂದು ಅರುಣ್ ಹೇಳಿದರು.

ಸೇವಾ ನ್ಯೂನತೆ– ಥಾಮಸ್ ಕುಕ್ ಕಂಪನಿ ವಿರುದ್ಧ ದೂರು

ತಪ್ಪಿದ ಪ್ರವಾಸ: ₹2 ಲಕ್ಷ ಪರಿಹಾರಕ್ಕೆ ಆದೇಶ

• ಬಿ.ಎಸ್.ಷಣ್ಮುಖಪ್ಪ

ಬೆಂಗಳೂರು: 'ವಿದೇಶದಲ್ಲಿ ಒಳ್ಳೆ ಊಟ ಕೊಡಿಸಲಿಲ್ಲ, ಉಳಿದುಕೊಳ್ಳಲಿಕ್ಕೆ ನಚ್ಚನೆಯ ತಾವು ನೀಡಲಿಲ್ಲ, ಮುಖ್ಯವಾಗಿ ಲಂಡನ್ ವೀಕ್ಷಣೆಯಿಂದ ನನ್ನನ್ನು ವಂಚಿತರನ್ನಾಗಿಸಿದ್ದಾರೆ, ಒಡಂಬಡಿಕೆಗೆ ವಿರುದ್ಧವಾಗಿ ನಡೆದುಕೊಳ್ಳುವ ಮೂಲಕ ಮಾನಸಿಕ ಯಾತನೆ ಉಂಟು ಮಾಡಿದ್ದಾರೆ, ದಯವಿಟ್ಟು ಪರಿಹಾರ ಕೊಡಿಸಿ...' ಎಂಬ ಅಳಲಿಗೆ ಸ್ಪಂದಿಸಿರುವ ಗ್ರಾಹಕರ ಆಯೋಗ, ದೂರುದಾರರಿಗೆ ₹ 2 ಲಕ್ಷ ಪರಿಹಾರ ನೀಡುವಂತೆ ಗ್ರಾಹಕರಿಗೆ ಪ್ರವಾಸ ಸೇವೆ ಒದಗಿಸುವ 'ಥಾಮಸ್ ಕುಕ್ ಕಂಪನಿ'ಗೆ ಆದೇಶಿಸಿದೆ.

ಕಾಚರಕನಹಳ್ಳಿಯ 'ಭಾನು ಪ್ರೈಡ್ ಅಪಾರ್ಟ್‌ಮೆಂಟ್' ನಿವಾಸಿ ಕೆ.ರುದ್ರಮೂರ್ತಿ (50) ಸಲ್ಲಿಸಿದ್ದ ದೂರಿನ ವಿಚಾರಣೆ ನಡೆಸಿದ, ಬೆಂಗಳೂರು ಮೊದಲನೇ ಹೆಚ್ಚುವರಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ ಅಧ್ಯಕ್ಷ ಬಿ.ನಾರಾಯಣಪ್ಪ, ಸದಸ್ಯರಾದ ಎನ್.ಜ್ಯೋತಿ ಹಾಗೂ ಎಸ್.ಎಂ.ಶರಾವತಿ ಇತ್ತೀಚೆಗೆ ಈ ಕುರಿತಂತೆ ಆದೇಶಿಸಿದ್ದಾರೆ.

'ಆರೋಪ ಸಾಬೀತಾಗಿರುವ ಕಾರಣ ಥಾಮಸ್ ಕುಕ್ (ಇಂಡಿಯಾ) ಕಂಪನಿಯು, ದೂರುದಾರರಿಗೆ ₹ 2 ಲಕ್ಷ ಪರಿಹಾರ, ಸೇವಾ ನ್ಯೂನ್ಯತೆಗಾಗಿ ₹ 1 ಲಕ್ಷ ಮತ್ತು ವ್ಯಾಜ್ಯದ ವೆಚ್ಚವಾಗಿ ₹ 5 ಸಾವಿರ ಮೊತ್ತವನ್ನು ಈ ಆದೇಶ ಕೈಸೇರಿದ ದಿನದಿಂದ ಎರಡು ತಿಂಗಳ ಒಳಗಾಗಿ, ವಾರ್ಷಿಕ ಶೇ 10ರ ಬಡ್ಡಿ ದರದಲ್ಲಿ ಪಾವತಿಸಬೇಕು' ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಪ್ರಕರಣವೇನು?: ರಜಾ ದಿನಗಳ 'ಗ್ರ್ಯಾಂಡ್ ಬಾರ್ಗೈನ್ ಟೂರ್ ಆಫ್ ಯುರೋಪ್–ದಕ್ಷಿಣ ವಿಶೇಷ' ಎಂಬ ಆಕರ್ಷಕ ವಾಕ್ಯದಡಿ ಥಾಮಸ್ ಕುಕ್ (ಇಂಡಿಯಾ) ಲಿಮಿಟೆಡ್ ಕಂಪನಿಯು 14 ದಿನ ಹಾಗೂ 15 ರಾತ್ರಿಗಳ ಯುರೋಪ್ ಪ್ರವಾಸವನ್ನು ಆಯೋಜಿಸಿತ್ತು. ಜಿಎಸ್‌ಟಿ ಮತ್ತು ಟಿಎಸ್‌ಟಿ ಒಳಗೊಂಡಂತೆ ತಲಾ ₹ 3,79,535 ನಿಗದಿಪಡಿಸಲಾಗಿತ್ತು. ಪ್ರವಾಸದ ಪ್ಯಾಕೇಜ್‌ನಲ್ಲಿ ಲಂಡನ್, ಪ್ಯಾರಿಸ್, ಬೆಲ್ಜಿಯಂ, ನೆದರ್‌ಲ್ಯಾಂಡ್, ಜರ್ಮನಿ, ಸಿಟ್ಜರ್‌ಲ್ಯಾಂಡ್, ಆಸ್ಟ್ರಿಯಾ, ವೆನಿಸ್, ಫ್ಲೋರೆನ್ಸ್ ನಗರ, ರೋಮ್ ಹಾಗೂ ವ್ಯಾಟಿಕನ್ ಸಿಟಿ ಒಳಗೊಂಡಿದ್ದವು. ಆಹಾರ, ವಸತಿ ಹಾಗೂ ಸಾರಿಗೆ ವೆಚ್ಚವೂ ಇದರಲ್ಲಿ ಸೇರಿತ್ತು.

ಕಂಪನಿಯ ಈ ಸೇವೆಯನ್ನು ಬಳಸಿಕೊಳ್ಳಲು ಮುಂದಾಗಿದ್ದ ಕೆ.ರುದ್ರಮೂರ್ತಿ ತಮ್ಮ ಕುಟುಂಬದ ಇತರ ಸದಸ್ಯರೊಂದಿಗೆ ಪ್ರವಾಸಕ್ಕೆ ತೆರಳಲು ಸಮ್ಮತಿಸಿ ಒಟ್ಟು ₹ 16,37,000 ಮೊತ್ತವನ್ನು ಕಂಪನಿಗೆ ಪಾವತಿ ಮಾಡಿದ್ದರು. ಈ ಪ್ರವಾಸವು 2023ರ ಮೇ 24ರಂದು ಪ್ರಾರಂಭಗೊಂಡು 2023ರ ಜೂನ್ 8ಕ್ಕೆ ಮುಕ್ತಾಯಗೊಂಡಿತ್ತು.

'ನಿಗದಿತ ಸಮಯಕ್ಕೆ ನನ್ನೊಬ್ಬನ ವೀಸಾ ಕೈಸೇರದ ಕಾರಣ 14 ರಾತ್ರಿ ಹಾಗೂ 15 ದಿನಗಳ ನಿಶ್ಚಿತ ಪ್ರವಾಸವು 12 ರಾತ್ರಿ ಹಾಗೂ 13 ದಿನಗಳಿಗೆ ಮೊಟಕುಗೊಂಡಿತ್ತು. ಇದರಿಂದಾಗಿ ನನ್ನ ಲಂಡನ್ ವೀಕ್ಷಣೆ ತಪ್ಪಿಹೋಯಿತು. ಇದರ ಹೊಣೆಯನ್ನು ಕಂಪನಿಯೇ ಹೊರಬೇಕು' ಎಂದು ಆರೋಪಿಸಿ ರುದ್ರಮೂರ್ತಿ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಗೆ ದೂರು ನೀಡಿದ್ದರು. ದೂರನ್ನು ಸ್ವೀಕರಿಸಿದ್ದ ಆಯೋಗವು ಎದುರುದಾರರಾದ ಥಾಮಸ್ ಕುಕ್ (ಇಂಡಿಯಾ) ಕಂಪನಿ ಪ್ರಾದೇಶಿಕ ವ್ಯವಸ್ಥಾಪಕರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಿತ್ತು.

ವಿಚಾರಣೆ ವೇಳೆ ದೂರುದಾರರ ಪರ ಹೈಕೋರ್ಟ್ ವಕೀಲ ಪ್ರಶಾಂತ್ ಟಿ.ಪಂಡಿತ್ ವಾದ ಮಂಡಿಸಿ, 'ಜಂಟಿ ಪ್ರವಾಸ ಯೋಜನೆ ಕೈಗೊಂಡಾಗ ವೀಸಾ ಹಾಗೂ ಇತರೆ ದಾಖಲೆಗಳನ್ನು ಸಂಬಂಧಿಸಿದ ಇಲಾಖೆಗಳಿಂದ ಪ್ರಯಾಣಿಕರಿಗೆ ಕೊಡಿಸುವುದು ಪ್ರವಾಸಿ ಕಂಪನಿಗಳ ಕರ್ತವ್ಯವಾಗಿರುತ್ತದೆ. ದೂರುದಾರರು ಮುಂಗಡವಾಗಿ ಟಿಕೆಟ್‌ಗಳನ್ನು ಕಾಯ್ದಿರಿಸಿದ್ದರೂ ವೀಸಾ ಹಾಗೂ ಇತರೆ ದಾಖಲೆಗಳನ್ನು ಕೊಡಿಸದೇ ಇರುವುದು ಸೇವಾ ನ್ಯೂನ್ಯತೆಗೆ ಒಳಪಡುತ್ತದೆ. ಆದ್ದರಿಂದ, ದೂರುದಾರರಿಗೆ ₹ 4 ಲಕ್ಷ ಪರಿಹಾರ, ಮಾನಸಿಕ ಯಾತನೆ ಉಂಟು ಮಾಡಿದ್ದಕ್ಕೆ ₹ 2 ಲಕ್ಷ ಹಾಗೂ ವ್ಯಾಜ್ಯದ ವೆಚ್ಚವಾಗಿ ₹ 50 ಸಾವಿರ ನೀಡಲು ಕಂಪನಿಗೆ ಆದೇಶಿಸಬೇಕು' ಎಂದು ಕೋರಿದ್ದರು.

ಇದಕ್ಕೆ ಪ್ರತಿಯಾಗಿ ದೂರುದಾರರ ಆರೋಪಗಳನ್ನು ಅಲ್ಲಗಳೆದಿದ್ದ ಕಂಪನಿ ಪರ ವಕೀಲ ಎಸ್.ರಾಮಕೃಷ್ಣನ್, 'ಪ್ರವಾಸದ ನಿರ್ಗಮನ 2023ರ ಮೇ 24ರಂದು ಬೆಳಿಗ್ಗೆ 10.30ಕ್ಕೆ ಆರಂಭ ಗೊಳ್ಳಬೇಕಿತ್ತು. ಆದರೆ, ದೂರುದಾರರ ವೀಸಾ ಬರುವುದು ವಿಳಂಬವಾದ ಕಾರಣ ಅವರು ಸಕಾಲಕ್ಕೆ ಹೊರಡಲು ಸಾಧ್ಯವಾಗಲಿಲ್ಲ. ರಾಯಭಾರ ಕಚೇರಿಯು 2023ರ ಮೇ 23ರಂದು ಸಂಜೆ ದೂರುದಾರರ ವೀಸಾಕ್ಕೆ ಅನುಮೋದಿಸಿತು. ಅದರಿಂದ ಅವರು ನೇರವಾಗಿ ಪ್ಯಾರಿಸ್ ನಗರ ತಲುಪಿದರು. ಅಷ್ಟರಲ್ಲಿ ಲಂಡನ್ ನಗರದ ಪ್ರವಾಸ ಭಾಗ ಮುಗಿದಿತ್ತು' ಎಂದು ಪ್ರತಿಪಾದಿಸಿದ್ದರು. ಇದನ್ನು ಒಪ್ಪದ ವೇದಿಕೆ ಪರಿಹಾರ ನೀಡಿಕೆಗೆ ಆದೇಶಿಸಿದೆ.

ನಕಲಿ ಜಾತಿ ಪ್ರಮಾಣಪತ್ರ ಪ್ರಶ್ನಿಸಲು ಕಾಲಮಿತಿ ಬೇಕಿಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: 'ನಕಲಿ ಜಾತಿ ಪ್ರಮಾಣ ಪತ್ರದಿಂದ ಪಡೆದಿರುವ ಪ್ರಯೋಜನಗಳನ್ನು ಪ್ರಶ್ನಿಸುವುದಕ್ಕೆ ಯಾವುದೇ ಕಾಲಮಿತಿಯ ಅವಶ್ಯಕತೆ ಇಲ್ಲ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ನ್ಯಾಯಮೂರ್ತಿ ವಿ.ಶ್ರೀಶಾನಂದ

ಈ ಸಂಬಂಧ ಮೈಸೂರಿನ ಸರ್ಕಾರಿ ಆಯುರ್ವೇದಿಕ್ ವೈದ್ಯಕೀಯ ಕಾಲೇಜಿನ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ಡಾ.ಗುಡ್ಡದೇವ ಬಿನ್ ಗೊಲ್ಲಾಳಪ್ಪ ಯಡ್ರಾಮಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ವಿ. ಶ್ರೀಶಾನಂದ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

'ಡಾ.ಗುಡ್ಡದೇವ ಅವರು ನಕಲಿ ಜಾತಿ ಪ್ರಮಾಣಪತ್ರ ಪಡೆದಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಪರಿಶಿಷ್ಟ ಪಂಗಡಗಳ (ಎಸ್‌ಟಿ) ಕಲ್ಯಾಣ ಮತ್ತು ಮೇಲ್ಮನವಿ ನ್ಯಾಯಮಂಡಳಿಯು, ಅವರ ಜಾತಿ ಪ್ರಮಾಣಪತ್ರವನ್ನು ರದ್ದುಗೊಳಿಸಿತ್ತು. ಇದನ್ನು ಪ್ರಶ್ನಿಸಿ ಗುಡ್ಡದೇವ ಹೈಕೋರ್ಟ್ ಮೆಟ್ಟಿಲೇರಿದ್ದರು.

ಈ ರಿಟ್ ಅರ್ಜಿ ವಿಚಾರಣೆ ನಡೆಸಿದ ಕಲಬುರಗಿ ಪೀಠದಲ್ಲಿದ್ದ ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರು, 'ಅರ್ಜಿದಾರರು ನ್ಯಾಯಮಂಡಳಿಯ ಆದೇಶವನ್ನು ಅನೂರ್ಜಿತಗೊಳಿಸಬೇಕು ಮತ್ತು ನನ್ನನ್ನು ಪುನಃ ಸೇವೆಗೆ ಸೇರ್ಪಡೆ

ಕಾರು, ಬೈಕ್‌ಗಳಿಂದ ಹಣ ಸ್ಥಳಾಂತರಿಸುವ ವೇಳೆ ಅಧಿಕಾರಿಗಳಿಂದ ದಾಳಿ • ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಜಪ್ತಿ • ಐವರು ಪರಾರಿ

₹1.34 ಕೋಟಿ ನಗದು ವಶ: ಪಕ್ಷಗಳ ಕೆಸರೆರಚಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರ ನಾಲ್ಕನೇ ಹಂತದ ಬಳಿ ಎರಡು ಕಾರು ಮತ್ತು ಒಂದು ದ್ವಿಚಕ್ರ ವಾಹನದಲ್ಲಿ ಸಾಗಿಸುತ್ತಿದ್ದ ₹ 1.34 ಕೋಟಿ ನಗದನ್ನು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಚುನಾವಣಾಧಿಕಾರಿಗಳು ಶನಿವಾರ ಮಧ್ಯಾಹ್ನ ವಶಪಡಿಸಿಕೊಂಡಿದ್ದಾರೆ.

ವಾಹನಗಳಲ್ಲಿ ಹಣ ಸಾಗಿಸುತ್ತಿರುವ ಮಾಹಿತಿ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಚುನಾವಣಾಧಿಕಾರಿ ಮುನೀಶ್ ಮೌದ್ಗಿಲ್ ಅವರಿಗೆ ಲಭಿಸಿತ್ತು. ಅವರು ಮಾದರಿ ನೀತಿ ಸಂಹಿತೆ ಅನುಷ್ಠಾನ ಅಧಿಕಾರಿ ನಿಖಿತಾ ಅವರನ್ನು ಸ್ಥಳಕ್ಕೆ ಕಳುಹಿಸಿದ್ದರು. ಎರಡು ಕಾರು ಮತ್ತು ಒಂದು ದ್ವಿಚಕ್ರ ವಾಹನಗಳಲ್ಲಿದ್ದ ಹಣವನ್ನು ಫಾರ್ಚೂನರ್ ಕಾರ್‌ಗೆ ಸ್ಥಳಾಂತರಿಸುವ ಪ್ರಯತ್ನದಲ್ಲಿದ್ದಾಗಲೇ ಸ್ಥಳಕ್ಕೆ ತೆರಳಿದ ಅಧಿಕಾರಿ, ನಗದನ್ನು ವಶಕ್ಕೆ ಪಡೆದಿದ್ದಾರೆ.

'ದ್ವಿಚಕ್ರ ವಾಹನದಲ್ಲಿದ್ದ ಹಣದ ಚೀಲವನ್ನು ನಿಖಿತಾ ವಶಕ್ಕೆ ಪಡೆಯುತ್ತಿದ್ದಂತೆಯೇ ಮರ್ಸಿಡೀಸ್ ಬೆಂಝ್ ಮತ್ತು ಫೋಕ್ಸ್‌ವ್ಯಾಗನ್ ಪೋಲೊ ಕಾರುಗಳನ್ನು ಬಿಟ್ಟು ಫಾರ್ಚೂನರ್ ಕಾರಿನಲ್ಲಿಯೇ ಐವರು ಪರಾರಿಯಾದರು. ಎರಡೂ ಕಾರುಗಳ ಕಿಟಕಿ ಗಾಜು ಒಡೆದು ನಗದು ಇದ್ದ ಚೀಲಗಳನ್ನು ವಶಕ್ಕೆ ಪಡೆಯಲಾಯಿತು' ಎಂದು ಮುನೀಶ್ ಮೌದ್ಗಿಲ್ 'ಪ್ರಜಾವಾಣಿ'ಗೆ ತಿಳಿಸಿದರು.

ಮರ್ಸಿಡೀಸ್ ಬೆಂಝ್ ಕಾರು ಇನ್ನೂ ನೋಂದಣಿಯಾಗಿಲ್ಲ. ಫೋಕ್ಸ್‌ವ್ಯಾಗನ್ ಕಾರು ಸೋಮಶೇಖರ್ ಎಂಬುವವರಿಗೆ ಸೇರಿದ್ದು, ದ್ವಿಚಕ್ರ ವಾಹನ ಧನಂಜಯ್ ಎಂಬುವವರ ಹೆಸರಿನಲ್ಲಿದೆ.

ಬೆಂಗಳೂರಿನ ಜಯನಗರದಲ್ಲಿ ಶನಿವಾರ ಚುನಾವಣಾಧಿಕಾರಿಗಳು ನಗದು ವಶಪಡಿಸಿಕೊಂಡಿರುವ ಮರ್ಸಿಡೀಸ್ ಬೆಂಝ್ ಕಾರು (ಎಡಚಿತ್ರ) ಚುನಾವಣಾಧಿಕಾರಿಗಳು ವಶಪಡಿಸಿಕೊಂಡಿರುವ ನಗದು (ಮಧ್ಯ ಚಿತ್ರ) ಚುನಾವಣಾಧಿಕಾರಿಗಳು ವಶಪಡಿಸಿಕೊಂಡಿರುವ ಫೋಕ್ಸ್‌ವ್ಯಾಗನ್ ಪೋಲೊ ಕಾರು —ಪ್ರಜಾವಾಣಿ ಚಿತ್ರಗಳು

ಚುನಾವಣಾಧಿಕಾರಿಗಳ ತಂಡ ಸ್ಥಳಕ್ಕೆ ಬರುತ್ತಿದ್ದಂತೆ ಪ್ರಮುಖ ಆರೋಪಿಗಳು ಫಾರ್ಚೂನರ್ ಕಾರು ಏರಿ ಪರಾರಿಯಾಗಿದ್ದರು. ಅಲ್ಲಿದ್ದ ಕೆಲವರು ಕಾರಿನಲ್ಲಿರುವುದು ಮಾವಿನ ಹಣ್ಣಿನ ಚೀಲ ಎಂದು ಹೇಳಿದ್ದರು. ಕಾರಿನ ಕಿಟಕಿ ಗಾಜು ಒಡೆಯಲು ಮುಂದಾಗುತ್ತಿದ್ದಂತೆಯೇ ಆ ವ್ಯಕ್ತಿಗಳೂ ಸ್ಥಳದಿಂದ ಕಾಲ್ಕಿತ್ತರು.

ಒಟ್ಟು ₹ 1,34,09,000 ನಗದನ್ನು ವಶಪಡಿಸಿಕೊಳ್ಳಲಾಗಿದೆ. ಜಯನಗರ ಪೊಲೀಸ್ ಠಾಣೆಗೆ ಚುನಾವಣಾಧಿಕಾರಿಗಳು ದೂರು ನೀಡಿದ್ದು, ನ್ಯಾಯಾಲಯದ ಅನುಮತಿ ಪಡೆದು ಎಫ್‌ಐಆರ್ ದಾಖಲಿಸಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಐವರು ಪರಾರಿಯಾದ ಫಾರ್ಚೂನರ್ ಕಾರಿನ ನೋಂದಣಿ ಸಂಖ್ಯೆಯನ್ನು ಪತ್ತೆಮಾಡಿರುವ ಅಧಿಕಾರಿಗಳು, ಈ ಕುರಿತು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ವಶಪಡಿಸಿಕೊಂಡ ನಗದು ಯಾರಿಗೆ ಸೇರಿದ್ದು ಎಂಬುದರ ಕುರಿತು ಬಿಜೆಪಿ ಮತ್ತು ಕಾಂಗ್ರೆಸ್ ಮುಖಂಡರ ಮಧ್ಯೆ ಆರೋಪ- ಪ್ರತ್ಯಾರೋಪ ಜೋರಾಗಿದೆ.

'ಜಪ್ತಿ ಮಾಡಿದ ಹಣ ಬಿಜೆಪಿಯವರದ್ದು'

ರಾಮಲಿಂಗಾ ರೆಡ್ಡಿ

'ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಜಯನಗರದಲ್ಲಿ ಚುನಾವಣಾ ಅಧಿಕಾರಿಗಳು ಜಪ್ತಿ ಮಾಡಿದ ಹಣಕ್ಕೂ ನಮಗೂ, ನಮ್ಮ ಪಕ್ಷಕ್ಕೂ ಯಾವುದೇ ಸಂಬಂಧ ಇಲ್ಲ. ಬಿಜೆಪಿಯವರು ವಿನಾ ಕಾರಣ ಕಾಂಗ್ರೆಸ್ ಮೇಲೆ ಆರೋಪ ಮಾಡುತ್ತಿದ್ದಾರೆ' ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಬಿಜೆಪಿಯ ದಾಖಲೆಯಿಲ್ಲದ ಕೋಟ್ಯಂತರ ರೂಪಾಯಿ ಹಣವನ್ನು ಅಧಿಕಾರಿಗಳು ಜಪ್ತಿ ಮಾಡಿದ್ದು, ಚುನಾವಣಾ ಬಾಂಡ್ ರೂಪದಲ್ಲಿ ಕೊಳ್ಳೆ ಹೊಡೆದ ಪಾಪದ ಹಣ ಇದು' ಎಂದರು.

'ಈ ಹಣವನ್ನು ಪ್ರಧಾನಿಯ ಬೆಂಗಳೂರು ಕಾರ್ಯಕ್ರಮಕ್ಕೆ ಜನ ಸೇರಿಸಲು ಬಳಸುವ ಉದ್ದೇಶದಿಂದ ಸಾಗಿಸುತ್ತಿದ್ದರೇ' ಎಂದು ಪ್ರಶ್ನಿಸಿದರು.

'ಕೋಟ್ಯಂತರ ರೂಪಾಯಿ ಹಣ ಖರ್ಚು ಮಾಡಿ ಚುನಾವಣೆ ನಡೆಸುವುದು, ಬಹುಮತ ಬರದಿದ್ದಾಗ ನೂರಾರು ಕೋಟಿ ಹಣ ಹಾಕಿ ಶಾಸಕರು, ಸಂಸದರನ್ನು ಖರೀದಿಸುವುದು ಬಿಜೆಪಿ ಜಾಯಮಾನ. ಈಗ ಅವರ ಹಣವಂತೂ ಹೋಗಿದೆ, ಮಾನವನ್ನಾದರೂ ಉಳಿಸಿಕೊಳ್ಳಬೇಕು ಎನ್ನುವ ಕಾರಣದಿಂದ ಕಾಂಗ್ರೆಸ್ ಮೇಲೆ ಆಧಾರ ರಹಿತ ಆರೋಪವನ್ನು ಮಾಡುತ್ತಿದ್ದಾರೆ' ಎಂದರು.

'ಬೆಂಗಳೂರು ದಕ್ಷಿಣ ಲೋಕಸಭಾ ಚುನಾವಣೆಯಲ್ಲಿ ಈ ಬಾರಿ ಬಿಜೆಪಿಗೆ ಸೋಲುವ ಭಯ ಉಂಟಾಗಿದೆ. ಹೀಗಾಗಿ, ಲೂಟಿ ಮಾಡಿದ ಹಣವನ್ನೆಲ್ಲ ಖರ್ಚು ಮಾಡಿಯಾದರೂ ಶತಾಯಗತಾಯ ಗೆಲ್ಲಬೇಕೆಂದು ಬಿಜೆಪಿಯವರು ಹೊರಟಿರುವಂತಿದೆ. ನಾವು ಜನ ಬಲ ನಂಬಿದವರು. ಬಿಜೆಪಿಯಂತೆ ಹಣ ಬಲವನ್ನು ಅಲ್ಲ' ಎಂದರು.

'ವಶಪಡಿಸಿಕೊಂಡ ಹಣ ಕಾಂಗ್ರೆಸ್‌ನದ್ದು'

ತೇಜಸ್ವಿ ಸೂರ್ಯ

'ಜಯನಗರದಲ್ಲಿ ಚುನಾವಣಾಧಿಕಾರಿಗಳು ವಶಪಡಿಸಿಕೊಂಡ ನಗದು ಕಾಂಗ್ರೆಸ್‌ನವರದ್ದು. ಹಣ ಸಾಗಿಸುತ್ತಿರುವ ಕುರಿತು ಅಧಿಕಾರಿಗಳಿಗೆ ನಾನೇ ಖುದ್ದಾಗಿ ಮಾಹಿತಿ ನೀಡಿದ್ದೆ' ಎಂದು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಹಾಲಿ ಸಂಸದ, ಬಿಜೆಪಿ ಅಭ್ಯರ್ಥಿ ತೇಜಸ್ವಿ ಸೂರ್ಯ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಶನಿವಾರ ಬೆಳಿಗ್ಗೆ ದೂರವಾಣಿ ಕರೆಮಾಡಿದ್ದ ವ್ಯಕ್ತಿಯೊಬ್ಬರು ಚುನಾವಣೆಗಾಗಿ ಕಾಂಗ್ರೆಸ್ ಅಕ್ರಮವಾಗಿ ಹಣ ಸಾಗಿಸುತ್ತಿರುವ ಮಾಹಿತಿಯನ್ನು ನೀಡಿದ್ದರು. ಕಾಂಗ್ರೆಸ್ ನಾಯಕರು ಯಾರಿಂದ ಬಲವಂತದಿಂದ ಹಣ ಪಡೆದಿದ್ದರೋ ಅವರಿಂದಲೇ ಮಾಹಿತಿ ಸೋರಿಕೆಯಾಗಿತ್ತು' ಎಂದರು.

'ಹಣ ಸಾಗಣೆ ಕುರಿತು ಮಾಹಿತಿ ಸಿಕ್ಕ ತಕ್ಷಣ ನಾನು ಚುನಾವಣಾಧಿಕಾರಿಗಳ ಗಮನಕ್ಕೆ ತಂದಿದ್ದೆ' ಎಂದು ಹೇಳಿದರು.

ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಸೋಲು ಖಚಿತ ಎಂಬುದು ಕಾಂಗ್ರೆಸ್‌ನವರಿಗೆ ಅರಿವಾಗಿದೆ. ಹೀಗಾಗಿ ಹಣದಿಂದ ಚುನಾವಣೆ ಗೆಲ್ಲಲು ಹೊರಟಿದ್ದಾರೆ ಎಂದು ಆರೋಪಿಸಿದರು.

ಕೆಲವು ದಿನಗಳ ಹಿಂದೆ ಪಿಸ್ತೂಲ್ ಹೊಂದಿದ್ದ ವ್ಯಕ್ತಿಯೊಬ್ಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಚುನಾವಣಾ ಪ್ರಚಾರದ ವೇಳೆ ಹಾರ ಹಾಕಿದ್ದ. ಜನರನ್ನು ಭಯಪಡಿಸುವ ಉದ್ದೇಶ ಇದರ ಹಿಂದಿತ್ತು. ಈಗ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಗೆಲ್ಲಲು ಯತ್ನಿಸುತ್ತಿದ್ದಾರೆ ಎಂದು ತಿಳಿಸಿದರು.

'ಬೆಂಗಳೂರು ದಕ್ಷಿಣ ಕ್ಷೇತ್ರದ ಜನರು ಹಣಬಲ, ತೋಳ್ಬಲಕ್ಕೆ ಮಣಿಯುವುದಿಲ್ಲ. ಮೋದಿ ಅವರಿಗಾಗಿ ಮತ್ತೆ ಬಿಜೆಪಿಯನ್ನು ಗೆಲ್ಲಿಸುತ್ತಾರೆ' ಎಂದರು.

'ರಾಜ್ಯಕ್ಕೇನು ಕೊಡುಗೆ ನೀಡಿದ್ದೀರಿ ತಿಳಿಸಿ'

ಯಾವ ಮುಖ ಹೊತ್ಕೊಂಡು ಮತ ಕೇಳಲು ಬರುತ್ತಿದ್ದೀರಿ: ಪ್ರಧಾನಿಗೆ ಸಿ.ಎಂ ಸಿದ್ದರಾಮಯ್ಯ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಮೈಸೂರು: 'ಲೋಕಸಭಾ ಚುನಾವಣೆ ಪ್ರಚಾರಕ್ಕೆ ಭಾನುವಾರ (ಏ.14) ಮೈಸೂರು ಹಾಗೂ ಮಂಗಳೂರಿಗೆ ಬರುತ್ತಿರುವ ಪ್ರಧಾನಿ ನರೇಂದ್ರ ಮೋದಿಯವರು, ರಾಜ್ಯಕ್ಕೆ ಏನೇನು ಕೊಡುಗೆಗಳನ್ನು ನೀಡಿದ್ದಾರೆಂಬುದನ್ನು ತಿಳಿಸಲಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಹಾಕಿದರು.

ಇಲ್ಲಿ ಪತ್ರಕರ್ತರೊಂದಿಗೆ ಶನಿವಾರ ಮಾತನಾಡಿ, 'ಪ್ರಚಾರಕ್ಕೆಂದು ಅವರು ಬರಲು ನಮ್ಮ ಅಭ್ಯಂತರವೇನಿಲ್ಲ. ನಿರುದ್ಯೋಗ ನಿವಾರಣೆಗೆ ಏನು ಮಾಡಿದ್ದಾರೆ? ತೆರಿಗೆ ಹಂಚಿಕೆಯಲ್ಲಿ ಕರ್ನಾಟಕಕ್ಕೆ ಆಗಿರುವ ಅನ್ಯಾಯ ಪರಿಹರಿಸಲು ಏನು ಮಾಡಿದ್ದಾರೆ? ಬರ ಪರಿಹಾರವನ್ನು ಈವರೆಗೂ ಕೊಟ್ಟಿಲ್ಲವೇಕೆ ಎಂಬುದನ್ನೆಲ್ಲ ತಿಳಿಸಬೇಕು' ಎಂದು ಒತ್ತಾಯಿಸಿದರು.

ರಾಜ್ಯಕ್ಕಾದ ಅನ್ಯಾಯ ಸರಿಪಡಿಸುವಿರಾ?: ಕೃಷ್ಣಬೈರೇಗೌಡ

ಬೆಂಗಳೂರು: 'ಭದ್ರಾ ಮೇಲ್ದಂಡೆ ಯೋಜನೆಗೆ ₹5,300 ಕೋಟಿ ಬಿಡುಗಡೆ ಮಾಡುತ್ತೇವೆಂದು ಘೋಷಣೆ ಮಾಡುವಿರಾ? ಮಹದಾಯಿ ಯೋಜನೆಗೆ ಬಾಕಿ ಇರುವ ಪರಿಸರ ಇಲಾಖೆ ಅನುಮತಿ ಪತ್ರ ಕೊಡಿಸುವಿರಾ' ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ಕಂದಾಯ ಸಚಿವ ಕೃಷ್ಣ ಬೈರೇಗೌಡ ಪ್ರಶ್ನಿಸಿದರು.

ಚುನಾವಣಾ ಪ್ರಚಾರ ಕೈಗೊಳ್ಳಲು ಮೋದಿ ಭಾನುವಾರ ರಾಜ್ಯಕ್ಕೆ ಬರುತ್ತಿರುವ ಹಿನ್ನೆಲೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಮೇಕೆದಾಟು ಯೋಜನೆಗೆ ಕಳೆದ ಐದು ವರ್ಷಗಳಿಂದ ಅನುಮತಿ ಕೊಟ್ಟಿಲ್ಲ. ಈ ಅನ್ಯಾಯ ಸರಿಪಡಿಸುವಿರಾ? ದಕ್ಷಿಣ ಭಾರತದ ಎಲ್ಲ ಲೋಕಸಭಾ ಕ್ಷೇತ್ರಗಳನ್ನು ಹೇಗೆ ಇವೆಯೊ ಅದೇ ರೀತಿ ಉಳಿಸುವಿರಾ' ಎಂದೂ ಕೇಳಿದರು.

ಶೋಭಾ ಬಗ್ಗೆ ಏಕೆ ಮಾತನಾಡುತ್ತಿಲ್ಲ?: ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ವಿ. ರಾಜೀವ್ ಗೌಡ ಮಾತನಾಡಿ,

'15ನೇ ಹಣಕಾಸು ಆಯೋಗದ ಪ್ರಕಾರ ರಾಜ್ಯಕ್ಕೆ ಬಿಡುಗಡೆ ಮಾಡಬೇಕಿದ್ದ ₹ 5,495 ಕೋಟಿ ವಿಶೇಷ ಅನುದಾನವನ್ನು ಯಾಕೆ ಬಿಡುಗಡೆ ಮಾಡಿಲ್ಲ. 15ನೇ ಹಣಕಾಸು ಆಯೋಗದಲ್ಲಿ ಪೆರಿಫೆರಲ್ ರಿಂಗ್ ರಸ್ತೆಗೆ ನಿಗದಿಯಾಗಿದ್ದ ₹ 3 ಸಾವಿರವನ್ನು ತಡೆಹಿಡಿದಿದ್ದು ಏಕೆ. ಬಹಿರಂಗ ಚರ್ಚೆಗೆ ಕರೆದರೂ ಹಣಕಾಸು ಸಚಿವರು ಬರುತ್ತಿಲ್ಲವೇಕೆ. ಕಾಂಗ್ರೆಸ್ ಅಭ್ಯರ್ಥಿಗಳ ವಿರುದ್ಧ ಜಾರಿ ನಿರ್ದೇಶನಾಲಯ ಇಡಿ, ಐಟಿ, ಸಿಬಿಐ ದಾಳಿ ನಡೆಸುತಿರುವ ಕೇಂದ್ರ ಸರ್ಕಾರ ಸಚಿವೆ ಶೋಭಾ ಬಗ್ಗೆ ಏಕೆ ಮಾತನಾಡುತ್ತಿಲ್ಲ' ಎಂದು ಪ್ರಧಾನಿಯನ್ನು ಪ್ರಶ್ನಿಸಿದರು.

'ಸಂವಿಧಾನ ಬದಲಾಯಿಸಲು ಸಾಧ್ಯವಿಲ್ಲ' ಎಂಬ ಮೋದಿ ಹೇಳಿಕೆಗೆ ತಿರುಗೇಟು ನೀಡಿದ ಅವರು, 'ಬಿಜೆಪಿ ಎಂದಿಗೂ ಸಂವಿಧಾನದ ಪರವಾಗಿಲ್ಲ. ಸಂವಿಧಾನ ಬದಲಾಯಿಸುತ್ತೇವೆ ಎಂದು ಸಂಸದ ಅನಂತ್‌ಕುಮಾರ್ ಹೆಗಡೆ ಹೇಳುತ್ತಲೇ ಇದ್ದರು. ಅವರ ಮೇಲೆ ಕ್ರಮ ಕೈಗೊಳ್ಳಲಿಲ್ಲವೇಕೆ? ಅವರು ಕೇಂದ್ರ ಸಚಿವರೂ ಆಗಿದ್ದರು. ಅವರನ್ನೇಕೆ ಸ್ಥಾನದಿಂದ ತೆಗೆಯಲಿಲ್ಲ. ಅವರು ಉತ್ತರ ಕನ್ನಡದಲ್ಲಿ ಏನೂ ಅಭಿವೃದ್ಧಿ ಕೆಲಸ ಮಾಡಿರಲಿಲ್ಲ. ಮನೆಯಲ್ಲೇ ಕುಳಿತಿದ್ದರು. ಚುನಾವಣೆ ಸಮಯದಲ್ಲಿ ಹೊರಗೆ ಬಂದಿದ್ದರು. ಸೋಲುತ್ತಾರೆಂದು ವರದಿ ಬಂದಿದ್ದರಿಂದಲೇ ಅವರಿಗೆ ಟಿಕೆಟ್ ಕೊಟ್ಟಿಲ್ಲ' ಎಂದು ಟೀಕಿಸಿದರು.

ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದಲ್ಲಿ ಆರೋಪಿಗಳನ್ನು ಸೆರೆ ಹಿಡಿದಿದ್ದಕ್ಕೆ ಎನ್‌ಐಎ ಮತ್ತು ರಾಜ್ಯ ಪೊಲೀಸರಿಗೆ ಧನ್ಯವಾದ ಹೇಳಿದ ಮುಖ್ಯಮಂತ್ರಿ, 'ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿದ ನಂತರ ಹೆಚ್ಚಿನ ವಿವರ ತಿಳಿದುಬರಲಿದೆ' ಎಂದು ಪ್ರತಿಕ್ರಿಯಿಸಿದರು.

'ದೇಶದಲ್ಲಿ ಎನ್‌ಡಿಎಗೆ ಬಹುಮತ ಬರುವುದಿಲ್ಲ. ಐಎನ್‌ಡಿಐಎ ಒಕ್ಕೂಟಕ್ಕೆ ಬಹುಮತ ಸಿಗುವ ನಿರೀಕ್ಷೆ ಇದೆ. ರಾಜ್ಯದಲ್ಲೂ ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚು ಸ್ಥಾನ ಸಿಗಲಿದೆ. 400ಕ್ಕೂ ಹೆಚ್ಚು ಸ್ಥಾನ ಪಡೆಯುವುದಾಗಿ ಹೇಳಿಕೊಳ್ಳುತ್ತಿರುವ ಬಿಜೆಪಿಯದ್ದು ಜನರ ದಾರಿತಪ್ಪಿಸುವ ಕಾರ್ಯತಂತ್ರ' ಎಂದು ದೂರಿದರು.

'ಕೇವಲ ಸುಳ್ಳುಗಳ ಮೇಲೆ ಸವಾರಿ ಮಾಡಿಕೊಂಡು 10 ವರ್ಷ ಮುಗಿಸಿದ ಮೋದಿಯವರು ಯಾವ ಮುಖ ಹೊತ್ತುಕೊಂಡು ಮೈಸೂರಿಗೆ ಮತ ಕೇಳುವುದಕ್ಕಾಗಿ ಬರುತ್ತಿದ್ದಾರೆ?' ಎಂದು ನಂತರ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶದಲ್ಲಿ ಕೇಳಿದರು.

'ಪ್ರವಾಹದಿಂದ ಹಾನಿಯಾದಾಗ ನೋಡುವುದಕ್ಕೂ ಬರಲಿಲ್ಲ. ಈಗ ಮತಕ್ಕಾಗಿ ಬರುತ್ತಿದ್ದೀರಿ. ಕರ್ನಾಟಕದ ಬಗ್ಗೆ ನಿಮಗೆ ದ್ವೇಷವಿದೆ' ಎಂದು ಮೋದಿ ವಿರುದ್ಧ ಹರಿಹಾಯ್ದರು.

'ಸುಳ್ಳು ಹೇಳಿದರೂ ಜನ ಮೋದಿ ಮೋದಿ ಎಂದು ಕೂಗುತ್ತಾರೆಂದು, ಅವರು ಸುಳ್ಳು ಹೇಳೋದನ್ನು ಮತ್ತಷ್ಟು ಹೆಚ್ಚಿಸಿದ್ದಾರೆ' ಎಂದು ಅವರು ಟೀಕಿಸಿದರು.

'ದೇವೇಗೌಡರು ಜೆಡಿಎಸ್ ಅಸ್ತಿತ್ವದ ಭವಿಷ್ಯ ನುಡಿಯಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇವೇಗೌಡರು ನಮ್ಮ ಸರ್ಕಾರದ ಅಸ್ತಿತ್ವದ ಭವಿಷ್ಯ ನುಡಿಯುವುದಕ್ಕಿಂತ, ಅವರ ಪಕ್ಷದ ಅಸ್ತಿತ್ವದ ಭವಿಷ್ಯ ನುಡಿಯಲಿ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದರು.

'ರಾಜ್ಯ ಸರ್ಕಾರಕ್ಕೆ ಗ್ಯಾರಂಟಿ ಇಲ್ಲ' ಎಂದು ದೇವೇಗೌಡರು ಶುಕ್ರವಾರ ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ದೇವೇಗೌಡರು ಎಷ್ಟು ಭವಿಷ್ಯ ಕಾಲವನ್ನು ನೋಡಿದ್ದಾರೊ, ಅಷ್ಟೇ ಭವಿಷ್ಯ ಕಾಲವನ್ನು ನಾನೂ ನೋಡಿದ್ದೇನೆ. ಅವರಿಗೆ 60 ವರ್ಷಗಳ ರಾಜಕೀಯದ ಅನುಭವವಿದ್ದರೆ, ನನಗೆ 40 ವರ್ಷಗಳ ಅನುಭವವಿದೆ' ಎಂದರು.

'136ಕ್ಕೂ ಹೆಚ್ಚು ಶಾಸಕರು ನಮ್ಮ ಬಳಿ ಇದ್ದಾರೆ. ಬಿಜೆಪಿಯಲ್ಲಿ ತಮ್ಮ ಪಕ್ಷ ವಿಲೀನವಾಗುತ್ತದೆಯೇ ಅಥವಾ ಪ್ರತ್ಯೇಕ ಅಸ್ತಿತ್ವ ಉಳಿಸಿಕೊಳ್ಳಲಿದೆಯೇ ಎಂದು ಅವರು ಮೊದಲು ಜನರಿಗೆ ತಿಳಿಸಿಲಿ. ಅವರೇ ಕಟ್ಟಿದ ಪಕ್ಷ ಹಾಗೂ ಅದರ ಬಗ್ಗೆ ಅವರ ನಿಷ್ಠೆಯನ್ನು ನಾನು ಪ್ರಶ್ನೆ ಮಾಡುವುದಿಲ್ಲ. ನಮ್ಮ ಸರ್ಕಾರದ ಅಸ್ತಿತ್ವ ಪಕ್ಕಕ್ಕಿರಲಿ, ಈಗ ಅವರ ಪಕ್ಷದ ಅಸ್ತಿತ್ವವೇ ಇಲ್ಲವಲ್ಲ' ಎಂದರು.

ಲಿಂಗಾಯತ, ಒಕ್ಕಲಿಗರಿಗೆ ಮೀಸಲಾತಿ ಕೊಟ್ಟಿದ್ದು ನನ್ನ ನೇತೃತ್ವದ ಕಾಂಗ್ರೆಸ್ ಸರ್ಕಾರ. ಆದರೆ, ದೇವೇಗೌಡರು ಮೀಸಲಾತಿ ಕೊಟ್ಟಿದ್ದು ತಾವೆಂದು ಹೇಳಿಕೊಳ್ಳುತ್ತಾರೆ
ಎಂ.ವೀರಪ್ಪ ಮೊಯಿಲಿ
ಕಾಂಗ್ರೆಸ್ ಮುಖಂಡ

ಸಂವಿಧಾನದ ಬಗ್ಗೆ ಬದ್ಧತೆ ಇದ್ದರೆ ಉಚ್ಚಾಟಿಸಲಿ: 'ಅಂಬೇಡ್ಕರ್ ಅವರೇ ಬಂದರೂ ಸಂವಿಧಾನ ಬದಲಾವಣೆ ಮಾಡುವುದಿಲ್ಲ ಎಂಬ ಪ್ರಧಾನಿ ನರೇಂದ್ರ ಮೋದಿ ಹೇಳಿಕೆ ಬಗ್ಗೆ ಕೇಳಿದಾಗ, 'ಈ ವಿಚಾರವಾಗಿ ಈಗ ಮಾತನಾಡುತ್ತಿರುವ ಪ್ರಧಾನಿ, ಸಂವಿಧಾನ ಬದಲಿಸುತ್ತೇವೆ ಎಂದ ತಮ್ಮ ಪಕ್ಷದ ನಾಯಕರನ್ನು ಪಕ್ಷದಿಂದ ಉಚ್ಚಾಟಿಸಲಿಲ್ಲವೇಕೆ' ಎಂದು ಪ್ರಶ್ನಿಸಿದರು.

'ಬಿಜೆಪಿಗೆ 400 ಸೀಟು ಬಂದರೆ ಸಂವಿಧಾನ ಬದಲಿಸುತ್ತೇವೆ ಎಂದು ಅವರ ಪಕ್ಷದ ನಾಯಕರು ಹೇಳುತ್ತಿದ್ದಾರೆ. ಇಷ್ಟು ದಿನ ಮೌನವಾಗಿದ್ದು, ಸಂವಿಧಾನಕ್ಕೆ ಅಪಾಯ ಬಂದಿದೆ, ನಮ್ಮ ಹಕ್ಕುಗಳಿಗೆ ಕುತ್ತು ಬಂದಿದೆ ಎಂದು ಪರಿಶಿಷ್ಟರು, ಬಡವರು ಸೇರಿದಂತೆ ಎಲ್ಲ ವರ್ಗದವರು ಧ್ವನಿ ಎತ್ತಿದ ನಂತರ ಅವರು ಈ ಹೇಳಿಕೆ ನೀಡಿದ್ದಾರೆ. ಇದು ರಾಜಕೀಯ ಹೇಳಿಕೆ' ಎಂದು ಅವರು ಟೀಕಿಸಿದರು.

'ಗ್ಯಾರಂಟಿಯಿಂದ ಹಳ್ಳಿ ಮಹಿಳೆಯರು ದಾರಿ ತಪ್ಪಿದ್ದಾರೆ'

ತುರುವೇಕೆರೆ: 'ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಹಳ್ಳಿಯ ತಾಯಂದಿರು ಸ್ವಲ್ಪ ದಾರಿ ತಪ್ಪಿದ್ದಾರೆ' ಎಂದು ಜೆಡಿಎಸ್ ಮುಖಂಡ, ಮಂಡ್ಯ ಲೋಕಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಗ್ಯಾರಂಟಿಗಳಿಂದ ಇಂದು ಗ್ರಾಮಗಳಲ್ಲಿ ಕೌಟುಂಬಿಕ ಬದುಕು ಏನಾಗಿದೆ

ಕುಲುಮೆ ಕಳಚಿದ ಕಮ್ಮಾರರು

ವಿಜಯಪುರದ ಸೋಲಾಪುರ ರಸ್ತೆ ಬದಿ ಕಬ್ಬಿಣವನ್ನು ಹದಗೊಳಿಸಿ ಬಡಿಯುತ್ತಿರುವ ಲೋಹರ್ ಸಮುದಾಯದವರು –ಪ್ರಜಾವಾಣಿ ಚಿತ್ರ: ಸಂಜೀವ ಆಕ್ಕಿ

ಒಂದನೇ ಪುಟದಿಂದ

ಕೃಷಿ ಸಲಕರಣೆ ತಯಾರಿಕೆ ಹಾಗೂ ಗೃಹ ನಿರ್ಮಾಣ ಕ್ಷೇತ್ರದಲ್ಲಿ ಕಮ್ಮಾರರ ಕೈಚಳಕ ಅನಿವಾರ್ಯವಾಗಿತ್ತು. ಕಟ್ಟಿಗೆಯಿಂದ ಮಾಡುವ ಚಕ್ಕಡಿಗಳ ಬಳಕೆ, ರೆಂಟೆ, ಕುಂಟೆ, ನೇಗಿಲು, ಕುಡಗಳು ಕಾರ್ಖಾನೆಯಲ್ಲೇ ತಯಾರಾಗುತ್ತಿವೆ. ಇಪ್ಪತ್ತು ಜನ ಮಾಡುತ್ತಿದ್ದ ಕೆಲಸವನ್ನು ಒಂದು ಟ್ರ್ಯಾಕ್ಟರ್ ಮಾಡುತ್ತಿದೆ. ಕಮ್ಮಾರ ಶಾಲೆಯಲ್ಲಿ ತಯಾರಾಗುತ್ತಿದ್ದ ಚಕ್ಕಡಿ ಗಾಲಿಯ ಹಳಿಗಳು ಈಗ ಇಲ್ಲ. ಚಕ್ಕಡಿಗಳಿಗೂ ಟೈರ್‌ನ ಗಾಲಿಗಳ ಬಳಕೆ ಬಂದ ಮೇಲೆ ಈ ಕೆಲಸ ಸಂಪೂರ್ಣ ನಿಂತುಹೋಗಿದೆ. ಹೀಗಾಗಿ, ಇಲ್ಲಿನ ಕಮ್ಮಾರರಿಗೆ ಕೆಲಸವೇ ಇಲ್ಲ.

ಚಚಡಿ ಮಾತ್ರವಲ್ಲ, ಬೆಳಗಾವಿ ಜಿಲ್ಲೆಯ ಯರಗಟ್ಟಿ, ಬೈಲಹೊಂಗಲ, ಯರಝರ್ವಿ, ಸೊಪ್ಪಡ್ಲ, ಕಡಕೋಳ, ಕೊಳವಿ ಮುಂತಾದ ಗ್ರಾಮಗಳ ಸ್ಥಿತಿಯೂ ಹೀಗೇ ಇದೆ. ಇಲ್ಲಿನ ಜನ ಗೋವಾ, ಬೆಂಗಳೂರು, ಬೆಳಗಾವಿ, ಮುಂಬೈ, ಪುಣೆ ಮುಂತಾದ ಕಡೆಯ ಕಾರ್ಖಾನೆಗಳನ್ನು ಸೇರಿಕೊಂಡಿದ್ದಾರೆ. ಒಂದಿಷ್ಟು ಮಂದಿ ಟ್ರ್ಯಾಕ್ಟರ್ ರಿಪೇರಿ, ಮೇಜು, ಕಿಟಕಿ, ಬಾಗಿಲು ಇವೇ ಮುಂತಾದ ಕೆಲಸ ಮಾಡುತ್ತಾರೆ.

ಮಳೆಗಾಲದಲ್ಲಿ ಕೃಷಿ ಬಿರುಸುಗೊಳ್ಳುತ್ತಿದ್ದುದರಿಂದ ಊರಕಮ್ಮಾರನಿಗೆ ಎಲ್ಲ ರೈತರನ್ನೂ ಸಂಬಾಳಿಸುವುದು ಕಷ್ಟವಾಗುತ್ತಿತ್ತು. ಈ ವೇಳೆ ಬಯಲುಕಮ್ಮಾರರು ಬಂದು ಊರಹೊರಗೆ ಟೆಂಟ್ ಹಾಕುತ್ತಿದ್ದರು. ಇವರಲ್ಲಿ ಬಹುತೇಕರು ಮಹಾರಾಷ್ಟ್ರದಿಂದ ವಲಸೆ ಬಂದವರು ಇರುತ್ತಿದ್ದರು. ಬಿತ್ತುವ ಸಮಯದಾಗ ನೆಲ ಹದಮಾಡುವ ರೈತರ ಗಳೇವು ಸಾಮಾನುಗಳನ್ನು ಹರಿತ ಮಾಡುತ್ತಿದ್ದರು. ಅದಕ್ಕೆ ಕಿತ್ತೂರು ಕರ್ನಾಟಕದಲ್ಲಿ ಬಾಯಿ ಹಣಿಯುವುದು ಎಂದು ಹೇಳಿದರೆ, ಕಲ್ಯಾಣ ಕರ್ನಾಟಕದಲ್ಲಿ ಬಾಯಿ ತೊಳೆಸುವುದು ಎನ್ನುತ್ತಾರೆ.

ಮಧ್ಯಪ್ರದೇಶದಿಂದ ಹೊಟ್ಟೆಪಾಡಿಗಾಗಿ ಪ್ರತಿ ವರ್ಷ ವಿಜಯಪುರಕ್ಕೆ ಬರುವ 'ಲೋಹರ್' (ಕಮ್ಮಾರ) ಸಮುದಾಯ ನಗರದ ಪ್ರಮುಖ ರಸ್ತೆಗಳ ಬದಿ ಸಂಸಾರ ಸಹಿತ ಟೆಂಟ್ ಹಾಕಿಕೊಳ್ಳುತ್ತಾರೆ. ಬಿಸಿಲು, ಚಳಿ, ಮಳೆ, ಹಗಲು, ರಾತ್ರಿ ಲೆಕ್ಕಿಸದೇ ವಸ್ತುಗಳನ್ನು ತಯಾರಿಸಿ, ಅವುಗಳನ್ನು ಮಾರಿ, ಬದುಕು ಸಾಗಿಸುತ್ತಾರೆ. ಆರೇಳು ತಿಂಗಳು ವಿಜಯಪುರದಲ್ಲಿ ಕಮ್ಮಾರಿಕೆ ಕಾಯಕದಲ್ಲಿ ತೊಡಗಿ, ಹೋಳಿ ಹಬ್ಬಕ್ಕೆ ತಮ್ಮೂರಿಗೆ ಮರಳುತ್ತಾರೆ. ಇದರಲ್ಲಿ ಅವರು ಗಳಿಸುವುದು ಹೆಚ್ಚೇನಿಲ್ಲ.

ಊರು, ಸೂರಿಲ್ಲ: 'ಮಧ್ಯಪ್ರದೇಶದಲ್ಲಿ ಲೋಹರ್ ಸಮುದಾಯ ಆರ್ಥಿಕವಾಗಿ ಅತ್ಯಂತ ಹಿಂದುಳಿದಿದೆ. ಅನಕ್ಷರಸ್ಥ ಹಾಗೂ ಜಾತಿ ವ್ಯವಸ್ಥೆಯಲ್ಲಿ ತುಳಿತಕ್ಕೆ ಒಳಗಾಗಿದೆ. ನಮಗೆ ಯಾವುದೇ ಸರ್ಕಾರಗಳಿಂದ ಯಾವುದೇ ಸೌಲಭ್ಯ, ಸಹಾಯ ಸಿಗುತ್ತಿಲ್ಲ. ಹೀಗಾಗಿ ನಾವು ನಂಬಿದ ಕಾಯಕದೊಂದಿಗೆ ಅಲೆಮಾರಿಗಳಾಗಿದ್ದೇವೆ' ಎಂದು ಮಧ್ಯಪ್ರದೇಶದ ಗುನಾ ಜಿಲ್ಲೆಯ ಹರಿಪುರದ ನಿವಾಸಿ ಮುನ್ಸಿಲಾಲ್ ತಿಳಿಸಿದರು.

'ನಮ್ಮೂರಲ್ಲಿ ನಮಗೆ ನೆಲೆ ಇಲ್ಲ, ಉದ್ಯೋಗವೂ ಇಲ್ಲ. ಉಳುಮೆಗೆ ಭೂಮಿ ಇಲ್ಲ. ಊರಲ್ಲಿ ಇದ್ದರೆ ಉಪವಾಸ ಇರಬೇಕು ಎಂಬ ಕಾರಣಕ್ಕೆ 20 ವರ್ಷಗಳಿಂದ ನಾನು ಕುಟುಂಬ ಸಮೇತ ವಿಜಯಪುರಕ್ಕೆ ಬರುತ್ತೇನೆ. ಕುಟುಂಬದವರೆಲ್ಲರೂ ಕೂಡಿ ಕೆಲಸ ಮಾಡುವುದರಿಂದ ಪ್ರತಿ ದಿನ ₹1 ಸಾವಿರ ದುಡಿಮೆ ಆಗುತ್ತದೆ. ದೈನಂದಿನ ಬದುಕು ಸಾಗಿಸಲು ಸಾಕು. ಏನೂ ಉಳಿಯಲ್ಲ' ಎಂದು ಅವರು ಹೇಳಿದರು.

'ನನ್ನ ಮಕ್ಕಳು, ಮೊಮ್ಮಕ್ಕಳು ಈ ಕೆಲಸ ಮಾಡೋದು ಬೇಡ. ನನ್ನ ತಲೆಮಾರಿಗೆ ಈ ಕೆಲಸ ಸಾಕು. ಸರ್ಕಾರ ನಮಗೆ ಉಳುಮೆ ಮಾಡಲು ಭೂಮಿ ಕೊಟ್ಟರೆ ನಮ್ಮೂರಲ್ಲೇ ನಾವು ಇರುತ್ತೇವೆ' ಎಂದು ಮುನ್ಸಿಲಾಲ್ ದನಿಗೂಡಿಸಿದರು.

'ಕಮ್ಮಾರರು ಮಳೆಗಾಲದಲ್ಲಿ ಕೃಷಿ ಕೆಲಸದ ಹೊಸ ಸಾಮಾನುಗಳನ್ನು ತಯಾರಿಸುವುದು ಕಡಿಮೆಯೇ. ಅದೆಲ್ಲಾ ಬ್ಯಾಸಗಿ ಸಮಯದಾಗ ಮಾಡೋ ಕೆಲಸ. ಕೃಷಿ ಕೆಲಸದ ವೇಳೆ ಮರದ ಬೇರುಗಳು ತಗುಲಿ, ಕಲ್ಲು ತಾಗಿ ವಸ್ತುಗಳು ಮುರಿದರೆ ಮಾತ್ರ ಆಗ ಹೊಸದನ್ನು ತಯಾರಿಸುತ್ತಾರೆ. ಇಲ್ಲದಿದ್ದರೆ, ಬಂಡಿಗೆ ಹಳಿ ಕಟ್ಟುವುದು, ಹೊಸ ಕುಡ ತಯಾರಿಸೋದು ಬ್ಯಾಸಗಿ ಕೆಲಸ. ಮಳೆಗಾಲದಾಗ ನಾವು ಕುಲುಮ್ಯಾಗ ಕುಂತ್ರ ಹೊಲದಾಗಿನ ಕೆಲಸ ನಿಲ್ಲತ್ತಲ್ರಿ' ಎನ್ನುತ್ತಾರೆ ರೈತ ಗುರುಲಿಂಗಪ್ಪ ರಾಜಾಪೂರ.

ಕೃಷಿ ಕೆಲಸದಲ್ಲಿ ರೈತನ ಎರಡೂ ಕೈಗಳಂತಿದ್ದವರು ಕಮ್ಮಾರರು ಮತ್ತು ಬಡಿಗೇರರು. ಕೃಷಿಯಲ್ಲಿ ಯಂತ್ರೋಪಕರಣಗಳ ಬಳಕೆ, ನಗರೀಕರಣ ಹೆಚ್ಚಾದಂತೆ ಬಡಗಿಗಳು ಬಾಗಿಲು, ಕಿಟಕಿ, ಮಂಚ, ಮೇಜು, ಕುರ್ಚಿ ಎಂದು ಹೊಸ ಹೊಸ ವಸ್ತುಗಳನ್ನು ತಯಾರಿಸುತ್ತಾ ಆಧುನಿಕತೆಗೆ ಒಗ್ಗಿಕೊಂಡಿದ್ದಾರೆ. ಆದರೆ, ಕಮ್ಮಾರನದು ಶೋಚನೀಯ ಸ್ಥಿತಿ. ಕೃಷಿ ಸಲಕರಣೆಗಳೆಲ್ಲಾ ಕಾರ್ಖಾನೆಗಳಲ್ಲಿ ತಯಾರಾಗಿ ಮಾರುಕಟ್ಟೆಗೆ ಬರುತ್ತಿವೆ. ಇನ್ನು ಎತ್ತಿನ ಗಾಡಿಯ ಜಾಗಕ್ಕೆ ಟ್ರ್ಯಾಕ್ಟರ್ ಬಂದು ನಿಂತಿದೆ. ಉಳುಮೆಗೂ ಸೈ, ಮಾಲು ಹೇರೋದಕ್ಕೂ ಜೈ ಎಂದು ಎಲ್ಲದಕ್ಕೂ ಟ್ರ್ಯಾಕ್ಟರ್ ಬಳಕೆಯಾಗುತ್ತಿದೆ. ಹೀಗಾಗಿ ಹಲವೆಡೆ ಕಮ್ಮಾರ ಕುಲುಮೆ ಕಳಚಿಟ್ಟಿದ್ದಾನೆ. ಹತ್ತಾರು ಊರುಗಳನ್ನು ಹುಡುಕಿದರೂ ಕುಲುಮೆ ಕಾಣೋದು ಅಪರೂಪವಾಗಿದೆ.

ಬಂಡಿಗೆ ಹಳಿ ಕಟ್ಟುವ ವಿಧಾನ: ಎತ್ತಿನ ಗಾಡಿ ಗ್ರಾಮೀಣ ಭಾಗದ ರೈತರ ತೇರು ಎಂದೇ ಹೆಸರಾಗಿತ್ತು. ಅದಕ್ಕೆ ಇರುತ್ತಿದ್ದ ಕಬ್ಬಿಣ ಹಳಿಯ ಕಟ್ಟಿಗೆ ಗಾಲಿ ಇತ್ತೀಚೆಗೆ ಟೈರ್ ಗಾಲಿಗಳ ಆಗಮನದಿಂದ ನೇಪಥ್ಯಕ್ಕೆ ಸರಿದಿದೆ. ಕಟ್ಟಿಗೆ ಗಾಲಿಯ ಚಲನೆ ನಿಧಾನವಾದರೂ ಎಂಥದ್ದೇ ಕೆಸರು, ಮಣ್ಣು ಮತ್ತು ಉಸುಕು ತುಂಬಿದ ದಾರಿಯಲ್ಲೂ ಸರಾಗವಾಗಿ ಕಿತ್ತೋಡುತ್ತಿತ್ತು. ಅದಕ್ಕೆ ಹಳಿ ಬಿಗಿಯುವುದೇ ವಿಶೇಷ ಕ್ರಮವಾಗಿತ್ತು. ಪ್ರತಿಯೊಬ್ಬ ರೈತ ಎರಡು ವರ್ಷಕ್ಕೊಮ್ಮೆಯಾದರೂ ಹಳಿ ಬಿಗಿಸುತ್ತಿದ್ದ. ಹಳಿ ಬಿಗಿಯುವುದೆಂದರೆ ಗಾಲಿಯ ಹೊರಮೇಲ್ಮೈ ಸುತ್ತಲೂ ಕಬ್ಬಿಣದ ಪಟ್ಟಿಯನ್ನು ಬಿಗಿಯಾಗಿ ಜೋಡಿಸುವುದು. ಕಬ್ಬಿಣದ ಪಟ್ಟಿಯನ್ನು ಜೋಡಿಸುವ ತನಕ ಸಡಿಲವಾಗಲೆಂದು ಕಬ್ಬಿಣವನ್ನು ಬೆರಣಿಯಲ್ಲಿ ಸುಡುತ್ತಿದ್ದರು. ಶಾಖಕ್ಕೆ ಅದು ಹಿಗ್ಗಿದಾಗ ಗಾಲಿಗೆ ಜೋಡಿಸುತ್ತಿದ್ದರು. ನಂತರ ಅದಕ್ಕೆ ನೀರುಣಿಸಿ ತಂಪುಗೊಳಿಸಿದಾಗ ಕಬ್ಬಿಣ ಗಾಲಿಯ ಅಳತೆಗೆ

ಕಲಬುರಗಿಯ ಬಂಬೂ ಬಜಾರ್‌ನಲ್ಲಿ ಕುಲುಮೆ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಬಿಗಿಯಾಗಿ ಹೊಂದಿಕೊಳ್ಳುತ್ತಿತ್ತು. ಈ ಕಲೆಯನ್ನೇ ಬಂಡಿಗೆ ಹಳಿ ಕಟ್ಟುವ ವಿಧಾನ ಎನ್ನುತ್ತಾರೆ.

ಇದ್ದಿಲು ಸಿಗುವುದೇ ದುಸ್ತರ: ಕಬ್ಬಿಣದಿಂದ ಬೇಕಾದಂತಹ ವಸ್ತುಗಳನ್ನು ತಯಾರಿಸಲು ಅದನ್ನು ಕುಲುಮೆಯಲ್ಲಿಟ್ಟು ಕೆಂಪಗೆ ಕಾಯಿಸಬೇಕಾಗುತ್ತದೆ. ಅದಕ್ಕೆ ಇದ್ದಿಲು ಬಳಕೆ ಮಾಡಲಾಗುತ್ತದೆ. ಈ ಹಿಂದೆ ಕಬ್ಬಿಣ ಕಾಯಿಸಲು ಕಮ್ಮಾರನಲ್ಲಿಗೆ ರೈತರೇ ಇದ್ದಿಲು ತೆಗೆದುಕೊಂಡು ಹೋಗುತ್ತಿದ್ದರು. ಆದರೆ, ಇಂದು ಮನೆ ಮನೆಗೂ ಎಲ್‌ಪಿಜಿ ಬಂದಿರೋದರಿಂದ ಇದ್ದಿಲು ಸಿಗುವುದೇ ಅಪರೂಪವಾಗಿದೆ. ಇದ್ದಿಲನ್ನು ಕಮ್ಮಾರ ಕೊಂಡು ತರಬೇಕಾದ ಪರಿಸ್ಥಿತಿ ಇದೆ. ಅದಕ್ಕಾಗಿಯೇ ಇದ್ದಿಲು ಭಟ್ಟಿಗಳು ಶುರುವಾಗಿವೆ. ಅಲ್ಲಿ ಚೀಲಕ್ಕೆ ₹700 ಕೊಟ್ಟು ತರುತ್ತಿದ್ದಾರೆ. ಅದರ ವೆಚ್ಚವೂ ಕಮ್ಮಾರನ ಹೆಗಲ ಮೇಲೆಯೇ ಬಿದ್ದಿದೆ.

ಹಿಂದೆಲ್ಲಾ ಗ್ರಾಮಗಳಲ್ಲಿ ಆಯಾ ಪದ್ಧತಿ ಇತ್ತು. ಉತ್ತರ ಕರ್ನಾಟಕದಲ್ಲಿ ವರ್ಷಕ್ಕೆ ಒಬ್ಬ ರೈತ 4 ಗಿದ್ದ (64 ಸೇರು) ಜೋಳ ಕೊಡುತ್ತಿದ್ದರು. ದಕ್ಷಿಣ ಕರ್ನಾಟಕ ಭಾಗದಲ್ಲಿ ರಾಗಿ ಕೊಡುತ್ತಿದ್ದರು. ಅದೂ ಎತ್ತು ಇದ್ದ ರೈತ ಮಾತ್ರ ಆಯಾ ಕೊಡುತ್ತಿದ್ದರು. ರೈತನೂ ವಾಣಿಜ್ಯ ಬೆಳೆಗಳ ಮೊರೆ ಹೋದ. ಹೀಗಾಗಿ ಪ್ರಸ್ತುತ ಆಯಾ ಪದ್ಧತಿ ಮರೆಯಾಗಿದೆ. ರೈತರು ದುಡ್ಡು ಕೊಟ್ಟೇ ತಮ್ಮ ಕೆಲಸ ಮಾಡಿಸಿಕೊಳ್ಳುತ್ತಿದ್ದಾರೆ.

ಸಾಲಸೌಲಭ್ಯ ಮರೀಚಿಕೆ: 'ಕಮ್ಮಾರರು ಭೂಹೀನರಾಗಿದ್ದರಿಂದ ಅವರಿಗೆ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯವೂ ದೊರೆಯುತ್ತಿಲ್ಲ' ಎಂದು ಬೇಸರಿಸುತ್ತಾರೆ ಇಳಕಲ್ ತಾಲ್ಲೂಕಿನ ಕಮ್ಮಾರ ಸಮಾಜದ ಪ್ರಧಾನ ಕಾರ್ಯದರ್ಶಿ ಕಾಳಪ್ಪ. 'ನಾವು ಹೊರಗಡೆಯೇ ಶೇ 3ರಿಂದ 5ರ ಬಡ್ಡಿ ದರದಲ್ಲಿ ಸಾಲ ಪಡೆದು ಕುಲುಮೆ ಶುರು ಮಾಡಬೇಕಿದೆ. ಕುಲುಮೆಗೆ ಇದ್ದಿಲು ತೆಗೆದುಕೊಂಡು ಬರುತ್ತಿದ್ದ ರೈತ ಕಬ್ಬಿಣ ಬಡಿಯಲು ನೆರವಾಗುತ್ತಿದ್ದ. ಆದರೆ, ಇಂದು ರೈತ ಕೈಕಟ್ಟಿ ನಿಲ್ಲುತ್ತಾನೆಯೇ ಹೊರತು ಪೆಟ್ಟು ಹಾಕುವುದಿಲ್ಲ. ಹೀಗಾಗಿ ವಿದ್ಯುತ್ ಚಾಲಿತ ಯಂತ್ರ ಅಳವಡಿಸಲಾಗಿದೆ. ಒಂದು ಕುಲುಮೆ ಶುರುಮಾಡಲು ₹3 ಲಕ್ಷ ಬೇಕು' ಎಂದು ವಿವರಿಸಿದರು.

ಕಮ್ಮಾರಿಕೆಗೆ ಬೇಡಿಕೆ ಕಡಿಮೆಯಾಗಿದೆ. ಹೀಗಾಗಿ ಕಮ್ಮಾರಿಗೆ ಕೆಲಸವಷ್ಟೇ ಅಲ್ಲ ನೆಲೆಯೂ ಇಲ್ಲದಂತಾಗಿದೆ. ಗ್ರಾಮಗಳಲ್ಲಿ ಮೂಲತಃ ಕಮ್ಮಾರಿಕೆ ಮಾಡಿಕೊಂಡಿದ್ದವರು ಕುಲುಮೆ ಕಳಚಿಟ್ಟು ನಗರ ಪ್ರದೇಶಗಳಲ್ಲಿ ಕಟ್ಟಡ ಕಾರ್ಮಿಕರಾಗಿ, ಖಾಸಗಿ ಕಂಪನಿಗಳಲ್ಲಿ ಸೆಕ್ಯೂರಿಟಿ ಗಾರ್ಡ್‌ಗಳಾಗಿ ಬೇರೆ ಉದ್ಯೋಗಗಳತ್ತ ವಾಲಿದ್ದಾರೆ. ಜಾಗತೀಕರಣ ಮತ್ತಷ್ಟು ವ್ಯಾಪಕವಾದರೆ ಕಮ್ಮಾರರು ಕುಲಕಸುಬಿಗೆ ಇತಿಶ್ರೀ ಹಾಡುವುದು ಖಾತ್ರಿ.

ಪೂರಕ ಮಾಹಿತಿ: ಚಂದ್ರಕಾಂತ ಮಸಾನಿ, ಬಸವರಾಜ್ ಸಂಪಳ್ಳಿ, ಸಂತೋಷ ಈ.ಚಿನಗುಡಿ, ಚಂದ್ರಹಾಸ ಹಿರೇಮಳಲಿ

ಸಮುದಾಯಕ್ಕೆ ರಾಜಕೀಯ ಶಕ್ತಿಯಿಲ್ಲ: ಚಂದ್ರಶೇಖರ ಕಂಬಾರ

'ಕಮ್ಮಾರ, ಕಂಬಾರ ಪದವ್ಯತ್ಯಾಸವಷ್ಟೇ. ನಾವು ಉತ್ತರ ಕರ್ನಾಟಕದ ಕಮ್ಮಾರರು. ಘೋಡಗೇರಿಯಲ್ಲಿ ನಮ್ಮ ತಂದೆ, ನಮ್ಮ ಅಣ್ಣಂದಿರು ಕುಲುಮೆ ಕೆಲಸ ಮಾಡುತ್ತಿದ್ದರು. ಬಾಲ್ಯದಲ್ಲಿ ನನಗೆ ಕುಲುಮೆ ಕೆಲಸ ಕಲಿಯಲಾಗಲಿಲ್ಲ, ಹೀಗಾಗಿ ನನ್ನನ್ನು ದನ ಮೇಯಿಸಲು ಕಳಿಸುತ್ತಿದ್ದರು. ನಮ್ಮ ಕುಲಕಸುಬು ಬಹಳ ಹೆಸರು ಮಾಡಿಲ್ಲ, ಕಸುಬಿನ ಬಗ್ಗೆ, ದೈವದ ಬಗ್ಗೆ ನಂಬಿಕೆ ಇದೆ. ಕಮ್ಮಾರಿಕೆಗೆ ಬೇಡಿಕೆ ಕಡಿಮೆಯಾಗಿರೋದಕ್ಕೆ ಬೇಸರವಿದೆ. ಕಮ್ಮಾರನೂ ಕಾಲದ ಜತೆ ಓಡಲೇಬೇಕಲ್ಲ. ಆದರೆ, ನಮ್ಮ ಸಮುದಾಯಕ್ಕೆ ಭಂಡತನವಿಲ್ಲ. ಹೀಗಾಗಿ ನಮಗೆ ರಾಜಕೀಯ ಶಕ್ತಿ ಇಲ್ಲ. ತಾವಾಯ್ತು, ತಮ್ಮ ಪಾಡಾಯ್ತು ಎಂದು ಇದ್ದು ಬಿಡುತ್ತಾರೆ. ಕೆಲಸದ ಬಗ್ಗೆ ಹೆಮ್ಮೆ ಇದೆ. ನಾನು ಕಂಡ ಹಾಗೇ ಕಮ್ಮಾರರಲ್ಲಿ ಭೇದವಿಲ್ಲ. ಆದರೆ, ಆರ್ಥಿಕ ತಾರತಮ್ಯ ಇದೆ. ನಾವೆಲ್ಲರೂ ಒಂದೇ. ಮನುಷ್ಯ ಜಾತ್ಯತೀತನಾಗಿರಬೇಕು. ಜಾತೀಯತೆ ಮಾಡಬಾರದು' ಎಂದು ಸಾಹಿತಿ ಚಂದ್ರಶೇಖರ ಕಂಬಾರ ಅಭಿಪ್ರಾಯಪಟ್ಟರು.

ಸರ್ಕಾರಿ ನೌಕರರ ಕುಟುಂಬಸ್ಥರಿಗಿಲ್ಲ ಸೌಲಭ್ಯ!

ಪಿಎಂ ವಿಶ್ವಕರ್ಮ ಯೋಜನೆ ವ್ಯಾಪ್ತಿಗೆ ಬರುವ 18 ವರ್ಗದ ಕುಶಲಕರ್ಮಿಗಳಂತೆ ಕಮ್ಮಾರರಿಗೂ ನೆರವು ದೊರೆಯುತ್ತಿದೆ. ಕೇಂದ್ರ ಸರ್ಕಾರ ₹13 ಸಾವಿರ ಕೋಟಿ ಮೀಸಲಿಟ್ಟಿದೆ. ಈ ಯೋಜನೆಯಡಿ ಕೌಶಲ ಅಭಿವೃದ್ಧಿ ತರಬೇತಿ, ತಾಂತ್ರಿಕ ಜ್ಞಾನ, ಹೊಸ ಉಪಕರಣ ಹಾಗೂ ಖಾತರಿ ರಹಿತ ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತಿದೆ. ಹಿಂದುಳಿದ ವರ್ಗಗಳಿಗೆ ಸೇರಿದ 30 ಲಕ್ಷಕ್ಕೂ ಅಧಿಕ ಕುಟುಂಬಗಳ ಜತೆಗೆ ರಾಜ್ಯದ ಕಮ್ಮಾರರೂ ಪ್ರಯೋಜನ ಪಡೆದಿದ್ದಾರೆ.

'ಮೊದಲು ಟೆಂಟ್ ಹಾಕಿಕೊಂಡು ಕೆಲಸ ಮಾಡುತ್ತಿದ್ದೆವು. ಪಿಎಂ ವಿಶ್ವಕರ್ಮ ಯೋಜನೆ ಜಾರಿಯಾದ ನಂತರ ₹2 ಲಕ್ಷ ಸಾಲ ಪಡೆದು ಸ್ವಂತ ಶೆಡ್ ನಿರ್ಮಿಸಿಕೊಂಡಿದ್ದೇವೆ. 30 ಕಂತುಗಳಲ್ಲಿ ಸಾಲ ತೀರಿಸಿದ್ದೇವೆ' ಎನ್ನುತ್ತಾರೆ ಬೆಂಗಳೂರು ಗ್ರಾಮಾಂತರದ ಕಮ್ಮಾರ ಕಾಳಪ್ಪ.

ಆದರೆ, ಸರ್ಕಾರಿ ನೌಕರ ಹಾಗೂ ಅವರ ಕುಟುಂಬದ ಸದಸ್ಯರಿಗೆ ಸೌಲಭ್ಯ ಸಿಗುತ್ತಿಲ್ಲ. 'ಸಹೋದರ ಶಿಕ್ಷಕನಾದ ನಂತರ ನಮಗೆ ಸಿಗುತ್ತಿದ್ದ ನೆರವು ನಿಂತಿದೆ. ನಮಗೂ ಸಹಾಯ ಮಾಡಬೇಕು' ಎನ್ನುತ್ತಾರೆ ತುಮಕೂರಿನ ರಾಜಾಚಾರಿ.

ಜಾತಿ ಪ್ರಮಾಣಪತ್ರದಲ್ಲಿ ಗೊಂದಲ!

ಹಿಂದೆ ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದರಿಂದ ಚಾಮರಾಜನಗರದ ಕೊಳ್ಳೇಗಾಲ, ಉಡುಪಿ ಜಿಲ್ಲೆಯ ಸುಳ್ಯದಲ್ಲಿ ಕಮ್ಮಾರರಿಗೆ ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ಪತ್ರ ಸಿಗುತ್ತಿದೆ. ಉತ್ತರ ಕರ್ನಾಟಕದಲ್ಲಿ ಮಹಾರಾಷ್ಟ್ರದಿಂದ ಬಂದವರು ಹೆಚ್ಚಿರುವುದರಿಂದ ಜಾತಿ ಕಾಲಂನಲ್ಲಿ ಹಿಂದೂ ಮರಾಠ, ಹಿಂದೂ ಕ್ಷತ್ರೀಯ, ಹಿಂದೂ ಆರೇರ, ಹಿಂದೂ ಲಿಂಗಾಯತ ಎಂದು ಇದ್ದಲ್ಲಿ 3ಬಿಗೆ ಸೇರಿಸಲಾಗಿದೆ. ಇನ್ನು ಕಲಬುರಗಿಯಲ್ಲಿರುವ ಕಮ್ಮಾರರಿಗೆ ಪ್ರವರ್ಗ-1ರ ಪ್ರಮಾಣ ಪತ್ರ ನೀಡಲಾಗಿದೆ. 'ಹಿಂದೂ ಕಮ್ಮಾರ' ಎಂದು ನಮೂದಿಸಿದ್ದರೆ ಮಾತ್ರ 2ಎ ನೀಡುತ್ತಾರೆ. 2ಎ ಪ್ರಮಾಣಪತ್ರ ಇದ್ದರೆ ಮಾತ್ರ ವಿಶ್ವಕರ್ಮ ಅಭಿವೃದ್ಧಿ ನಿಗಮದ ಪ್ರಯೋಜನ ಸಿಗುತ್ತದೆ. ಇನ್ನು ಪಿಎಂ ವಿಶ್ವಕರ್ಮ ಯೋಜನೆ ಸೌಲಭ್ಯ ಪಡೆಯಲು ಯೋಜನಾ ವರದಿ ನೀಡಬೇಕು. ಅದರಲ್ಲಿ ಕಬ್ಬಿಣವನ್ನು ಎಷ್ಟು ತಾಪಮಾನದಲ್ಲಿ ಕಾಯಿಸುತ್ತೀರಿ? ಇದ್ದಿಲು ಎಷ್ಟು ಹಾಕುತ್ತೀರಿ... ಎಂಬಿತ್ಯಾದಿ ಪ್ರಶ್ನೆಗಳಿವೆ. ಇದೆಲ್ಲಾ ಗೊಂದಲದಿಂದಾಗಿ ಬಾಗಲಕೋಟೆ ಜಿಲ್ಲೆಯಲ್ಲಿ ಯಾರೂ ಪ್ರಯೋಜನ ಪಡೆದಿಲ್ಲ ಎಂದು ಮುತ್ತಣ್ಣ ಭರಮಪ್ಪ ಕಂಬಾರ ವಿವರಿಸಿದರು.

ವಿಶ್ವಕರ್ಮರಲ್ಲಿ 41 ಉಪಜಾತಿಗಳಿದ್ದು, ಮೈಸೂರು ವಿವಿಯಿಂದ ಕುಲಶಾಸ್ತ್ರೀಯ ಅಧ್ಯಯನ ನಡೆದಿದೆ. ಕಮ್ಮಾರರ ವಿಚಾರದಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳು ಕಂಡುಬಂದಿದ್ದು, ಪ್ರಸ್ತುತ 28 ಜಿಲ್ಲೆಗಳಲ್ಲಿ ಅಧ್ಯಯನ ಮುಗಿದಿದೆ. 2025ರಲ್ಲಿ ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಲಿದೆ
ಕೃಷ್ಣಮೂರ್ತಿ, ಪ್ರಾಧ್ಯಾಪಕ, ಮೈಸೂರು ವಿವಿ

ಕಟ್ಟಿಗೆಯ ಚಕ್ಕಡಿಯಾದರೆ ಪ್ರತಿ ಹಂಗಾಮಿಗೂ ಸಣ್ಣಪುಟ್ಟ ಕೆಲಸಗಳು ಬರುತ್ತಿದ್ದವು. ಕಬ್ಬಿಣದ ಚಕ್ಕಡಿ ಸಿದ್ಧಗೊಂಡರೆ ಕನಿಷ್ಠ 50 ವರ್ಷ ಬಾಳಿಕೆ ಬರುತ್ತದೆ. ಹೀಗಾಗಿ, ಕುಡಗೋಲು, ಕೊಡಲಿ, ಕುಡ, ಟೇಬಲ್, ಕುರ್ಚಿ ಮುಂತಾದ ಸಣ್ಣಪುಟ್ಟ ಕೆಲಸಗಳೇ ನಮಗೆ ಜೀವನಾಧಾರ
ಸುನೀಲ ಕಂಬಾರ, ಚಬಡಿ

ಎಡ್ಯುವರ್ಸ್ ಮೇಳದಲ್ಲಿ ಸಮಗ್ರ ಮಾಹಿತಿ

ಕೋರ್ಸ್‌ಗಳ ಆಯ್ಕೆಗೆ ಸಿಕ್ಕಿತು ಮಾರ್ಗದರ್ಶನ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ಹೊಸೂರು ಸಮೀಪದ ರಾಯ್ಕರ್ ಮೈದಾನದಲ್ಲಿ ಶನಿವಾರ ಆರಂಭಗೊಂಡ 14ನೇ 'ಎಡ್ಯುವರ್ಸ್' ಶೈಕ್ಷಣಿಕ ಮೇಳದಲ್ಲಿ ವಿದ್ಯಾರ್ಥಿಗಳಿಗೆ ವಿವಿಧ ವಿಷಯಗಳು, ಕೋರ್ಸ್‌ಗಳ ಕುರಿತು ಉತ್ತಮ ಮಾಹಿತಿ ಸಿಕ್ಕಿತು. ಹಲವಾರು ವಿದ್ಯಾರ್ಥಿಗಳು, ಪೋಷಕರು ವಿವಿಧ ವಿಷಯಗಳ ಬಗ್ಗೆ ತಜ್ಞರು, ಉಪನ್ಯಾಸಕರೊಂದಿಗೆ ಚರ್ಚಿಸಿದರು.

ಪ್ರಜ

ದೆಹಲಿ ಅಬಕಾರಿ ನೀತಿ ಹಗರಣ: ಬಿಆರ್‌ಎಸ್ ನಾಯಕಿ ವಿರುದ್ಧ ಸಿಬಿಐ ಆರೋಪ

'ಎಎಪಿಗೆ ಹಣ ನೀಡಲು ಕವಿತಾ ಬೆದರಿಕೆ'

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಅಡಿಯಲ್ಲಿ ಅರಬಿಂದೊ ಫಾರ್ಮಾ ಪ್ರವರ್ತಕ ಶರತ್ ಚಂದ್ರ ರೆಡ್ಡಿ ಅವರಿಗೆ ಮಂಜೂರಾದ ಐದು ರಿಟೇಲ್ ವಲಯಗಳಿಗೆ ಪ್ರತಿಯಾಗಿ ಎಎಪಿಗೆ ₹ 25 ಕೋಟಿ ಪಾವತಿಸುವಂತೆ ಬಿಆರ್‌ಎಸ್ ನಾಯಕಿ ಕೆ. ಕವಿತಾ ಬೆದರಿಕೆ ಹಾಕಿದ್ದರು ಎಂಬ ಆರೋಪವಿದೆ ಎಂಬುದಾಗಿ ಸಿಬಿಐ, ವಿಶೇಷ ನ್ಯಾಯಾಲಯಕ್ಕೆ ತಿಳಿಸಿದೆ.

ಕೆ. ಕವಿತಾ

ಒಂದು ವೇಳೆ ಇಷ್ಟು ಹಣವನ್ನು ದೆಹಲಿಯ ಆಡಳಿತಾರೂಢ ಎಎಪಿ ಪಕ್ಷಕ್ಕೆ ಪಾವತಿಸದಿದ್ದರೆ, ತೆಲಂಗಾಣ ಮತ್ತು ದೆಹಲಿಯಲ್ಲಿ ತಮ್ಮ ವ್ಯವಹಾರಕ್ಕೆ ಹಾನಿ ಎದುರಾಗುತ್ತದೆ ಎಂದು ಕವಿತಾ ಅವರು ರೆಡ್ಡಿ ಅವರಿಗೆ ಎಚ್ಚರಿಸಿದ್ದರು ಎಂದು ಸಿಬಿಐ ಹೇಳಿದೆ.

ದೆಹಲಿ ಅಬಕಾರಿ ನೀತಿ ಹಗರಣದ ಜತೆ ನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದ ಆರೋಪಿಯಾಗಿರುವ ರೆಡ್ಡಿ ಅವರು, ಜಾರಿ ನಿರ್ದೇಶನಾಲಯ (ಇ.ಡಿ) ತನಿಖೆ ನಡೆಸುತ್ತಿರುವ ಪ್ರಕರಣದಲ್ಲಿ ಮಾಫಿಸಾಕ್ಷಿಯಾಗಿ ಬದಲಾಗಿದ್ದಾರೆ. ಅವರ ವಿರುದ್ಧ ಸಿಬಿಐ ಇನ್ನೂ ಆರೋಪಪಟ್ಟಿ ಸಲ್ಲಿಸಬೇಕಿದೆ.

ತೆಲಂಗಾಣದ ಮಾಜಿ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರ ಪುತ್ರಿ ಕವಿತಾ ಅವರ ಒತ್ತಾಯ ಮತ್ತು ಭರವಸೆಯ ಮೇರೆಗೆ ರೆಡ್ಡಿ ಅವರು ದೆಹಲಿ ಅಬಕಾರಿ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಸಿಬಿಐ, ವಿಶೇಷ ನ್ಯಾಯಾಲಯಕ್ಕೆ ತಿಳಿಸಿದೆ. 'ದೆಹಲಿ ಸರ್ಕಾರದ ಜತೆ ನನಗೆ ಸಂಪರ್ಕವಿದ್ದು, ಅಬಕಾರಿ ನೀತಿ ಅಡಿಯಲ್ಲಿ ದೆಹಲಿಯಲ್ಲಿ ಮದ್ಯ ವ್ಯವಹಾರ ನಡೆಸಲು ನೆರವು ನೀಡುವುದಾಗಿ ಕವಿತಾ ಅವರು ರೆಡ್ಡಿಗೆ ಭರವಸೆ ನೀಡಿದ್ದರು' ಎಂದು ಸಿಬಿಐ ಶುಕ್ರವಾರ ವಿಚಾರಣೆ ವೇಳೆ ನ್ಯಾಯಾಲಯಕ್ಕೆ ಹೇಳಿದೆ.

'ಮದ್ಯ ವ್ಯವಹಾರವನ್ನು ಪಡೆಯಲು ಸಗಟು ವ್ಯಾಪಾರಕ್ಕಾಗಿ ₹ 25 ಕೋಟಿ, ಪ್ರತಿ ವಲಯದ ಚಿಲ್ಲರೆ ವ್ಯಾಪಾರಕ್ಕಾಗಿ ₹ 5 ಕೋಟಿ ಅನ್ನು ಮುಂಗಡವಾಗಿ ಎಎಪಿಗೆ ಪಾವತಿಸಬೇಕು ಮತ್ತು ಅಷ್ಟೇ ಮೊತ್ತವನ್ನು ತನ್ನ ಸಹವರ್ತಿಗಳಾದ ಅರುಣ್ ಆರ್ ಪಿಳ್ಳೈ ಮತ್ತು ಅಭಿಷೇಕ್ ಬೋಯಿನ್‌ಪಲ್ಲಿ ಅವರಿಗೂ ಪಾವತಿಸಬೇಕು. ಈ ಇಬ್ಬರು, ದೆಹಲಿಯ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಪ್ರತಿನಿಧಿ ವಿಜಯ್ ನಾಯರ್ ಅವರೊಂದಿಗೆ ಸಮನ್ವಯ ಸಾಧಿಸುತ್ತಾರೆ ಎಂದು ಕವಿತಾ ಅವರು ಶರತ್ ಚಂದ್ರ ರೆಡ್ಡಿ ಅವರಿಗೆ ತಿಳಿಸಿದ್ದರು' ಎಂದು ಸಿಬಿಐ ತಿಳಿಸಿದೆ. ನ್ಯಾಯಾಲಯವು ಕವಿತಾ ಅವರನ್ನು ಶುಕ್ರವಾರ ಇದೇ 15ರವರೆಗೆ ಸಿಬಿಐ ವಶಕ್ಕೆ ನೀಡಿ ಆದೇಶಿಸಿದೆ.

ಕೇಜ್ರಿವಾಲ್ ಮುಕ್ತ ಭೇಟಿಗಿಲ್ಲ ಅವಕಾಶ: ಸಂಜಯ್ ಸಿಂಗ್ ಕಿಡಿ



ಸಂಜಯ್ ಸಿಂಗ್

ನವದೆಹಲಿ (ಪಿಟಿಐ): 'ತಿಹಾರ್ ಜೈಲಿನಲ್ಲಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ತಮ್ಮ ಕುಟುಂಬದ ಸದಸ್ಯರ ಜತೆ ಮುಕ್ತ ಭೇಟಿಗೂ ಅವಕಾಶ ನೀಡುತ್ತಿಲ್ಲ' ಎಂದು ಎಎಪಿ ನಾಯಕ ಹಾಗೂ ರಾಜ್ಯಸಭಾ ಸಂಸದ ಸಂಜಯ್ ಸಿಂಗ್ ಶನಿವಾರ ಕಿಡಿಕಾರಿದ್ದಾರೆ.

'ಕೇಜ್ರಿವಾಲರ ನೈತಿಕತೆಯನ್ನು ಕುಗ್ಗಿಸುವ ಯತ್ನ ಇದಾಗಿದೆ. ಅವರ ಹಕ್ಕುಗಳನ್ನು ಕಸಿದುಕೊಳ್ಳಲಾಗಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಅವರು ದೂರಿದರು.

'ಜೈಲಿನೊಳಗಿರುವ ಕೊಠಡಿಯೊಂದಕ್ಕೆ ಅಳವಡಿಸಿರುವ ಕಬ್ಬಿಣದ ಬಲೆಯ ಹಿಂಬದಿಯಿಂದ ಕೇಜ್ರಿವಾಲ್ ತಮ್ಮ ಕುಟುಂಬದವರನ್ನು ಭೇಟಿಯಾಗಬೇಕಿದೆ. ಮೂರು ಬಾರಿ ಮುಖ್ಯಮಂತ್ರಿಯಾದವರನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಆಜ್ಞೆಯಂತೆ ಅವಮಾನಿಸಲಾಗುತ್ತಿದೆ. ಇದು ಅಮಾನವೀಯ. ಆದರೆ ಇಲ್ಲಿಯೇ ಇರುವ ಕ್ರಿಮಿನಲ್ ಆರೋಪಿಗಳಿಗೆ ಮುಕ್ತ ಭೇಟಿಯ ಅವಕಾಶ ಕೊಡಲಾಗಿದೆ' ಎಂದು ಸಂಜಯ್ ಆರೋಪಿಸಿದರು.

'ಕೇಜ್ರಿವಾಲ್ ಭೇಟಿಗಾಗಿ ನನಗೆ ಟೋಕನ್ ನೀಡಿದ್ದ ಜೈಲು ಆಡಳಿತವು, ನಂತರ ಭದ್ರತೆಯ ಕಾರಣ ನೀಡಿ ರದ್ದುಗೊಳಿಸಿದೆ' ಎಂದೂ ಹೇಳಿದರು.

ಈ ಆರೋಪಕ್ಕೆ ಸಂಬಂಧಿಸಿದಂತೆ ತಿಹಾರ್ ಜೈಲು ಆಡಳಿತ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಸಂಜಯ್ ಸಿಂಗ್ ಆರೋಪಕ್ಕೆ ತಿರುಗೇಟು ನೀಡಿರುವ ದೆಹಲಿ ಬಿಜೆಪಿ ಘಟಕದ ಅಧ್ಯಕ್ಷ ವೀರೇಂದ್ರ ಸಚದೇವ್, 'ಕೆಲ ತಿಂಗಳು ಜೈಲಿನಲ್ಲಿದ್ದವರು, ಜೈಲಿನ ಕೈಪಿಡಿ ಬಗ್ಗೆ ತಿಳಿವಳಿಕೆ ಹೊಂದಿರಬೇಕು' ಎಂದಿದ್ದಾರೆ.

'ಸುಪ್ರೀಂ'ನಲ್ಲಿ ವಿಚಾರಣೆ ನಾಳೆ

ನವದೆಹಲಿ (ಪಿಟಿಐ): ತಮ್ಮ ಬಂಧನವನ್ನು ಎತ್ತಿ ಹಿಡಿದ ಹೈಕೋರ್ಟ್ ಆದೇಶದ ವಿರುದ್ಧ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ನಡೆಸಲಿದೆ.

ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವ ಪ್ರಕರಣಗಳ ಪಟ್ಟಿಯಂತೆ, ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಾಂಕರ್ ದತ್ತಾ ಅವರನ್ನೊಳಗೊಂಡ ಪೀಠವು ದೆಹಲಿ ಹೈಕೋರ್ಟ್‌ನ ಏ. 9 ರ ಆದೇಶವನ್ನು ಪ್ರಶ್ನಿಸಿ ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಏ. 15ರಂದು ಆಲಿಸಲಿದೆ ಎಂದಿದೆ.

ಬಹು ಮಾಧ್ಯಮ ಪ್ರಜಾವಾಣಿ www.prajavani.net

ಪ್ರಜಾವಾಣಿ ಸಾಧಕಿಯರು

ರಾಜ್ಯದ 10 ಸಾಧಕಿಯರ ಪ್ರೇರಣಾದಾಯಕ ಪಯಣ

ದೃಷ್ಟಿ ಇರದಿದ್ದರೂ ದೇಶ ಪ್ರತಿನಿಧಿಸಿ ಗೆದ್ದ ವರ್ಷಾ

Prajavani.net Prajavani Prajavani

₹ 1.2 ಕೋಟಿ ಮೌಲ್ಯದ ಗೋಡಂಬಿ ವಶಕ್ಕೆ

ಪಾಲ್ಘರ್ (ಪಿಟಿಐ): ಕರ್ನಾಟಕದಿಂದ ಗುಜರಾತ್‌ಗೆ ಸಾಗಣೆ ಮಾಡಬೇಕಾಗಿದ್ದ ₹1.2 ಕೋಟಿ ಮೌಲ್ಯದ ಗೋಡಂಬಿಯನ್ನು ಕದ್ದೊಯ್ದಿದ್ದು, ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯ ಪೊಲೀಸರು ಪ್ರಕರಣ ಭೇದಿಸಿ, ಗೋಡಂಬಿಯನ್ನು ವಶಕ್ಕೆ ಪಡೆದಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಉಡುಪಿ ಮೂಲದ ಪೂರೈಕೆದಾರರೊಬ್ಬರು ಏಪ್ರಿಲ್ 2ರಂದು ₹24.63 ಮೆಟ್ರಿಕ್ ಟನ್ ಗೋಡಂಬಿಯನ್ನು ಸೂರತ್ ಮತ್ತು ಅಹಮದಾಬಾದ್‌ಗೆಂದು ಕಳುಹಿಸಿದ್ದರು. 2,465 ಬಾಕ್ಸ್‌ಗಳಲ್ಲಿ ಪ್ಯಾಕ್ ಮಾಡಲಾಗಿದ್ದ ಗೋಡಂಬಿಯು ತಲುಪಬೇಕಾದ ಸ್ಥಳಕ್ಕೆ ತಲುಪಿರಲಿಲ್ಲ. ಹೀಗಾಗಿ ಪೂರೈಕೆದಾರರು ಪೊಲೀಸರಿಗೆ ದೂರು ನೀಡಿದ್ದರು.

ಹೀಗಾಗಿ, ಕರ್ನಾಟಕ ಪೊಲೀಸರು ಮಹಾರಾಷ್ಟ್ರ ಪೊಲೀಸರ ನೆರವು ಕೋರಿದ್ದರು. ಗೋಡಂಬಿಯು ನಲಸೋಪಾರ ಮತ್ತು ನವಿಮುಂಬೈನ ಎರಡು ಗೋದಾಮಿನಲ್ಲಿ ಇರುವುದನ್ನು ಪಾಲ್ಘರ್ ಪೊಲೀಸರು ಪತ್ತೆ ಮಾಡಿದರು ಎಂದು ತಿಳಿಸಿದರು.

'ಸದ್ಯ ₹92.7 ಲಕ್ಷ ಮೌಲ್ಯದ ಗೋಡಂಬಿಯನ್ನು ವಶಕ್ಕೆ ಪಡೆಯಲಾಗಿದೆ. ಆರೋಪಿಗಳ ಬಂಧನ ಮತ್ತು ಬಾಕಿ ಗೋಡಂಬಿ ವಶಕ್ಕೆ ಪ್ರಯತ್ನಿಸಲಾಗುತ್ತಿದೆ' ಎಂದು ಹಿರಿಯ ಇನ್‌ಸ್ಪೆಕ್ಟರ್ ರಾಹುಲ್ ರಕ್ಷಾ ತಿಳಿಸಿದರು.

ಮೇಫಾ ಎಂಜಿನಿಯರಿಂಗ್ ವಿರುದ್ಧ ಎಫ್‌ಐಆರ್

ನವದೆಹಲಿ (ಪಿಟಿಐ): ಅತಿ ಹೆಚ್ಚು ಮೊತ್ತದ ಚುನಾವಣಾ ಬಾಂಡ್ ಖರೀದಿಸಿದ್ದ ಹೈದರಾಬಾದ್‌ನ ಮೇಫಾ ಎಂಜಿನಿಯರಿಂಗ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಕಂಪನಿ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿದೆ.

ಲಂಚ ಪ್ರಕರಣಕ್ಕೆ ಸಂಬಂಧಿಸಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸಂಸ್ಥೆ ಶನಿವಾರ ತಿಳಿಸಿದೆ.

₹966 ಕೋಟಿ ಮೌಲ್ಯದ ಚುನಾವಣಾ ಬಾಂಡ್‌ಗಳನ್ನು ಈ ಕಂಪನಿ ಖರೀದಿಸಿತ್ತು.

₹315 ಕೋಟಿ ವೆಚ್ಚದ ಜಗದಾಲಪುರ ಉಕ್ಕು ಘಟಕ ಯೋಜನೆಯಲ್ಲಿ ನಡೆದಿರುವ ಅವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣ ಇದಾಗಿದೆ. ಮೇಫಾ ಎಂಜಿನಿಯರಿಂಗ್ ಕಂಪನಿಯ ₹174 ಕೋಟಿ ಮೊತ್ತದ ಬಿಲ್‌ಗಳ ಪಾವತಿಗೆ ಅಧಿಕಾರಿಗಳು ₹ 78 ಲಕ್ಷ ಲಂಚ ಪಡೆದಿದ್ದಾರೆ ಎಂದು ಆರೋಪಿಸಲಾಗಿದೆ.

ರಾಷ್ಟ್ರೀಯ ಆವಿಷ್ಕಾರ ಮತ್ತು ಸ್ಟಾರ್ಟ್‌ಅಪ್ ನೀತಿ (ಎನ್‌ಐಎಸ್‌ಪಿ) ಮತ್ತು ರಾಷ್ಟ್ರೀಯ ಖನಿಜಾಭಿವೃದ್ಧಿ ನಿಗಮದ (ಎನ್‌ಎಂಡಿಸಿ) ಒಟ್ಟು ಎಂಟು ಅಧಿಕಾರಿಗಳು ಮತ್ತು ಮೆಟಲರ್ಜಿಕಲ್ ಆ್ಯಂಡ್ ಎಂಜಿನಿಯರಿಂಗ್ ಕನ್ಸಲ್ಟೆಂಟ್ಸ್ ಲಿಮಿಟೆಡ್‌ನ (ಎಂಇಸಿಒಎನ್) ಇಬ್ಬರು ಅಧಿಕಾರಿಗಳ ಹೆಸರೂ ಈ ಎಫ್‌ಐಆರ್‌ನಲ್ಲಿ ಉಲ್ಲೇಖವಾಗಿದೆ ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ.

ಎಫ್‌ಐಆರ್‌ಅನ್ನು ಬಹಿರಂಗಪಡಿಸಲಾಗಿದ್ದು, ಲಂಚ ಪ್ರಕರಣಕ್ಕೆ ಸಂಬಂಧಿಸಿ ದಂತೆ, 2023ರ ಆಗಸ್ಟ್ 10ರಂದು ತನಿಖೆ ನಡೆಸಲಾಗಿತ್ತು. ಈ ವೇಳೆ ಸಿಕ್ಕ ಮಾಹಿತಿ ಆಧಾರದಲ್ಲಿ ಪ್ರಕರಣ ದಾಖಲಿಸುವಂತೆ ಶಿಫಾರಸು ಮಾಡಲಾಯಿತು. ಅದರಂತೆ ಮಾರ್ಚ್ 31ರಂದು ಪ್ರಕರಣ ದಾಖಲಿಸಲಾಯಿತು.

ಎನ್‌ಐಎಸ್‌ಪಿ ಮತ್ತು ಎನ್‌ಎಂಡಿಸಿಯ ಎಂಟು ಅಧಿಕಾರಿಗಳು ಒಟ್ಟು ₹73.85 ಲಕ್ಷ ಲಂಚ ಪಡೆದಿದ್ದರೆ, ಎಂಇಸಿಒಎನ್ ಸಂಸ್ಥೆಯ ಇಬ್ಬರು ಅಧಿಕಾರಿಗಳು ಒಟ್ಟು ₹5.01 ಲಕ್ಷ ಲಂಚ ಪಡೆದಿದ್ದಾರೆ. ಚಂದ್ರ ಮತ್ತು ಮೇಫಾ ಎಂಜಿನಿಯರಿಂಗ್ ಸಂಸ್ಥೆಗಳನ್ನು ಈ ಪ್ರಕರಣದ ಆರೋಪಿಗಳಾಗಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

ಸಂದೇಶ್‌ಖಾಲಿ: ಮಾನವ ಹಕ್ಕು ಉಲ್ಲಂಘನೆ

ಸಂತ್ರಸ್ತರ ಮೇಲೆ ದೌರ್ಜನ್ಯ ನಡೆದಿರುವುದು ತನಿಖೆಯಿಂದ ಬಹಿರಂಗ– ಎನ್‌ಎಚ್‌ಆರ್‌ಸಿ ಹೇಳಿಕೆ

ಪ್ರಜಾವಾಣಿ ವಾರ್ತೆ

ಸಂತ್ರಸ್ತರ ಮನಸಿನಲ್ಲಿರುವ ಭಯ ಕಿತ್ತುಹಾಕಿ, ಅವರು ತಮ್ಮ ಕುಟುಂಬಗಳೊಂದಿಗೆ ಬದುಕಲು ಆತ್ಮವಿಶ್ವಾಸ ತುಂಬಬೇಕಾದ ಅಗತ್ಯವನ್ನು ತನಿಖಾ ತಂಡ ಕಂಡುಕೊಂಡಿದೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ

ನವದೆಹಲಿ: ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಯಲ್ಲಿ ಸಂತ್ರಸ್ತರ ಮೇಲೆ ದೌರ್ಜನ್ಯ ನಡೆದಿರುವ ಹಲವು ನಿದರ್ಶನಗಳು ಸ್ಥಳ ತನಿಖೆಯಲ್ಲಿ ಬಹಿರಂಗವಾಗಿವೆ. ಇದು ಆಡಳಿತದ ನಿರ್ಲಕ್ಷ್ಯದಿಂದಾದ ಮಾನವ ಹಕ್ಕುಗಳ ಉಲ್ಲಂಘನೆ ಎನ್ನುವುದು ಸ್ಪಷ್ಟವಾಗಿ ತೋರುತ್ತಿದೆ ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (ಎನ್‌ಎಚ್‌ಆರ್‌ಸಿ) ಶನಿವಾರ ಹೇಳಿದೆ.

ಕಾನೂನು ಮೇಲಿನ ನಂಬಿಕೆ ಮತ್ತು ಅಧಿಕಾರಿಗಳ ಮೇಲಿನ ವಿಶ್ವಾಸವನ್ನು ಮರುಸ್ಥಾಪಿಸುವುದು, ಕಾನೂನುಬದ್ಧ ಮಾಲೀಕರಿಗೆ ಜಮೀನು ಮರಳಿಸುವುದು, ಸಂದೇಶ್‌ಖಾಲಿಯಿಂದ ಕಾಣೆಯಾದ ಮಹಿಳೆಯರು, ಬಾಲಕಿಯರ ಪ್ರಕರಣಗಳ ತನಿಖೆ ನಡೆಸುವುದು ಒಳಗೊಂಡಿರುವ ಪ್ರತಿ ಶಿಫಾರಸುಗಳ ಬಗ್ಗೆ ಕ್ರಮ ತೆಗೆದುಕೊಂಡ ವರದಿಯನ್ನು ಎಂಟು ವಾರಗಳಲ್ಲಿ ಸಲ್ಲಿಸುವಂತೆ ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿಗೆ ಎನ್‌ಎಚ್‌ಆರ್‌ಸಿ ಸೂಚಿಸಿದೆ.

ಆರೋಪಿಗಳು ನಡೆಸಿರುವ ದೌರ್ಜನ್ಯದಿಂದಾಗಿ ಸಂದೇಶ್‌ಖಾಲಿಯಲ್ಲಿನ ವಾತಾವರಣವು ಸಂತ್ರಸ್ತರನ್ನು ಮೌನವಾಗಿಸಿದೆ ಮತ್ತು ನ್ಯಾಯ ಪಡೆಯಲು ಹಿಂಜರಿಯುವಂತೆ ಮಾಡಿದೆ ಎಂದು ಎನ್‌ಎಚ್‌ಆರ್‌ಸಿಯ ತನಿಖಾ ತಂಡದ ವರದಿಯಲ್ಲಿ ಹೇಳಲಾಗಿದೆ.

ಹಲ್ಲೆ, ಬೆದರಿಕೆ, ಲೈಂಗಿಕ ಶೋಷಣೆ, ಭೂ ಕಬಳಿಕೆ ಮತ್ತು ಬಲವಂತದ ಕೂಲಿ ಮಾಡಿಸಿ ಗ್ರಾಮಸ್ಥರು ಮತ್ತು ಸಂತ್ರಸ್ತರು ಸಂದೇಶ್‌ಖಾಲಿ ತೊರೆದು, ಬೇರೆಡೆ ಜೀವನೋಪಾಯ ಅರಸುವಂತೆ ಮಾಡಲಾಗಿದೆ. ಇದಲ್ಲದೆ, ಇಲ್ಲಿನ ಜನರಿಗೆ ವೃದ್ಧಾಪ್ಯ ವೇತನ, ಪಡಿತರ ಹಾಗೂ ನರೇಗಾ ಕೂಲಿ ಕೆಲಸ ನಿರಾಕರಿಸಲಾಗಿದೆ ಎಂದು ಆರೋಪಿಸಿದ್ದು, ಇದು ತೀವ್ರ ಕಳವಳಕಾರಿ ಎಂದು ತನಿಖಾ ತಂಡ ವರದಿಯಲ್ಲಿ ಹೇಳಿದೆ.

ಅಧಿಕಾರ ದಬ್ಬಾಳಿಕೆಯಿಂದಾಗಿ ಸಂತ್ರಸ್ತರು ತಮ್ಮ ಕುಂದುಕೊರತೆಗಳನ್ನು ಹೇಳಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅಧಿಕಾರ ದುರುಪಯೋಗವು ಜನರು ದ್ವನಿ ಎತ್ತದ ಭಯದ ವಾತಾವರಣ ಉಂಟು ಮಾಡಿದೆ. ಇದು ಶಾಶ್ವತವಾಗಿ ಉಳಿಯದಂತೆ ನಿವಾರಿಸುವ ಮತ್ತು-ಸಂತ್ರಸ್ತರು ಮೌನದ ಸಂಕೋಲೆಯಿಂದ ಹೊರಬಂದು ಸುರಕ್ಷಿತವಾಗಿ ಬದುಕುವ ವಾತಾವರಣವನ್ನು ಕಲ್ಪಿಸುವ ಅಗತ್ಯವಿದೆ ಎಂದು ಎನ್‌ಎಚ್‌ಆರ್‌ಸಿ ಒತ್ತಿಹೇಳಿದೆ.

ಸಂತ್ರಸ್ತರಲ್ಲಿ ವಿಶ್ವಾಸ ತುಂಬಲು ನಿರಂತರ ಕ್ರಮಗಳನ್ನು ಕೈಗೊಳ್ಳುವುದು ಜಿಲ್ಲೆಯ ಅಧಿಕಾರಿಗಳ ಕರ್ತವ್ಯವಾಗಿದೆ. ಇದರಿಂದಾಗಿ, ಆರೋಪಿಗಳ ದೌರ್ಜನ್ಯಕ್ಕೆ ತುತ್ತಾದ ಇತರರು ಮುಂದೆ ಬಂದು ತಮ್ಮ ದೂರುಗಳನ್ನು ಸಲ್ಲಿಸಬಹುದು ಎಂದು ಅದು ಹೇಳಿದೆ.

ಡ್ರಗ್ಸ್ ಕಳ್ಳಸಾಗಣೆದಾರ ಸಾದಿಕ್ ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ

ನವದೆಹಲಿ (ಪಿಟಿಐ): ಡಿಎಂಕೆ ಪಕ್ಷದಿಂದ ವಜಾಗೊಂಡಿರುವ ಪದಾಧಿಕಾರಿ ಜಾಫರ್ ಸಾದಿಕ್ ಮಾದಕವಸ್ತು ಕಳ್ಳಸಾಗಣೆಯಿಂದ ಗಳಿಸಿದ ₹ 40 ಕೋಟಿಗೂ ಹೆಚ್ಚು ಹಣವನ್ನು ಚಲನಚಿತ್ರ ನಿರ್ಮಾಣ, ಆತಿಥ್ಯ ಮತ್ತು ರಿಯಲ್ ಎಸ್ಟೇಟ್ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಿದ್ದಾರೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಶನಿವಾರ ಆರೋಪಿಸಿದೆ.

₹ 2,000 ಕೋಟಿಗೂ ಹೆಚ್ಚು ಮೌಲ್ಯದ ಸುಮಾರು 3,500 ಕೆ.ಜಿ ಸೂಡೊಫೆಡ್ರಿನ್ ಮಾದಕವಸ್ತುವಿನ ಕಳ್ಳಸಾಗಣೆಯಲ್ಲಿ ಭಾಗಿಯಾಗಿದ್ದ ಆರೋಪದ ಮೇಲೆ ಜಾಫರ್ ಸಾದಿಕ್ (36) ಅವರನ್ನು ಎನ್‌ಸಿಬಿ ಕಳೆದ ತಿಂಗಳು ಬಂಧಿಸಿತ್ತು.

ಈ ಪ್ರಕರಣದ ಸಂಬಂಧ ಏಪ್ರಿಲ್ 9ರಂದು ಚೆನ್ನೈ, ಮಧುರೆ ಮತ್ತು ತಿರುಚಿರಾಪಳ್ಳಿಯಲ್ಲಿ ದಾಳಿ ನಡೆಸಿದ್ದ ಇ.ಡಿ, ಈ ಕುರಿತು ಪ್ರಕಟಣೆ ಹೊರಡಿಸಿದೆ.

ಸಾದಿಕ್ ಅಂತರರಾಷ್ಟ್ರೀಯ ಮಾದಕವಸ್ತು ಕಳ್ಳಸಾಗಣೆ ಸಿಂಡಿಕೇಟ್‌ನ ಮಾಸ್ಟರ್‌ಮೈಂಡ್ ಆಗಿದ್ದು, ಸೂಡೊಫೆಡ್ರಿನ್ ಮಾದಕವಸ್ತುವನ್ನು ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ಗೆ ಕಳ್ಳಸಾಗಣೆ ಮಾಡಿದ ಆರೋಪವಿದೆ ಎಂದು ಇ.ಡಿ ಹೇಳಿದೆ.

ಬಾಂಬ್ ಸ್ಫೋಟ: ಶಂಕಿತರು 10 ದಿನ ಕಸ್ಟಡಿಗೆ

ಪೂರ್ವ ಮೇದಿನಿಪುರ ಜಿಲ್ಲೆಯಲ್ಲಿ ಬಂಧಿಸಲ್ಪಟ್ಟಿದ್ದ ಆರೋಪಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದಲ್ಲಿ ಬಂಧಿಸಲಾಗಿರುವ ಶಂಕಿತರಾದ ಮುಸಾವೀರ್ ಹುಸೇನ್ ಶಾಜೀಬ್ ಹಾಗೂ ಅಬ್ದುಲ್ ಮಥೀನ್ ಅಹಮದ್ ತಾಹಾನನ್ನು ಹೆಚ್ಚಿನ ವಿಚಾರಣೆಗಾಗಿ ಮುಂದಿನ 10 ದಿನಗಳವರೆಗೆ ಎನ್‌ಐಎ (ರಾಷ್ಟ್ರೀಯ ತನಿಖಾ ದಳ) ಅಧಿಕಾರಿಗಳ ಕಸ್ಟಡಿಗೆ ನೀಡಲಾಗಿದೆ.

ಮಾರ್ಚ್ 1ರಂದು ನಡೆದಿದ್ದ ಬಾಂಬ್ ಸ್ಫೋಟದ ತನಿಖೆ ಕೈಗೊಂಡಿದ್ದ ಎನ್‌ಐಎ ಅಧಿಕಾರಿಗಳು, ಮುಸಾವೀರ್ ಹಾಗೂ ಅಬ್ದುಲ್ ಮಥೀನ್‌ನನ್ನು ಪಶ್ಚಿಮ ಬಂಗಾಳದ ಪೂರ್ವ ಮೇದಿನಿಪುರ ಜಿಲ್ಲೆಯಲ್ಲಿ ಏ. 12ರಂದು ಬಂಧಿಸಿದ್ದರು. ಅವರಿಬ್ಬರನ್ನು ತಡರಾತ್ರಿಯೇ ಬೆಂಗಳೂರಿಗೆ ಕರೆತಂದ ಅಧಿಕಾರಿಗಳು, ಮಡಿವಾಳದಲ್ಲಿರುವ ವಿಶೇಷ ವಿಚಾರಣೆ ಕೊಠಡಿಯಲ್ಲಿ ಇರಿಸಿದ್ದರು.

ನಗರದ ಎನ್‌ಜಿವಿ ಕಾಂಪ್ಲೆಕ್ಸ್‌ನಲ್ಲಿರುವ ಎನ್‌ಐಎ ವಿಶೇಷ ನ್ಯಾಯಾಲಯದ ಉಸ್ತುವಾರಿ ನ್ಯಾಯಾಧೀಶ ಸಿ.ಬಿ. ಸಂತೋಷ್ ಅವರ ನಿವಾಸಕ್ಕೆ ಶನಿವಾರ ಬೆಳಿಗ್ಗೆ 11.30 ಗಂಟೆಗೆ ಶಂಕಿತರಿಬ್ಬರನ್ನು ಅಧಿಕಾರಿಗಳು ಹಾಜರುಪಡಿಸಿದರು.

ಎನ್‌ಐಎ ಪರ ಹಾಜರ

ಪ್ರಜಾ ಮತ 2024
ಜನತಂತ್ರದ ಹಬ್ಬ



ಒಳ–ಹೊರಗಿನವರ ಜಗಳದ ಹೂರಣ

ಮತ ಪತ್ರ



ಮತ ಆಮಿಷ: ಆಯೋಗದ ವಶ

₹46.59 ಕೋಟಿ ನಗದು

ಉಚಿತ ಉಡುಗೊರೆ ಮತ್ತು ಇತರೆ	₹79.86 ಕೋಟಿ
ಮದ್ಯ	₹151.49 ಕೋಟಿ (1.40 ಕೋಟಿ ಲೀ)
ಮಾದಕವಸ್ತು	₹9.93 ಕೋಟಿ (421.05 ಕೆ.ಜಿ.)
ಚಿನ್ನ	₹56.86 ಕೋಟಿ (107.40 ಕೆ.ಜಿ.)
ಬೆಳ್ಳಿ	₹1.07 ಕೋಟಿ (288.59 ಕೆ.ಜಿ.)

ಎಂಥಾ ಮಾತು!

ಬಿಜೆಪಿ–ಜೆಡಿಎಸ್ ಹೊಂದಾಣಿಕೆಯು ಅನ್ನ ಹಳಸಿತ್ತು-ನಾಯಿ ಹಸಿದಿತ್ತು ಎನ್ನುವಂತಾಗಿದೆ' 'ಜಾತ್ಯತೀತ ಎಂದು ಹೆಸರಿಟ್ಟುಕೊಂಡು ಬಿಜೆಪಿ ಜೊತೆ ಬೆರೆತಿರುವ ಜೆಡಿಎಸ್‌ಗೆ ಮಾನ- ಮರ್ಯಾದೆ ಇದೆಯೇ? ಕೇವಲ ಕುಟುಂಬದ ಹಿತಾಸಕ್ತಿಗಾಗಿ ಯಾರ ಜತೆಗೆ ಬೇಕಾದರೂ ಹೋಗಲು ಜೆಡಿಎಸ್ ಸಿದ್ಧವಾಗಿ ಬಿಡುತ್ತದೆ. ಯಾವುದೇ ಸಿದ್ಧಾಂತವಿಲ್ಲ, ಜನಪರವಾದ ಬದ್ಧತೆಯೂ ಇಲ್ಲ

ಸಿದ್ದರಾಮಯ್ಯ, ಮುಖ್ಯಮಂತ್ರಿ



ಭಾರತ್ ಮಾತಾ ಕೀ ಜೈ ಎಂದು ಕಾಂಗ್ರೆಸ್‌ನವರು ಕೂಗಿದರೆ, ನಾವು ಸ್ವಾಗತಿಸುತ್ತೇವೆ. ಭಾರತ ಮಾತೆಗೂ ಖುಷಿ ಆಗುತ್ತದೆ. ಆದರೆ, ಹೀಗೆ ಘೋಷಣೆ ಕೂಗಲು ಕಾಂಗ್ರೆಸ್‌ನವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಅಪ್ಪಣೆ ಕೇಳಬೇಕು. ಇದು ಏನನ್ನು ಬಿಂಬಿಸುತ್ತದೆ?

ಬಸವರಾಜ ಬೊಮ್ಮಾಯಿ, ಹಾವೇರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ

ಮೊದಲ ಮತದ ಸಂಭ್ರಮ

ಅಭಿಷೇಕ್, ಮಸ್ಕಿ

ಇದೇ ಮೊದಲ ಬಾರಿಗೆ ನಾನು ಮತದಾನ ಮಾಡುತ್ತಿದ್ದೇನೆ. ನನಗೆ ಮತದಾನದ ಕುರಿತು ತೀವ್ರ ಕುತೂಹಲದ ಜೊತೆಗೆ ಹೆಮ್ಮೆ ಇದೆ. ಮೊದಲ ಬಾರಿಗೆ ಹಕ್ಕು ಚಲಾವಣೆ ಮಾಡುತ್ತಿರುವುದರಿಂದ ನನ್ನ ಪ್ರತಿನಿಧಿಯನ್ನು ಆಯ್ಕೆ ಮಾಡಿಕೊಳ್ಳುತ್ತಿರುವೆ ಎನ್ನುವ ಹೆಮ್ಮೆ ಇದೆ. ಮತದಾನಕ್ಕೆ ಹೋಗುವ ಮೊದಲು ಅಭ್ಯರ್ಥಿಗಳ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡು ಮತ ಚಲಾಯಿಸುತ್ತೇನೆ.

ಕಣ ಸ್ವಾರಸ್ಯ

ಅಧಿಕ 'ಲೋಕಾ'ಧಿಪತಿಗಳು

ಬೆಂಗಳೂರು: ಈ ಬಾರಿ ಲೋಕಸಭೆಗೆ ಸ್ಪರ್ಧಿಸುವವರ ಪೈಕಿ 9 ಜನ ಮತ್ತೊಮ್ಮೆ ಸಂಸತ್ ಭವನ ಪ್ರವೇಶಿಸುವ ಉಮೇದಿನಲ್ಲಿದ್ದಾರೆ.

ಕರ್ನಾಟಕದಿಂದ ಕೆ.ಎಚ್. ಮುನಿಯಪ್ಪ 1991ರಿಂದ 2019ರವರೆಗೂ 28 ವರ್ಷಗಳು ಸಂಸತ್ ಸದಸ್ಯರಾಗಿದ್ದರು. 10 ವರ್ಷ ಕೇಂದ್ರ ಸಚಿವರಾಗಿದ್ದರು. ಪ್ರಸ್ತುತ ನಡೆಯುತ್ತಿರುವ 18ನೇ ಲೋಕಸಭಾ ಚುನಾವಣೆಯಲ್ಲೂ ರಾಜ್ಯದ ಕೆಲ ಕ್ಷೇತ್ರಗಳ ಅಭ್ಯರ್ಥಿಗಳು ಸತತವಾಗಿ ಗೆಲವು ಸಾಧಿಸುತ್ತಾ ಬಂದಿದ್ದು, ಮತ್ತೊಮ್ಮೆ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಪ್ರಸ್ತುತ ಕಣಕ್ಕೆ ಇಳಿದಿರುವ ಪ್ರಮುಖ ರಾಜಕೀಯ ಪಕ್ಷಗಳ ಅಭ್ಯರ್ಥಿಗಳಲ್ಲಿ ವಿಜಯಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರಮೇಶ್ ಜಿಗಜಿಣಗಿ ಅತಿ ಹೆಚ್ಚು ಬಾರಿ ಆಯ್ಕೆಯಾದವರು. 6 ಬಾರಿ ಸಂಸದರಾಗಿ, ಏಳನೇ ಬಾರಿ ಅದೃಷ್ಟ ಪರೀಕ್ಷೆಗೆ ಒಡ್ಡಿದ್ದಾರೆ. ಕಾಂಗ್ರೆಸ್‌ನಲ್ಲಿ ಅತಿ ಹೆಚ್ಚು ಅಂದರೆ, ನಾಲ್ಕನೇ ಬಾರಿ ಸ್ಪರ್ಧಿಸುತ್ತಿರುವ ಏಕೈಕ ಅಭ್ಯರ್ಥಿ ಡಿ.ಕೆ. ಸುರೇಶ್. ರಾಘವೇಂದ್ರ (2018) ಮತ್ತು ಸುರೇಶ್ (2013) ಒಂದು ಬಾರಿ ಉಪಚುನಾವಣೆಯಲ್ಲಿ ಗೆದ್ದಿದ್ದಾರೆ.

ಬಿಜೆಪಿ	● ಎಷ್ಟನೇ ಬಾರಿ ಸ್ಪರ್ಧೆ		
ರಮೇಶ್ ಜಿಗಜಿಣಗಿ, ವಿಜಯಪುರ	7	4	ಪಿ.ಸಿ. ಮೋಹನ್, ಬೆಂಗಳೂರು ಕೇಂದ್ರ
ಪ್ರಲ್ಹಾದ ಜೋಶಿ, ಧಾರವಾಡ	5	3	ಭಗವಂತ ಖೂಬಾ, ಬೀದರ್
ಪಿ.ಸಿ. ಗದ್ದಿಗೌಡರ್, ಬಾಗಲಕೋಟೆ	5	3	ಶೋಭಾ ಕರಂದ್ಲಾಜೆ, ಬೆಂಗಳೂರು ಉತ್ತರ
ಬಿ.ವೈ.ರಾಘವೇಂದ್ರ, ಶಿವಮೊಗ್ಗ	4		
ಕಾಂಗ್ರೆಸ್		**ಜೆಡಿಎಸ್**	
ಡಿ.ಕೆ. ಸುರೇಶ್, ಬೆಂಗಳೂರು ಗ್ರಾಮಾಂತರ	4	3	ಎಚ್.ಡಿ.ಕುಮಾರಸ್ವಾಮಿ, ಮಂಡ್ಯ

ತಿದ್ದುಪಡಿ: ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು, ತಮ್ಮ ಪತ್ನಿ ಭಾರತಿ ಹೆಗಡೆ ಬಳಿ ₹ 79 ಲಕ್ಷ ಮೌಲ್ಯದ ಆಸ್ತಿ ಇರುವುದಾಗಿ ಘೋಷಿಸಿಕೊಂಡಿದ್ದರು. ಆದರೆ, ಕಣ್ತಪ್ಪಿನಿಂದಾಗಿ ಪತ್ರಿಕೆಯ ಶನಿವಾರದ ಸಂಚಿಕೆಯಲ್ಲಿ ಭಾರತಿ ಹೆಗಡೆ ₹ 79 ಕೋಟಿ ಮೌಲ್ಯದ ಆಸ್ತಿ ಹೊಂದಿದ್ದಾರೆ ಎಂದು ಪ್ರಕಟವಾಗಿತ್ತು.

'ನಾನು ಹೊರಗಿನವನಲ್ಲ'

ವಿಧಾನಸಭೆ, ವಿಧಾನಪರಿಷತ್ತನ್ನು ಪ್ರತಿನಿಧಿಸಿದ್ದ ವಿ.ಸೋಮಣ್ಣ ಅವರು ಇದೇ ಮೊದಲ ಬಾರಿಗೆ ತುಮಕೂರು ಕ್ಷೇತ್ರದಲ್ಲಿ ಲೋಕಸಭೆ ಚುನಾವಣೆ ಎದುರಿಸುತ್ತಿದ್ದಾರೆ. ಕ್ಷೇತ್ರಕ್ಕೆ ಹೊಸಬರಾದರೂ ಬಿರುಸಿನ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದು, ಕ್ಷೇತ್ರದ ಅಭಿವೃದ್ಧಿಯ ಕನಸುಗಳನ್ನು ಬಿಚ್ಚಿಟ್ಟಿದ್ದಾರೆ.

ವಿ.ಸೋಮಣ್ಣ

● ಬೆಂಗಳೂರು ಬಿಟ್ಟು ತುಮಕೂರು ಆಯ್ಕೆ ಮಾಡಿಕೊಂಡಿದ್ದೇಕೆ?

– ನನ್ನ ಆಯ್ಕೆಯಲ್ಲ. ಪಕ್ಷದ ವರಿಷ್ಠರು ಅವಕಾಶ ನೀಡಿ ಇಲ್ಲಿಗೆ ಕಳುಹಿಸಿದ್ದಾರೆ. ರಾಷ್ಟ್ರೀಯ ಪಕ್ಷ ಬಿಜೆಪಿಗೆ ತನ್ನದೇ ಆದ ಚಿಂತನೆ ಇರುತ್ತದೆ. ಬೆಂಗಳೂರು ನಗರಕ್ಕೆ ನಾನು ಕೊಟ್ಟ ಕೊಡುಗೆ ಗುರುತಿಸಿದ್ದಾರೆ. ನನ್ನ ಅನುಭವ ಪರಿಗಣಿಸಿದ್ದಾರೆ.

● ಮೋದಿ ನೋಡಿ ವೋಟು ಕೊಡಿ ಎನ್ನುತ್ತಿದ್ದೀರಿ? ನಿಮ್ಮದೇ ಅದ ವ್ಯಕ್ತಿತ್ವ ಇಲ್ಲವೆ?

– ನನಗಾಗಿ ಚುನಾವಣೆ ನಡೆಯುತ್ತಿಲ್ಲ. ಇದು ದೇಶದ ಚುನಾವಣೆ. ಮೋದಿ ದೇಶದ ಆಸ್ತಿ. ಮನೆಯ ಯಜಮಾನನ್ನು ಮುಂದಿಟ್ಟುಕೊಂಡು ವೋಟು ಕೇಳುವುದರಲ್ಲಿ ತಪ್ಪೇನಿದೆ? ಅವರ ನಾಯಕತ್ವದಲ್ಲೇ ಚುನಾವಣೆ ನಡೆಯುತ್ತಿರುವುದು.

● ನೀವು ಕ್ಷೇತ್ರಕ್ಕೆ ಹೊರಗಿನವರು ಎಂದು ಕಾಂಗ್ರೆಸ್ ಪ್ರಚಾರ ನಡೆಸಿದೆಯಲ್ಲ?

– ಹೊರಗಿನವರು– ಒಳಗಿನವರು ಎಂಬ ಭಿನ್ನತೆ ಇಲ್ಲ. ಮೊಸರಿನಲ್ಲಿ ಕಲ್ಲು ಹುಡುಕುವ ಕೆಲಸ ಮಾಡಬಾರದು. ಮುಖ್ಯಮಂತ್ರಿ ಸಿದ್ದರಾಮಯ್ಯ ವರುಣ ಬಿಟ್ಟು ಬಾದಾಮಿಗೆ ಏಕೆ ಹೋದರು? ಒಕ್ಕೂಟ ವ್ಯವಸ್ಥೆಯಲ್ಲಿ ಯಾರು, ಎಲ್ಲಿ ಬೇಕಾದರೂ ಸ್ಪರ್ಧಿಸುವ ಅವಕಾಶ ಇದೆ.

● ಜೆ.ಸಿ.ಮಾಧುಸ್ವಾಮಿ ಸಹಕಾರ ಸಿಗುತ್ತಿದೆಯೇ?

– ಮಾಧುಸ್ವಾಮಿ, ನಾನು ಆತ್ಮೀಯ ಸ್ನೇಹಿತರು. ಕೆಲವು ಸಂದರ್ಭ, ಸನ್ನಿವೇಶದಲ್ಲಿ ಅವರ ಮನಸ್ಸಿಗೆ ನೋವಾಗಿರಬಹುದು. ಈಗ ಅದೆಲ್ಲ ಸರಿ ಹೋಗಿದೆ. ಅವರಿಂದ ನನಗೆ ಯಾವುದೇ ತೊಂದರೆ ಆಗುವುದಿಲ್ಲ. ಅವರ ಬೆಂಬಲಿಗರು ನನ್ನ ಪರವಾಗಿ ಕೆಲಸ ಮಾಡುತ್ತಿದ್ದಾರೆ.

● ಜೆಡಿಎಸ್ ಜತೆಗಿನ ಹೊಂದಾಣಿಕೆಗೆ ಅಸಮಾಧಾನ?

– ಜೆಡಿಎಸ್– ಬಿಜೆಪಿ ಮುಖಂಡರು, ಕಾರ್ಯಕರ್ತರು ಒಟ್ಟಾಗಿ ಕೆಲಸ ಮಾಡುತ್ತಿದ್ದಾರೆ. ಎಲ್ಲೂ ಅಪಸ್ವರ ಕೇಳಿ ಬಂದಿಲ್ಲ. ಈ ಬಾರಿ ಪ್ರೀತಿ, ವಿಶ್ವಾಸದ ಮೇಲೆ ಹೊಂದಾಣಿಕೆ ನಡೆದಿದೆ. ದೇಶ ರಕ್ಷಿಸಲು ಎಚ್.ಡಿ.ದೇವೇಗೌಡ ಐತಿಹಾಸಿಕ ನಿರ್ಧಾರ ತೆಗೆದುಕೊಂಡಿದ್ದಾರೆ. ನರೇಂದ್ರ ಮೋದಿ ದೇಶಕ್ಕೆ ಅನಿವಾರ್ಯ ಎಂಬ ಮಾತುಗಳನ್ನು ಗೌಡರು ಆಡಿದ್ದಾರೆ. ಎಲ್ಲಕ್ಕಿಂತ ದೇಶ ದೊಡ್ಡದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

● ಒಳ ಒಪ್ಪಂದದ ಮಾತು ಕೇಳಿ ಬರುತ್ತಿದೆಯಲ್ಲ?

– ಒಳ ಒಪ್ಪಂದವೂ ಇಲ್ಲ, ಹೊರ ಒಪ್ಪಂದವೂ ಇಲ್ಲ! ದೇಶ ರಕ್ಷಣೆಯಷ್ಟೇ ಮುಖ್ಯ. ಪಕ್ಷದ ಯಾವ ಮುಖಂಡರೂ ಅಂತಹ ಸಾಹಸಕ್ಕೆ ಕೈ ಹಾಕುವುದಿಲ್ಲ. ಯಾರೋ ಒಬ್ಬರು ಹೇಳಿದರೆ ಏನೂ ಆಗುವುದಿಲ್ಲ. ಅಂತಹ ಪ್ರಯತ್ನ ಮಾಡಿದವರು ಪರಿಣಾಮ ಎದುರಿಸಬೇಕಾಗುತ್ತದೆ.

● ಕಳೆದ ಬಾರಿ ಹೊಂದಾಣಿಕೆ ನೆರವಿಗೆ ಬರಲಿಲ್ಲ?

– ಹಿಂದಿನ ಚುನಾವಣೆಯಲ್ಲಿ ಕಾಂಗ್ರೆಸ್– ಜೆಡಿಎಸ್ ಬೂಟಾಟಿಕೆಗೆ ಹೊಂದಾಣಿಕೆ ಮಾಡಿಕೊಂಡಿದ್ದವು. ಹೃದಯದಿಂದ ಹೊಂದಾಣಿಕೆ ಆಗಿರಲಿಲ್ಲ. ಆದರೆ ಈ ಬಾರಿ ಅಂತಹ ಸಮಸ್ಯೆ ಇಲ್ಲ.

● ಕೇಂದ್ರ ಸರ್ಕಾರ ಬರ ಪರಿಹಾರ ಕೊಡಲಿಲ್ಲ ಎಂಬ ಸಿಟ್ಟು ಜನರಲ್ಲಿದೆ?

– ರಾಜ್ಯ ಪ್ರತಿನಿಧಿಸುವವರು ಹೇಗೆ ನಡೆದುಕೊಳ್ಳುತ್ತಾರೆ ಎಂಬುದರ ಮೇಲೆ ಕೇಂದ್ರ ಸರ್ಕಾರ ಸ್ಪಂದಿಸುತ್ತದೆ. ತಾರತಮ್ಯ ತೋರಿಲ್ಲ. ಕೇಂದ್ರದ ಜತೆ ಸಂಘರ್ಷಕ್ಕೆ ಇಳಿಯಬಾರದು. ಮತ್ತೊಬ್ಬರ ಮೇಲೆ ಗೂಬೆ ಕೂರಿಸುವ ಕೆಲಸ ಮಾಡಬಾರದು. ❖

ಪ್ರಜಾವಾಣಿ ಸಂದರ್ಶನ

ವಿ.ಸೋಮಣ್ಣ
ಎಸ್.ಪಿ.ಮುದ್ದಹನುಮೇಗೌಡ

● ಸಂದರ್ಶನ: ಕೆ.ಜಿ. ಮರಿಯಪ್ಪ

'ಸೋಮಣ್ಣ ಹೊರಗಿನವರು'

ತುಮಕೂರು ಲೋಕಸಭೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಪಿ.ಮುದ್ದಹನುಮೇಗೌಡ ಅವರು ಸಂಸದರಾಗಿದ್ದಾಗ ಮಾಡಿದ ಸಾಧನೆ ಮತ್ತು ಅಭಿವೃದ್ಧಿಯ ಕನಸುಗಳನ್ನು 'ಪ್ರಜಾವಾಣಿ'ಯೊಂದಿಗೆ ಹಂಚಿಕೊಂಡಿದ್ದಾರೆ. ಪಕ್ಷಾಂತರದ ಪರಿಣಾಮಗಳನ್ನು ತೆರೆದಿಟ್ಟಿದ್ದಾರೆ.

ಎಸ್.ಪಿ.ಮುದ್ದಹನುಮೇಗೌಡ

● ಯಾವ ವಿಚಾರ ಮುಂದಿಟ್ಟುಕೊಂಡು ಚುನಾವಣೆ ಎದುರಿಸುತ್ತಿದ್ದೀರಿ?

ರಾಜ್ಯ ಸರ್ಕಾರ ಜಾರಿಗೆ ತಂದಿರುವ ಐದು ಗ್ಯಾರಂಟಿ ಯೋಜನೆಗಳು ಬಡವರಿಗೆ ನೆರವಾಗಿವೆ. ಇದಕ್ಕೆ ಪ್ರತಿಫಲವಾಗಿ ಮತ ನೀಡುವಂತೆ ಕೇಳುತ್ತಿದ್ದೇನೆ. ಯಾರು ಸಮರ್ಥರೆಂದು ಮೌಲ್ಯಮಾಪನ ಮಾಡಿ, ಸಾಮರ್ಥ್ಯ ಇದ್ದವರನ್ನು ಆಯ್ಕೆ ಮಾಡುವಂತೆ ಮನವಿ ಮಾಡುತ್ತಿದ್ದೇನೆ.

2014–19ರಲ್ಲಿ ಸಂಸದನಾಗಿ ಜಿಲ್ಲೆ, ರಾಜ್ಯ, ದೇಶದ ಧ್ವನಿಯಾಗಿದ್ದೆ. ಹಲವು ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಕ್ಷೇತ್ರದ ಕಟ್ಟಕಡೆಯ ವ್ಯಕ್ತಿಯೂ ನೇರವಾಗಿ ಭೇಟಿಯಾಗುವ ಮಟ್ಟಕ್ಕೆ ಲಭ್ಯವಿದ್ದೇನೆ. ಲೋಕಸಭೆಯಲ್ಲಿ ಐದು ವರ್ಷಗಳಲ್ಲಿ 700ಕ್ಕೂ ಹೆಚ್ಚು ಪ್ರಶ್ನೆ ಕೇಳಿದ್ದೇನೆ. 120ಕ್ಕೂ ಹೆಚ್ಚು ಬಾರಿ ಮಾತನಾಡಿದ್ದೇನೆ.

● ಪಕ್ಷಾಂತರಿ ಎಂಬ ಅಪವಾದ ಇದೆಯಲ್ಲ?

ನಾನೆಂದೂ ಅಧಿಕಾರಕ್ಕಾಗಿ ಪಕ್ಷಾಂತರ ಮಾಡಿಲ್ಲ. ಚುನಾವಣೆಯಲ್ಲಿ ಸ್ಪರ್ಧೆ ಮಾಡದಂತೆ ತಪ್ಪಿಸಿದ್ದರಿಂದ ಪಕ್ಷಾಂತರ ಮಾಡಬೇಕಾಯಿತು. ಇದು ಸರಿ ಎಂದು ವಾದಿಸುವುದಿಲ್ಲ. ಅದಕ್ಕಾಗಿ ಕ್ಷಮೆ ಕೇಳಿದ್ದೇನೆ.

● ಕಳೆದ ಬಾರಿ ದೇವೇಗೌಡರ ಸೋಲಿಗೆ ಕಾರಣರಾಗಿದ್ದೀರಿ ಎಂಬ ಅಪವಾದ ನಿಮ್ಮ ಮೇಲೆ ಇದೆಯಲ್ಲ?

ಈ ವಿಚಾರ ಕಳೆದ ಐದು ವರ್ಷಗಳಲ್ಲಿ ಎಲ್ಲೂ ಚರ್ಚೆಯಾಗಿಲ್ಲ. ನಾನು ಚುನಾವಣೆಗೆ ಸ್ಪರ್ಧಿಸಿದ ನಂತರ ವಿರೋಧಿಗಳು ಅಪಪ್ರಚಾರ ಮಾಡುತ್ತಿದ್ದಾರೆ. ಆಗ ನಾನು ಹಾಲಿ ಸಂಸದನಾಗಿದ್ದರೂ (2019) ಗೌಡರ ಸ್ಪರ್ಧೆಗೆ ವಿರೋಧ ಮಾಡಲಿಲ್ಲ. ಗೌಡರು, ಎಚ್.ಡಿ.ಕುಮಾರಸ್ವಾಮಿ ಕರೆಯದಿದ್ದರೂ ಪ್ರಚಾರ ಮಾಡಿದ್ದೇನೆ. ಗೌಡರ ವಿರುದ್ಧ ಪ್ರಚಾರ ಮಾಡಿರುವುದನ್ನು ತೋರಿಸಿದರೆ ಯಾವುದೇ ಶಿಕ್ಷೆ ಎದುರಿಸಲು ಸಿದ್ಧನಿದ್ದೇನೆ.

● ಕಾಂಗ್ರೆಸ್‌ನವರು ದೇವೇಗೌಡರ ಸಾವು ಬಯಸಿದ್ದಾರೆ ಎಂಬ ಪ್ರಚಾರದ ಬಗ್ಗೆ ಏನು ಹೇಳುತ್ತೀರಿ?

ಪದ ಬಳಕೆಯಲ್ಲಿ, ಮಾತಿನ ಭರದಲ್ಲಿ ವ್ಯತ್ಯಾಸ ಆಗಿರಬಹುದು. ಯಾರೂ ಗೌಡರ ಸಾವು ಬಯಸಿಲ್ಲ. ಜಾತ್ಯತೀತ ತತ್ವದಲ್ಲಿ ನಂಬಿಕೆ ಇಟ್ಟವರು ಜಾತಿವಾದ ಮಾಡುವ ಪಕ್ಷದ ಜೊತೆ ಕೈ ಜೋಡಿಸಿದ್ದಾರೆ ಎಂದು ಸಚಿವ ಕೆ.ಎನ್.ರಾಜಣ್ಣ ಹೇಳಿದ್ದಾರೆ. ಹಿರಿಯ ರಾಜಕಾರಣಿ ಬಗ್ಗೆ ಲಘುವಾಗಿ ಯಾರೊಬ್ಬರೂ ಮಾತನಾಡುವುದು ನನಗೂ ಇಷ್ಟವಾಗುವುದಿಲ್ಲ.

● ಕಳೆದ ಬಾರಿ 'ಹೊರಗಿನವರು' ವಿಚಾರ ಹೆಚ್ಚು ಪ್ರಚಾರವಾಗಿತ್ತು?

ಎಚ್.ಡಿ.ದೇವೇಗೌಡ ಅವರನ್ನು ಹೊರಗಿನವರು ಎಂದು ಬಿಜೆಪಿಯವರು ಹಂಗಿಸಿದರು. ಈ ಬಾರಿಯೂ ಸೋಮಣ್ಣ ಹೊರಗಿನವರು ಎಂಬ ಸತ್ಯವನ್ನು ಮುಚ್ಚಿಡಲಾಗದು. 'ಹೊರಗಿನವರು' ವಿಚಾರಕ್ಕೆ ಒತ್ತುಕೊಟ್ಟು ಪ್ರಚಾರ ಮಾಡಿದರು. ಈ ಬಾರಿ ಅವರಿಗೇ ತಿರುಗು ಬಾಣವಾಗಲಿದೆ. ಹೊರಗಿನಿಂದ ಬಂದು ಕ್ಷೇತ್ರದಲ್ಲಿ ಸ್ಪರ್ಧಿಸಿ ಆಯ್ಕೆಯಾದವರು ಕಡಿಮೆ.

● ನಿಮ್ಮ ಎದುರಾಳಿ ಮೋದಿ ನೋಡಿ ಮತ ಕೊಡಿ ಎನ್ನುತ್ತಿದ್ದಾರೆ?

ಅದು ಅವರ ವೀಕ್‌ನೆಸ್. ಜಿಲ್ಲೆಗೆ ಸೋಮಣ್ಣ ಕೊಡುಗೆ ಏನು? ಆಯ್ಕೆಯಾದರೆ ಏನು ಕೆಲಸ ಮಾಡುತ್ತೇನೆ ಎಂದು ಹೇಳಿ ಅವರು ಮತ ಕೇಳುತ್ತಿಲ್ಲ. ಮೋದಿ ಪ್ರಧಾನಿ ಮಾಡಲು ವೋಟು ಕೊಡಿ ಎನ್ನುತ್ತಿದ್ದಾರೆ. ಹಾಗಾದರೆ ಸಮರ್ಥರಲ್ಲದವರನ್ನು ಆಯ್ಕೆ ಮಾಡಬೇಕೆ? ಅವರಿಗೂ ಜಿಲ್ಲೆಗೂ ಏನು ಸಂಬಂಧ? ಜಿಲ್ಲೆಯಲ್ಲಿ ಬಿಜೆಪಿಗೆ ಸಮರ್ಥ ನಾಯಕರು ಇರಲಿಲ್ಲವೆ? ❖

● ಜೆಡಿಎಸ್– ಬಿಜೆಪಿ ಹೊಂದಾಣಿಕೆಯ ಪರಿಣಾಮ?

ಕಳೆದ ಬಾರಿ ಹೊಂದಾಣಿಕೆ (ಕಾಂಗ್ರೆಸ್– ಜೆಡಿಎಸ್) ಮಾಡಿಕೊಂಡು ದೇವೇಗೌಡರು ಸೋಲುವಂತಾಯಿತು. ಗೆಲುವಿಗೆ ಹೊಂದಾಣಿಕೆ ನೆರವಾಗುವುದಿಲ್ಲ. ನಾಯಕರು ಒಟ್ಟಾದರೂ ಕಾರ್ಯಕರ್ತರು ಒಗ್ಗೂಡುವುದಿಲ್ಲ. ಲಾಭಕ್ಕಿಂತ, ನಷ್ಟವೇ ಹೆಚ್ಚು. ಈಗಲೂ ಅಂತಹುದೇ ಪರಿಸ್ಥಿತಿ ಇದೆ. ಅದು ನಮ್ಮ ನೆರವಿಗೆ ಬರಲಿದೆ.

'ಅಕ್ಕ ಪೆಗ್ ತೊಗೋಬೇಕು'

ಬೆಳಗಾವಿ: 'ಬೆಳಗಾವಿ ಗ್ರಾಮೀಣ ಕ್ಷೇತ್ರದಲ್ಲಿ ಬಿಜೆಪಿಗೆ ಸಿಕ್ಕ ಬೆಂಬಲ ನೋಡಿದರೆ 'ಅಕ್ಕ' ನಿದ್ದೆಗೆಡುತ್ತಾರೆ. ಅವರು ನಿದ್ದೆ ಮಾತ್ರೆ ತೆಗೆದುಕೊಳ್ಳಬೇಕು ಇಲ್ಲವೇ ಒಂದು 'ಪೆಗ್' ಹೆಚ್ಚುವರಿ ಕುಡಿಯಬೇಕು' ಎಂದು ಬೆಳಗಾವಿ ಲೋಕಸಭಾ ಕ್ಷೇತ್ರದ ಬಿಜೆಪಿ ಉಸ್ತುವಾರಿ ಸಂಜಯ ಪಾಟೀಲ ಅವರು, ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೆಸರು ಹೇಳದೇ ಮೂದಲಿಸಿದರು.

ಹಿಂಡಲಗಾದಲ್ಲಿ ಶನಿವಾರ ನಡೆದ ಬೆಳಗಾವಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, 'ಅಕ್ಕನ ಕ್ಷೇತ್ರದಲ್ಲೇ ಬಿಜೆಪಿ ಸಮಾವೇಶದಲ್ಲಿ ಅಪಾರ ಸಂಖ್ಯೆ ಮಹಿಳೆಯರು ಸೇರಿದ್ದಾರೆ' ಎಂದರು.

'ಬೆಳಗಾವಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸೋತರೆ ₹2 ಸಾವಿರ, ಉಚಿತ ವಿದ್ಯುತ್, ಬಸ್ ಪ್ರಯಾಣ ಎಲ್ಲವನ್ನೂ ಬಂದ್ ಮಾಡುವ ಎಂದು ಸಚಿವೆ ಮಹಿಳೆಯರಿಗೆ ಬೆದರಿಕೆ ಒಡ್ಡಿದ್ದಾರೆ. ಇವರೇನೂ ತಮ್ಮ ಮನೆಯಿಂದ ಹಣ ಕೊಡುತ್ತಿಲ್ಲ. ನಿಮ್ಮದೇ ಹಣ ತೆರಿಗೆ ರೂಪದಲ್ಲಿ ಪಡೆದು, ನಿಮಗೇ ಕೊಡುತ್ತಾರೆ. ಯಾರೂ ಇಂಥ ಬೆದರಿಕೆಗೆ ಹೆದರಬೇಡಿ' ಎಂದರು.

ಗೋಕಾಕ ಶಾಸಕ ರಮೇಶ ಜಾರಕಿಹೊಳಿ ಮಾತನಾಡಿ, 'ಈ ಚುನಾವಣೆ ಮುಗಿದ ಬಳಿಕ ಎಲ್ಲ ಗ್ಯಾರಂಟಿಗಳು ಬಂದ್ ಆಗುತ್ತವೆ. ಆಗ ರಾಜ್ಯದಲ್ಲಿ ಮತ್ತೆ ಡಬಲ್ ಎಂಜಿನ್ ಸರ್ಕಾರ ಬರುತ್ತದೆ. ಚುನಾವಣೆ ಮುಗಿಯುವರೆಗೆ ಯಾರ ವಿರುದ್ಧವೂ ಮಾತನಾಡಲ್ಲ ಎಂದು ನಾನು ತಮ್ಮ ಬಾಲಚಂದ್ರ ಜಾರಕಿಹೊಳಿಗೆ ಮಾತು ಕೊಟ್ಟಿದ್ದೇನೆ. ಯಾರಿಗೋ ಹೆದರಿ ಮಾತು ನಿಲ್ಲಿಸಿಲ್ಲ. ಆದರೆ, ನಾನು ಹೆದರಿಬಿಟ್ಟಿದ್ದೇನೆ ಎಂದು 'ಅವರು' ಭ್ರಮೆಯಲ್ಲಿದ್ದಾರೆ. ಚುನಾವಣೆ ಬಳಿಕ ನಾನು ಯಾರೆಂದು ತೋರಿಸುತ್ತೇನೆ' ಎಂದರು. ಅಭ್ಯರ್ಥಿ ಜಗದೀಶ ಶೆಟ್ಟರ್ ಸೇರಿ ಹಲವು ಮುಖಂಡರು ಇದ್ದರು.

'ಮಹಿಳಾ ಕುಲಕ್ಕೆ ಬಿಜೆಪಿಯಿಂದ ಅವಮಾನ'

ಬೆಳಗಾವಿ: 'ಸಂಜಯ ಪಾಟೀಲ ಅವರು ನನ

ಕಳೆದೊಂದು ದಶಕದಲ್ಲಿ ಬಿಜೆಪಿ ನೆಚ್ಚಿಕೊಂಡಿರುವುದು ಪ್ರಧಾನಿ ನರೇಂದ್ರ ಮೋದಿ ಅವರ ಚರಿಷ್ಮಾವನ್ನು. ಪಕ್ಷವು ಜಾಣ್ಮೆಯ 'ಸೋಷಿಯಲ್ ಎಂಜಿನಿಯರಿಂಗ್' ಸೂತ್ರದ ಮೂಲಕ ಹಳ್ಳಿ ಹಳ್ಳಿಗಳಲ್ಲಿ ತನ್ನ ನೆಲೆ ವಿಸ್ತರಿಸಿದೆ

ಕೇಸರಿ 'ಪ್ರಯೋಗ'ದ ಸಿ.ಎಂಗಳ ಮುಂದಿದೆ ಸವಾಲು

• ಮಂಜುನಾಥ ಹೆಬ್ಬಾರ್

ನವದೆಹಲಿ: ಹಿಂದಿ ನೆಲದ ಮಧ್ಯಪ್ರದೇಶ, ರಾಜಸ್ಥಾನ ಹಾಗೂ ಛತ್ತೀಸಗಢ ವಿಧಾನಸಭಾ ಚುನಾವಣೆಗಳಲ್ಲಿ ಭರ್ಜರಿ ಜಯ ಗಳಿಸಿದ ಬಳಿಕ ಮುಖ್ಯಮಂತ್ರಿ ಆಯ್ಕೆಯಲ್ಲಿ ಬಿಜೆಪಿ ಹೊಸ ಪ್ರಯೋಗ ಮಾಡಿತು. ವಾಜಪೇಯಿ-ಅಡ್ವಾಣಿ ಯುಗದ ನಾಯಕರಾದ ಶಿವರಾಜ ಸಿಂಗ್ ಚೌಹಾಣ್, ಅರುಣ್ ಸಿಂಗ್ ಹಾಗೂ ವಸುಂಧರಾ ರಾಜೇ ಸಿಂಧಿಯಾ ಅವರು ಹೊಸಬರಿಗೆ ದಾರಿ ಮಾಡಿಕೊಟ್ಟರು. ಲೋಕಸಭಾ ಚುನಾವಣೆಯಲ್ಲಿ ಹೊಸ ತಲೆಮಾರಿನ ಈ ಮುಖ್ಯಮಂತ್ರಿಗಳ ಮುಂದೆ ಭಾರಿ ಸವಾಲಿದೆ. ಪಕ್ಷದ ಹಿರಿಯ ನಾಯಕರ ಒಳ ಏಟು ಹಾಗೂ ಅಸಹಕಾರದ ನಡುವೆ ಎದುರಾಳಿಯ ಸವಾಲನ್ನು ಮೀರಿ ನಿಂತು ಗರಿಷ್ಠ ಸ್ಥಾನಗಳನ್ನು ಗೆಲ್ಲಿಸಿಕೊಂಡು ಬರಬೇಕಿದೆ.

2003ರಲ್ಲಿ ನಡೆದ ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸಗಢ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭೂತಪೂರ್ವ ಜಯ ಗಳಿಸಿತ್ತು. 'ಭಾರತ ಪ್ರಕಾಶಿಸುತ್ತಿದೆ' ಎಂದು ಅಬ್ಬರದ ಪ್ರಚಾರ ನಡೆಸಿ 2004ರಲ್ಲಿ ಲೋಕಸಭಾ ಚುನಾವಣೆ ಎದುರಿಸಿದ್ದ ಬಿಜೆಪಿ ಅಧಿಕಾರ ಕಳೆದುಕೊಂಡಿತ್ತು. 2018ರಲ್ಲಿ ಈ ಮೂರು ರಾಜ್ಯಗಳಲ್ಲಿ 'ಕೈ' ಪಾಳಯ ಅಧಿಕಾರದ ಚುಕ್ಕಾಣಿ ಹಿಡಿದಿತ್ತು. ಆದರೆ, 2019ರ ಲೋಕಸಭಾ ಚುನಾವಣೆಯಲ್ಲಿ ಈ ರಾಜ್ಯಗಳಲ್ಲಿ ಕಾಂಗ್ರೆಸ್ ಗೆದ್ದಿದ್ದು ಮೂರು ಕ್ಷೇತ್ರಗಳನ್ನಷ್ಟೇ. ಕೇಸರಿ ಪಾಳಯವು 62 ಕ್ಷೇತ್ರಗಳನ್ನು ಬಾಚಿಕೊಂಡಿತ್ತು.

2023ರ ವಿಧಾನಸಭಾ ಚುನಾವಣೆಯಲ್ಲಿ ಮೂರು ರಾಜ್ಯಗಳಲ್ಲಿ ಬಿಜೆಪಿ ಜಯಭೇರಿ ಬಾರಿಸಿದೆ. 2003ಕ್ಕೆ ಹೋಲಿಸಿದರೆ ಈಗ ಪರಿಸ್ಥಿತಿ ಭಿನ್ನವಾಗಿದೆ. ಕಳೆದೊಂದು ದಶಕದಲ್ಲಿ ಬಿಜೆಪಿ ನೆಚ್ಚಿಕೊಂಡಿರುವುದು ಪ್ರಧಾನಿ ನರೇಂದ್ರ ಮೋದಿ ಅವರ ಚರಿಷ್ಮಾವನ್ನು. ಪಕ್ಷವು ಜಾಣ್ಮೆಯ 'ಸೋಷಿಯಲ್ ಎಂಜಿನಿಯರಿಂಗ್' ಸೂತ್ರದ ಮೂಲಕ ಹಳ್ಳಿ ಹಳ್ಳಿಗಳಲ್ಲಿ ತನ್ನ ನೆಲೆ ವಿಸ್ತರಿಸಿದೆ. ಇತ್ತೀಚಿನ ಚುನಾವಣಾ ಸಾಧನೆ ಗಮನಿಸಿದರೆ ಈ ಪ್ರಯತ್ನದಲ್ಲಿ ಪಕ್ಷಕ್ಕೆ ಭಾರಿ ಯಶಸ್ಸು ಸಿಕ್ಕಿದೆ.

ಈ ನಡುವೆ, ಮಧ್ಯಪ್ರದೇಶ ಹಾಗೂ ರಾಜಸ್ಥಾನ ವಿಧಾನಸಭಾ ಚುನಾವಣೆಗಳ ಹೀನಾಯ ಸೋಲಿನ ನಂತರ ಕಾಂಗ್ರೆಸ್ ಪಕ್ಷವು 'ನಾಯಕತ್ವ ಬದಲಾವಣೆ' ಪ್ರಕ್ರಿಯೆ ನಡೆಸಿದೆ. ಎರಡನೇ ತಲೆಮಾರಿನ ನಾಯಕರಿಗೆ ಮಣೆ ಹಾಕಿದೆ. ಮಧ್ಯಪ್ರದೇಶದಲ್ಲಿ ಹಿರಿಯ ನಾಯಕ ಕಮಲನಾಥ್ ಅವರನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿ ಜೀತು ಪಟ್ವಾರಿ ಅವರನ್ನು ಈ ಹುದ್ದೆಗೆ ಏರಿಸಿದೆ. ರಾಜಸ್ಥಾನದಲ್ಲಿ ಟೀಕಾ ರಾಮ್ ಅವರನ್ನು ವಿಪಕ್ಷ ನಾಯಕನನ್ನಾಗಿ ಮಾಡಲಾಗಿದೆ. ಈ ಪ್ರಯೋಗದಿಂದ ಯಶಸ್ಸು ಸಿಗಲಿದೆ ಎಂಬುದು ಕಾಂಗ್ರೆಸ್ ನಾಯಕರ ವಿಶ್ವಾಸ.

ಯಾದವರ ಮತದತ್ತ ಚಿತ್ತ

ಮೋಹನ್ ಯಾದವ್

ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ಅವರು ಪ್ರಬಲ ಒಬಿಸಿ (ಇತರೆ ಹಿಂದುಳಿದ ಸಮುದಾಯ) ವರ್ಗದ ನಾಯಕ. ಶಿವರಾಜ ಸಿಂಗ್ ಚೌಹಾಣ್, ನರೇಂದ್ರ ಸಿಂಗ್ ತೋಮರ್, ಜ್ಯೋತಿರಾದಿತ್ಯ ಸಿಂಧಿಯಾ, ಕೈಲಾಶ್ ವಿಜಯ್‌ವರ್ಗೀಯ ಅವರು ರಾಜ್ಯದ ಪ್ರಬಲ ನಾಯಕರೆಂದು ಗುರುತಿಸಿಕೊಂಡಿದ್ದರು. ಅವರನ್ನು ಪಕ್ಕಕ್ಕೆ ಸರಿಸಿ ಮೋಹನ್ ಯಾದವ್ ಅವರನ್ನು ಮುಖ್ಯಮಂತ್ರಿ ಗಾದಿಗೆ ಏರಿಸಲಾಗಿದೆ. ಉತ್ತರ ಪ್ರದೇಶ ಹಾಗೂ ಬಿಹಾರದಲ್ಲಿ ಯಾದವರು ಮಂಡಲೋತ್ತರ ರಾಜಕೀಯದ ಪ್ರಮುಖ ಫಲಾನುಭವಿಗಳು. ಉತ್ತರ ಪ್ರದೇಶದಲ್ಲಿ ಎಸ್‌ಪಿ ನಾಯಕ ಅಖಿಲೇಶ್ ಯಾದವ್ ಹಾಗೂ ಬಿಹಾರದಲ್ಲಿ ಆರ್‌ಜೆಡಿಯ ತೇಜಸ್ವಿ ಯಾದವ್ ಅವರು ಯಾದವ ಸಮುದಾಯದ ಪ್ರಮುಖ ನಾಯಕರು. ಆ ಎರಡು ರಾಜ್ಯಗಳ ಯಾದವ ಸಮುದಾಯದ ಮತಗಳನ್ನು ಪಕ್ಷಕ್ಕೆ ಸೆಳೆಯುವ ಉದ್ದೇಶದಿಂದಲೂ ಮೋಹನ್ ಯಾದವ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲಾಗಿತ್ತು. ಮೋಹನ್ ಯಾದವ್ ಅವರು ಎರಡೂ ರಾಜ್ಯಗಳಲ್ಲಿ ಹಲವು ಸಲ ಚುನಾವಣಾ ಪ್ರಚಾರ ನಡೆಸಿ ಮತ ಸೆಳೆಯುವ ಕಸರತ್ತು ನಡೆಸಿದ್ದಾರೆ. ಜತೆಗೆ, ಮಧ್ಯಪ್ರದೇಶದಲ್ಲಿ ಮುಖ್ಯಮಂತ್ರಿ ಸ್ಥಾನ ವಂಚಿತ ಹಿರಿಯ ನಾಯಕರು ಎಷ್ಟರ ಮಟ್ಟಿಗೆ ತನು ಮನ ಧನದಿಂದ ಮೋಹನ್ ಯಾದವ್ ಅವರಿಗೆ ಸಹಕಾರ ನೀಡುತ್ತಾರೆ ಎಂಬುದು ಕುತೂಹಲಕರ. ಶಿವರಾಜ ಸಿಂಗ್ ಚೌಹಾಣ್ ಅವರು ವಿದಿಶಾ ಕ್ಷೇತ್ರದ ಹುರಿಯಾಳು.

'ಕೈ' ಪಟ್ಟು- ಸಾಯ್ ತಂತ್ರವೇನು?

ಛತ್ತೀಸಗಢದಲ್ಲಿ ಮಾಜಿ ಮುಖ್ಯಮಂತ್ರಿ ರಮಣ್ ಸಿಂಗ್ ಮುಖ್ಯಮಂತ್ರಿ ಮೇಲೆ ಕಣ್ಣಿಟ್ಟಿದ್ದರು. ಅವರನ್ನು ವಿಧಾನಸಭಾಧ್ಯಕ್ಷ ಸ್ಥಾನಕ್ಕೆ ಹಿಂಬಡ್ತಿ ನೀಡಲಾಗಿತ್ತು. ಬುಡಕಟ್ಟು ಸಮುದಾಯದ ನಾಯಕ ವಿಷ್ಣುದೇವ್ ಸಾಯ್ ಅವರಿಗೆ ಮುಖ್ಯಮಂತ್ರಿ ಸ್ಥಾನದ ಅದೃಷ್ಟ ಒಲಿದಿತ್ತು. ವಿಧಾನಸಭಾ ಚುನಾವಣೆಯಲ್ಲಿ ಅನಿರೀಕ್ಷಿತ ಸೋಲಿನ ಬಳಿಕ ಕಾಂಗ್ರೆಸ್ ಪಕ್ಷವು ಕಾರ್ಯತಂತ್ರದಲ್ಲಿ ಬದಲಾವಣೆ ಮಾಡಿದೆ. ಮಾಜಿ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಹಾಗೂ ಮಾಜಿ ಸಚಿವ ತಾಮ್ರಧ್ವಜ ಸಾಹು ಅವರನ್ನು ಲೋಕಸಭಾ ಚುನಾವಣೆಯ ಅಭ್ಯರ್ಥಿಗಳನ್ನಾಗಿ ಮಾಡಿದೆ. ಇಬ್ಬರು ನಾಯಕರು ತಾವು ಗೆಲ್ಲುವುದರ ಜತೆಗೆ ಅಕ್ಕಪಕ್ಕದ ಕ್ಷೇತ್ರಗಳನ್ನು ಗೆಲ್ಲಿಸಿಕೊಂಡು ಬರಬಲ್ಲರು ಎಂಬುದು ಕಾಂಗ್ರೆಸ್‌ನ ಲೆಕ್ಕಾಚಾರ. ಈ ಸವಾಲನ್ನು ಸಾಯ್ ಹೇಗೆ ಮೆಟ್ಟಿ ನಿಲ್ಲಲಿದ್ದಾರೆ ಎಂಬುದು ಕುತೂಹಲಕಾರಿ.

ವಿಷ್ಣುದೇವ್ ಸಾಯ್

ಲೋಕಸಭಾ ಚುನಾವಣೆ: ಬಲಾಬಲ



ಶರ್ಮಾಗೆ ರಾಜೇ ತಲೆನೋವು

ರಾಜಸ್ಥಾನದ ವಸುಂಧರಾ ರಾಜೇ ಸಿಂಧಿಯಾ ಅವರು ಮೊದಲಿನಿಂದಲೂ ನರೇಂದ್ರ ಮೋದಿ- ಅಮಿತ್ ಶಾ ಗುಂಪಿಗೆ ಸೇರಿದವರಲ್ಲ. ಅವರು ವಾಜಪೇಯಿ-ಅಡ್ವಾಣಿ ಅಪ್ತ ವಲಯದಲ್ಲಿ ಗುರುತಿಸಿಕೊಂಡವರು. ವಿಧಾನಸಭಾ ಚುನಾವಣೆಯ ಪ್ರಚಾರದ ಸಂದರ್ಭದಲ್ಲೂ ಪಕ್ಷದ ವರಿಷ್ಠರ ಜತೆಗೆ ಅಂತರ ಕಾಯ್ದುಕೊಂಡಿದ್ದರು. ಹಿರಿತನದ ಆಧಾರದಲ್ಲಿ ಮುಖ್ಯಮಂತ್ರಿ ಗಾದಿ ಒಲಿಯಲಿದೆ ಎಂದು ಆಸೆ ಇರಿಸಿಕೊಂಡಿದ್ದರು. ಆದರೆ, ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಮೊದಲ ಬಾರಿಯ ಶಾಸಕ ಭಜನ್ ಲಾಲ್ ಶರ್ಮಾ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲಾಗಿತ್ತು. ಈ ನಡೆಯಿಂದ ವಸುಂಧರಾ ಮುನಿಸಿಕೊಂಡಿದ್ದಾರೆ. ಅವರ ಕೆಲವು ಬೆಂಬಲಿಗರು ಕಾಂಗ್ರೆಸ್ ಪಾಳಯಕ್ಕೆ ಜಿಗಿದಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ವಸುಂಧರಾ ಒಳ ಏಟು ನೀಡಬಹುದು ಎಂಬ ಆತಂಕ ಕಮಲ ಪಾಳಯದ ನಾಯಕರಿಗಿದೆ.


ಭಜನ್ ಲಾಲ್ ಶರ್ಮಾ

ಚುನಾವಣಾ ಕಣದಲ್ಲಿ...

ಎಐಎಡಿಎಂಕೆಗೆ ಒವೈಸಿ ಬೆಂಬಲ

ಹೈದರಾಬಾದ್ (ಪಿಟಿಐ): 'ಲೋಕಸಭಾ ಚುನಾವಣೆಯಲ್ಲಿ ತಮಿಳುನಾಡಿನಲ್ಲಿ ಎಐಎಡಿಎಂಕೆಗೆ ಬೆಂಬಲ ನೀಡುತ್ತೇವೆ' ಎಂದು ಎಐಎಂಐಎಂ ಘೋಷಿಸಿದೆ.

'ಈ ಮೈತ್ರಿಯು ವಿಧಾನಸಭಾ ಚುನಾವಣೆಯಲ್ಲೂ ಮುಂದುವರಿಯಲಿದೆ' ಎಂದು ಪಕ್ಷದ ಅಧ್ಯಕ್ಷ ಅಸಾದುದ್ದೀನ್ ಒವೈಸಿ ಅವರು ಶನಿವಾರ 'ಎಕ್ಸ್'ನಲ್ಲಿ ಪ್ರಕಟಿಸಿದರು. 'ಎಐಎಡಿಎಂಕೆಯು ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳಲು ನಿರಾಕರಿಸಿದೆಯಲ್ಲದೆ, ಭವಿಷ್ಯದಲ್ಲಿ ಎಂದಿಗೂ ಆ ಪಕ್ಷದೊಂದಿಗೆ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದಿದೆ. ಸಿಎಎ, ಎನ್‌ಪಿಆರ್ ಮತ್ತು ಎನ್‌ಆರ್‌ಸಿಯನ್ನು ವಿರೋಧಿಸುವುದಾಗಿಯೂ ಅದು ಭರವಸೆ ನೀಡಿದೆ. ಆದ್ದರಿಂದ, ಲೋಕಸಭಾ ಚುನಾವಣೆಯಲ್ಲಿ ಎಐಎಡಿಎಂಕೆಗೆ ಬೆಂಬಲ ನೀಡುತ್ತೇವೆ' ಎಂದು ಹೇಳಿದ್ದಾರೆ.

ಕಾಂಗ್ರೆಸ್ ಜತೆ ಎಐಕೆಎಚ್‌ಎಫ್ ವಿಲೀನ

ಜಮ್ಮು (ಪಿಟಿಐ): ಕಾಶ್ಮೀರಿ ಪಂಡಿತರ ಸಂಘಟನೆಗಳಲ್ಲಿ ಒಂದಾಗಿರುವ ಆಲ್ ಇಂಡಿಯಾ ಕಾಶ್ಮೀರಿ ಹಿಂದೂ ಫೋರಂ (ಎಐಕೆಎಚ್‌ಎಫ್), ಶನಿವಾರ ಕಾಂಗ್ರೆಸ್ ಜತೆ ವಿಲೀನಗೊಂಡಿತು.

ಜಮ್ಮು ಮತ್ತು ಕಾಶ್ಮೀರ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ವಿಕಾರ್ ರಸೂಲ್ ವಾನಿ ಅವರು ಪಕ್ಷದ ಕಚೇರಿಯಲ್ಲಿ ಎಐಕೆಎಚ್‌ಎಫ್ ಮುಖ್ಯಸ್ಥ ರತನ್ ಲಾಲ್ ಭನ್ ಹಾಗೂ ಇತರ ಪದಾಧಿಕಾರಿಗಳನ್ನು ಪಕ್ಷಕ್ಕೆ ಸ್ವಾಗತಿಸಿದರು. 1998 ರಲ್ಲಿ ಸ್ಥಾಪನೆಯಾಗಿರುವ ಎಐಕೆಎಚ್‌ಎಫ್‌ನ ನೂರಾರು ಸದಸ್ಯರು ಕಾಂಗ್ರೆಸ್ ಸೇರಿರುವುದರಿಂದ ಪಕ್ಷದ ಬಲ ವೃದ್ಧಿಸಿದೆ ಎಂದು ವಾನಿ ಹೇಳಿದರು.

ಅಧೀರ್ ಕಾರು ತಡೆದ ಯುವಕರು

ಬಹರಾಂಪುರ, ಪಶ್ಚಿಮ ಬಂಗಾಳ (ಪಿಟಿಐ): ಪಶ್ಚಿಮ ಬಂಗಾಳ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಧೀರ್ ರಂಜನ್ ಚೌಧರಿ ಅವರು ಪ್ರಯಾಣಿಸುತ್ತಿದ್ದ ಕಾರಿಗೆ ಯುವಕರ ಗುಂಪೊಂದು ಶನಿವಾರ ಇಲ್ಲಿ ತಡೆಯೊಡ್ಡಿ, 'ಗೋ ಬ್ಯಾಕ್' ಘೋಷಣೆ ಕೂಗಿದೆ.

ಈ ಕೃತ್ಯಕ್ಕೆ ಆಡಳಿತಾರೂಢ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷವೇ ಹೊಣೆ ಎಂದು ಆರೋಪಿಸಿರುವ ಅಧೀರ್ ಅವರು, ಕಳೆದ ವರ್ಷ ನಡೆದ ಸ್ಥಳೀಯಾಡಳಿತ ಚುನಾವಣೆಯ ಬಳಿಕ ಟಿಎಂಸಿಯು ಇಂತಹ ಅಭ್ಯಾಸವನ್ನು ರೂಢಿಸಿಕೊಂಡಿದೆ ಎಂದು ದೂರಿದರು.

7 ಕ್ಷೇತ್ರಗಳಿಗೆ ಎಸ್‌ಎಡಿ ಅಭ್ಯರ್ಥಿ ಘೋಷಣೆ

ಚಂಡೀಗಢ (ಪಿಟಿಐ): ಶಿರೋಮಣಿ ಅಕಾಲಿ ದಳ (ಎಸ್‌ಎಡಿ) ಪಕ್ಷವು ಪಂಜಾಬ್‌ನ ಏಳು ಲೋಕಸಭಾ ಕ್ಷೇತ್ರಗಳಿಗೆ ಶನಿವಾರ ತನ್ನ ಅಭ್ಯರ್ಥಿಗಳನ್ನು ಘೋಷಿಸಿದೆ. ಹಿರಿಯ ನಾಯಕ ಪ್ರೇಮ್‌ಸಿಂಗ್ ಚಂದುಮಾಜ್ರಾ ಅವರನ್ನು ಆನಂದಪುರ ಸಾಹಿಬ್ ಕ್ಷೇತ್ರದಿಂದ ಹಾಗೂ ದಲ್ಜಿತ್ ಸಿಂಗ್ ಚೀಮಾ ಅವರನ್ನು ಗುರುದಾಸಪುರ ಕ್ಷೇತ್ರದಿಂದಲೂ ಕಣಕ್ಕಿಳಿಸಿದೆ.

ಬಿಜೆಪಿಯಿಂದ ಸಂವಿಧಾನದ ಮೇಲೆ ದಾಳಿ: ರಾಹುಲ್ ಟೀಕೆ

'ಪ್ರಜಾಪ್ರಭುತ್ವದ ಉಳಿವಿಗಾಗಿ ಹೋರಾಟ'

ಬಸ್ತರ್/ ಜಗದಲ್ಪುರ ಛತ್ತೀಸಗಢ (ಪಿಟಿಐ): ಮುಂಬರುವ ಲೋಕಸಭಾ ಚುನಾವಣೆಯು ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸುವ ಹಾಗೂ ಅವುಗಳನ್ನು ನಾಶಮಾಡಲು ಹೊರಟಿರುವ ಸಿದ್ಧಾಂತಗಳ ನಡುವಿನ ಹೋರಾಟವಾಗಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶನಿವಾರ ಹೇಳಿದರು.

ಛತ್ತೀಸಗಢದ ಬಸ್ತರ್ ಮತ್ತು ಜಗದಲ್ಪುರ ದಲ್ಲಿ ಅವರು ಚುನಾವಣಾ ಪ್ರಚಾರ ಸಭೆ ಗಳನ್ನುದ್ದೇಶಿಸಿ ಮಾತನಾಡಿದರು. ಬಸ್ತರ್ ಲೋಕಸಭಾ ಕ್ಷೇತ್ರವು ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿದೆ.

'ಕಾಂಗ್ರೆಸ್ ಮತ್ತು ಇಂಡಿಯಾ ಮೈತ್ರಿಕೂಟವು ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಉಳಿವಿಗಾಗಿ ಹೋರಾಡುತ್ತಿದೆ. ಮತ್ತೊಂದೆಡೆ, ನರೇಂದ್ರ ಮೋದಿ, ಅದಾನಿ ಮತ್ತು ಆರ್‌ಎಸ್‌ಎಸ್‌ನವರು ಪ್ರಜಾಪ್ರಭುತ್ವದ ಮೇಲೆ ದಾಳಿ ನಡೆಸುತ್ತಿದ್ದಾರೆ. ಅವರು ಸಂವಿಧಾನವನ್ನು ನಾಶಪಡಿಸಲು ಪ್ರಯತ್ನಿಸುತ್ತಿದ್ದಾರೆ' ಎಂದು ಆರೋಪಿಸಿದರು.

'ಬಿಜೆಪಿ ಮತ್ತು ಆರ್‌ಎಸ್‌ಎಸ್‌ನವರು ಆದಿವಾಸಿಗಳ ಧರ್ಮ, ಸಿದ್ಧಾಂತ ಮತ್ತು ಇತಿಹಾಸದ ಮೇಲೆ ದಾಳಿ ನಡೆಸುತ್ತಾ ಬಂದಿದ್ದಾರೆ. ಮೋದಿ ಸರ್ಕಾರವು ಆದಿವಾಸಿಗಳ ಜಮೀನನ್ನು ಶ್ರೀಮಂತ ಉದ್ಯಮಿಗಳಿಗೆ ನೀಡುತ್ತಿದೆ' ಎಂದು ದೂರಿದರು.

'ಪ್ರಧಾನಿ ಮಾತಿಗೆ ಮರುಳಾಗಬೇಡಿ' (ಉತ್ತರಾಖಂಡ ವರದಿ): ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣಾ ಪ್ರಚಾರ ಸಭೆಗಳಲ್ಲಿ ಆಡುವ ಬಣ್ಣದ ಮಾತುಗಳಿಗೆ ಮರುಳಾಗಬೇಡಿ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಮತದಾರರಿಗೆ ತಿಳಿಸಿದರು.

ಉತ್ತರಾಖಂಡದ ರಾಮನಗರದಲ್ಲಿ ಶನಿವಾರ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿ, 'ಮೋದಿ ಸರ್ಕಾರದ 10 ವರ್ಷಗಳು ನಿಮ್ಮ ಜೀವನದಲ್ಲಿ ನಿಜವಾಗಿಯೂ ಸಕಾರಾತ್ಮಕ ಬದಲಾವಣೆಯನ್ನು ತಂದಿದೆಯೇ ಎಂಬುದನ್ನು ಮತ ಚಲಾಯಿಸುವ ಮುನ್ನ ನೀವು ನಿಮ್ಮಲ್ಲಿ ಪ್ರಾಮಾಣಿಕವಾಗಿ ಕೇಳಿಕೊಳ್ಳಿ' ಎಂದು ಹೇಳಿದರು.

ರಾಹುಲ್ ಹೇಳಿದ್ದು...

- ಬುಡಕಟ್ಟು ಸಮುದಾಯಕ್ಕೆ ಸೇರಿದವರು ಎಂಬ ಕಾರಣ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ರಾಮಮಂದಿರ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಿಲ್ಲ. ಬಿಜೆಪಿಯ ಮನಃಸ್ಥಿತಿಯನ್ನು ಇದು ತೋರಿಸುತ್ತದೆ.
- ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ದೇಶದಾದ್ಯಂತ ಜಾತಿಗಣತಿ ನಡೆಸಲಾಗುವುದು
- ಪ್ರಧಾನಿ ಮೋದಿ ಅವರ ಅಧಿಕಾರದ ಅವಧಿಯಲ್ಲಿ 22 ಉದ್ಯಮಿಗಳ ಸಂಪತ್ತು ದೇಶದ 70 ಕೋಟಿ ಜನರ ಸಂಪತ್ತಿಗೆ ಸಮನಾಗುವ ರೀತಿಯಲ್ಲಿ ಬೆಳೆದಿದೆ. ಮೋದಿ ಅವರು ಈ ಉದ್ಯಮಿಗಳನ್ನು ದಿನದ 24 ಗಂಟೆಯೂ ಬೆಂಬಲಿಸುತ್ತಾರೆ

ಪ್ರಚಾರ

ತಮಿಳುನಾಡಿನ ತೂತ್ತುಕುಡಿ ಲೋಕಸಭಾ ಕ್ಷೇತ್ರದಲ್ಲಿ ಶನಿವಾರ ಚುನಾವಣಾ ಪ್ರಚಾರದ ವೇಳೆ ಸಚಿವ ಉದಯನಿಧಿ ಸ್ಟಾಲಿನ್ ಮತ್ತು ಅಭ್ಯರ್ಥಿ ಕನಿಮೊಳಿ ಎಳನೀರು ಕುಡಿದರು -ಪಿಟಿಐ ಚಿತ್ರ

ಕಂಗನಾ ವಿರುದ್ಧ ವಿಕ್ರಮಾದಿತ್ಯ ಕಣಕ್ಕೆ

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಗಾಗಿ ಕಾಂಗ್ರೆಸ್ ಶನಿವಾರ 16 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದ್ದು, ಕೇಂದ್ರದ ಮಾಜಿ ಸಚಿವ ಮನೀಷ್ ತಿವಾರಿ ಅವರನ್ನು ಚಂಡೀಗಢ ಕ್ಷೇತ್ರದಿಂದ ಕಣಕ್ಕಿಳಿಸಿದೆ.

ಹಿಮಾಚಲ ಪ್ರದೇಶದ ಮಂಡಿ ಕ್ಷೇತ್ರದ ಟಿಕೆಟ್‌ಅನ್ನು ಹಿಮಾಚಲ ಪ್ರದೇಶದ ಸಚಿವ ವಿಕ್ರಮಾದಿತ್ಯ ಸಿಂಗ್ ಅವರಿಗೆ ನೀಡಿದೆ. ವಿಕ್ರಮಾದಿತ್ಯ ಅವರು ಬಿಜೆಪಿಯ ಕಂಗನಾ ರನೌತ್ ವಿರುದ್ಧ ಪೈಪೋಟಿ ನಡೆಸಲಿದ್ದಾರೆ. ವಿಕ್ರಮಾದಿತ್ಯ ಅವರು ಹಿಮಾಚಲ ಪ್ರದೇಶ ಕಾಂಗ್ರೆಸ್ ಘಟಕದ ಅಧ್ಯಕ್ಷೆ ಪ್ರತಿಭಾ ಸಿಂಗ್ ಅವರ ಪುತ್ರ.

ಕಾಂಗ್ರೆಸ್ ಇದರೊಂದಿಗೆ ಒಟ್ಟು 259 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದಂತಾಗಿದೆ. ಶನಿವಾರ ನಡೆದ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ (ಸಿಇಸಿ) ಹಿಮಾಚಲ ಪ್ರದೇಶ, ಹರಿಯಾಣ, ಪಂಜಾಬ್ ಮತ್ತು ದೆಹಲಿಯ ಕೆಲವು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಯಿತು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕಿ ಸೋನಿಯಾ ಗಾಂಧಿ, ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಸೇರಿದಂತೆ ಪ್ರಮುಖ ನಾಯಕರು ಪಾಲ್ಗೊಂಡರು.

ಆಂಧ್ರದ ಮತದಾರರಲ್ಲಿ ಜೀವನೋಪಾಯದ ಪ್ರಶ್ನೆ

• ಎಸ್.ಎನ್.ವಿ. ಸುಧೀರ್

ವಿಜಯವಾಡ/ಗುಂಟೂರು/ಪ್ರಕಾಶಂ: ಐವತ್ತು ವರ್ಷ ವಯಸ್ಸಿನ ಜಯಮ್ಮ ಅವರು ಈಚಿನ ದಿನಗಳಲ್ಲಿ ತೃಪ್ತಿಯಿಂದ ಇದ್ದಾರೆ. ವಿಜಯವಾಡದ ನಾಲ್ಕು ಮನೆಗ

ಪ್ರಜಾವಾಣಿ

ಭಾನುವಾರದ ಪುರವಣಿ

ಭಾನುವಾರ, 14 ಏಪ್ರಿಲ್ 2024

10

ಎಸ ಬೆಟ್ಟ

ಕೆ.ಪಿ.ಲಕ್ಷ್ಮಣ್
ರಂಗ ನಿರ್ದೇಶಕ

ನನ್ನೊಳಗಿನ ಬಹುರೂಪಿ

ಇದನ್ನು ಬರೆಯುತ್ತಿರುವಾಗ ನಾನು ವಿಮಾನದಲ್ಲಿ ಕುಳಿತಿದ್ದೇನೆ. ಕೆಳಗೆ ಅಗಾಧ ನೀಲಿ ಕಡಲು ಕಾಣುತ್ತಿದೆ. ನಾನು ಬರೆಯುತ್ತಿರುವ ಕಪ್ಪು ಮೊಬೈಲ್ ಸ್ಕ್ರೀನ್‌ನಿಂದ ಬಿಳಿ ಬಣ್ಣದ ಅಕ್ಷರಗಳು ಮೂಡುತ್ತಿವೆ. ಸ್ಲೇಟಿನ ಮೇಲೆ ತಿದ್ದಿದ ಅಕ್ಷರಗಳು ಈಗ ಪರದೆ ಮೇಲೆ ಹೊಳೆಯುತ್ತಿವೆ. ಇಲ್ಲೆಲ್ಲ ನನಗೆ ಬಾಬಾ ಸಾಹೇಬರ ಇರುವಿಕೆ ಕಾಣುತ್ತದೆ. ನಾನು ಪ್ರೈಮರಿ ಶಾಲೆಯಲ್ಲಿ ಓದುತ್ತಿದ್ದೆ. ಆಗ ನಮ್ಮೂರಿನಲ್ಲಿ ಜಾತಿ ದೌರ್ಜನ್ಯವಾಗಿ ಇಡೀ ಕೇರಿ ತಲ್ಲಣಿಸಿ ಹೋಗಿದ್ದಾಗ ಯಾರೋ ಬರೆಸಿ ತಂದ 'ದಸಂಸ'ದ ಬೋರ್ಡನ್ನು ನಾವೇ ಮಕ್ಕಳು ನೀರಿಲ್ಲದ ಹಟ್ಟಿಯ ಪಾಳುಬಾವಿಯ ಮುಂದೆ ಗುಣಿ ತೋಡಿ ಗಿಡದಂತೆ ನೆಟ್ಟೆವು. ಆ ಬೋರ್ಡಿನಲ್ಲಿ ಬಾಬಾ ಸಾಹೇಬರ ಚಿತ್ರವಿತ್ತು. ಆ ಚಿತ್ರ ನಮ್ಮನ್ನೇ ನೋಡಿದಂತೆ ಅನಿಸಿ ನಮಗೆ ಧೈರ್ಯ ಬಂತು. ಆಗಿದ್ದ ಅನ್ಯಾಯದ ವಿರುದ್ಧ ಜೋರಾಗಿ ಘೋಷಣೆಗಳನ್ನು ಕೂಗಿದೆವು. ಇದು ಬಾಬಾ ಸಾಹೇಬರ ಕುರಿತು ನನಗಿರುವ ಮೊದಲ ಬಿಂಬ.

ಇದಾದ ಮೇಲೆ ಅವರು ಕೊಟ್ಟು ಹೋದ ಅಕ್ಷರಗಳಲ್ಲಿ ಅವರನ್ನು ಹುಡುಕಿದಾಗ ಅವರು ನನ್ನದೇ ಜಗತ್ತಿನ ಹಲವು ಪದರುಗಳನ್ನು ತೆರೆದಿಟ್ಟರು. ಲೋಕದಲ್ಲಿ ದುಃಖವಿದೆ ಎಂದು ಬುದ್ಧನೇನೋ ಹೇಳಿಹೋದ. ಅದು ಮುಂದುವರೆದು ನನ್ನಲ್ಲಿ, ನನ್ನ ಜನರಲ್ಲಿ ಯಾಕಿಷ್ಟು ದುಃಖವಿದೆ ಎಂದು ಕಾಣಿಸಿದವರು ಬಾಬಾ ಸಾಹೇಬರು. ನನಗೆ ನನ್ನನ್ನು ಕಾಣಿಸಿದ ಕನ್ನಡಿಯಾದರು.

ನಮ್ಮವ್ವ ಹೇಳುತ್ತಿದ್ದ ಕಥೆಗಳೆಲ್ಲ ಬರಗಾಲ, ಹಸಿವು, ಅನ್ನ, ನೋವು, ಮಳೆ, ಮರ, ಬಸುರಿ, ಬಾಣಂತಿಯರ ಸುತ್ತಲೇ ಇರುತ್ತಿದ್ದವು. ಬಸುರಿ, ಬಾಣಂತಿ, ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುವವನೆ ಒಳ್ಳೆಯ ರಾಜನಾಗಿರುತ್ತಿದ್ದ. ಮೈತ್ರಿಯೇ ಮರೀಚಿಕೆಯಾದ ನೆಲದಲ್ಲಿ ಮನುಷ್ಯರ ಮೂಲಕ ಒಳಿತನ್ನು ಸಾಧ್ಯವಾಗಿಸುವ ಕುರಿತು ಬಾಬಾ ಸಾಹೇಬರು ಜೀವನದುದ್ದಕ್ಕೂ ಕೆಲಸ ಮಾಡಿದ್ದಾರೆ ಮತ್ತು ತೀರಾ ಪ್ರಾಕ್ಟಿಕಲ್ ಆದ ದಾರಿಗಳನ್ನು ತೋರಿಸಿ ಹೋಗಿದ್ದಾರೆ. ಇದು ನನ್ನ ಹಟ್ಟಿಯ ಹೆಣ್ಣುಗಳ ಗುಣ. ಈ ಕಾರಣಕ್ಕೋ ಏನೋ ನನ್ನೊಳಗಿನ ಅಂಬೇಡ್ಕರರು ಹೆಣ್ಣು.

ತನಗೆ ತನ್ನದೇ ನೆಲ, ಹೊಲ ಯಾವುದೂ ಇಲ್ಲದೆ ಇದ್ದಾಗಲೂ ಪ್ರತಿ ಬೇರಿಗೂ ನೀರು ತಲುಪಲೇಬೇಕು ಅನ್ನುವ ನಿಷ್ಠುರ, ನ್ಯಾಯವಂತ ನೀರಗಂಟಿ. ನಾನು ಕಲಾವಿದನಾದ್ದರಿಂದ ಬಾಬಾ ಸಾಹೇಬರ ಬಹಳಷ್ಟು ಕೃತಿಗಳನ್ನು ಸಾಂಸ್ಕೃತಿಕ ಪಠ್ಯಗಳೆಂದೇ ಓದುತ್ತೇನೆ. ಅವರು ನನಗೆ Cultural pedagogy(ಬಹು ಜ್ಞಾನ ಶಿಸ್ತಿನ ಕಲಿಕೆಗಳನ್ನು ವಿನ್ಯಾಸಗೊಳಿಸುವ ಪರಿಣಿತರು ಮತ್ತು ಹಲವು ಜ್ಞಾನಶಿಸ್ತುಗಳ ಅಂತರ್ ಸಂಬಂಧಗಳನ್ನು ಬೆಸೆಯುವವರು). ಅವರನ್ನು ಹೆಚ್ಚು ಹೆಚ್ಚು ಓದಿದಂತೆಲ್ಲ ಇನ್ನು ಹತ್ತು ಹಲವು ಆಯಾಮಗಳಲ್ಲಿ ನನ್ನೊಳಗೆ ಬಾಬಾ ಸಾಹೇಬರು ಬೆಳೆಯುತ್ತಲೇ ಹೋಗುತ್ತಾರೆ. ನನ್ನೊಳಗಿನ ಅಂಬೇಡ್ಕರ್ ಬಹುರೂಪಿ, ಸದಾ ವಿಕಸಿತಗೊಳ್ಳುತ್ತಲೇ ಇರುವ ಪ್ರಜ್ಞೆ ಮತ್ತು ಕರುಣೆಯ ಜೀವಂತ ಪರಂಪರೆ.

ನನಗೆ ಅಂಬೇಡ್ಕರ್ ಒಬ್ಬರೇ ಸಾಕು ಅಂದಾಗಲೆಲ್ಲ ಇದು ಎಲ್ಲರನ್ನು ಒಳಗೊಳ್ಳುವ ನಡೆಯಲ್ಲವೆಂದು ಹಲವರು ದೂರುತ್ತಾರೆ. ಆದರೆ ಇಡಿಯ ಜೀವ ಮಂಡಲವನ್ನೇ ಒಳಗೊಳ್ಳುವ ಚೈತನ್ಯ ನನ್ನೊಳಗಿನ 'ನವಯಾನ ಅಂಬೇಡ್ಕರ್' ಪರಂಪರೆಗೆ ಇರುವಾಗ ನನ್ನ ನಡೆ-ನಿಲುವಿನ ಬಗೆಗೆ ನನಗೆ ಅನುಮಾನ ಮೂಡುವುದಿಲ್ಲ.

ಮೌಲ್ಯ ಸ್ವಾಮಿ
ಕವಯಿತ್ರಿ
ಸಂಶೋಧನಾರ್ಥಿ

ಅನಂತ ಕರುಣೆಯ ಒರತೆ

ಅಂಬೇಡ್ಕರ್ ಅಂದರೆ ಯಾರು ಎಂದು ನನ್ನೊಳಗೆ ನಾನು ಕೇಳಿಕೊಂಡರೆ ಕೇಳಿಸುವ ಉತ್ತರ- ದಿಕ್ಕು ದಿಕ್ಕಿಗೂ ಬೆಂಕಿಯುಂಡೆ ತೂರಿಬರುವ ಕ್ರೌರ್ಯದ ಕಗ್ಗಾಡಿನಲ್ಲಿ ಸದ್ದಿರದೆ ತೆರೆದುಕೊಂಡ ರಕ್ಷೆಯ ಸೂರು. ಆ ಸೂರಿನಡಿಯಲ್ಲಿ ದ್ವೇಷವಿಲ್ಲ, ಅಸೂಯೆ ಇಲ್ಲ, ಪಕ್ಷಪಾತಗಳಿಲ್ಲ. ಅಲ್ಲಿರುವುದು ಕರುಣೆ, ತಿಳಿವು, ಸಂಕಟಗಳ ಆಳದಿಂದ ಎದ್ದ ಜೀವಪರ ಪ್ರಜ್ಞೆ.

ಎಂದೋ, ಎಲ್ಲೋ ಹುಟ್ಟಿ, ಅಕ್ಷರ ಕಲಿತು, ಒಂದು ನೆಲದ ನಾಡಿಮಿಡಿತಕ್ಕೆ ನಾದ ಹೊಸೆದು, ಸುಮ್ಮನೆದ್ದು ಹೋದರೆ ಬಾಬಾ ಸಾಹೇಬರು? ಬಹುಶಃ ಅದು ಅಷ್ಟೇ ಆಗಿದ್ದರೆ ಈ ಚರಿತ್ರೆಯ ಬಣ್ಣ ಬೇರೆ ಆಗಿದ್ದೀತು. ತಾವು ಉಂಡ ಸಂಕಟಗಳ ಹಾದಿಯಲ್ಲಿ ಹೂ ತೋಟ ರೂಪಿಸಲು ನಿದ್ರೆಗೆಟ್ಟ ಜೀವ. ಇವರನ್ನು ಈ ಸಮಾಜ ಒಂದು ನಿರ್ದಿಷ್ಟ ಜಾತಿಯ ಪಾಲಕ ಎಂದು ಕರೆದರೆ? ಸ್ವಾಮಿ ಆ ಕೊಳಚೆಯನ್ನು ತಾನೂ ಮೀರಿ, ತನ್ನಂಥವರನ್ನು, ತನಗಿಂತ ದೀನರನ್ನು ಕರೆದು ಅವರ ಅಂಗೈಗೆ ಹೊಸ ನಾಳೆಗಳ ನಕ್ಷೆ ಬರೆದುಕೊಳ್ಳುವ ಅಕ್ಷರದ ಅಯುಧವನ್ನು ಬಲು ಜತನದಿಂದ ರೂಪಿಸಿ ಕೊಟ್ಟ ಅವರು, ನಮ್ಮ ನಿಮ್ಮಂತೆಯೇ ಒಬ್ಬ ಸಾಮಾನ್ಯ ಮನುಷ್ಯ ಎಂದರೆ ನಂಬಲು ಇನ್ನೂ ಪುರಾವೆಗಳು ಬೇಕೆ?

ಕಾಣದ ದೇವರನ್ನು ನಂಬಿಬಿಡುವ ನಮಗೇಕೆ ಒಂದು ಕರುಣೆಯ ಉದ್ದೇಶ ನಾಟುವುದಿಲ್ಲ? ಒಬ್ಬ ಮನುಷ್ಯಜೀವಿ ಇನ್ನೊಬ್ಬ ಮನುಷ್ಯಜೀವಿಯನ್ನು ಕನಿಷ್ಠಕ್ಕಿಂತಲೂ ಕೀಳಾಗಿ ನಡೆಸಿಕೊಳ್ಳುವ, ದುಡಿಸಿಕೊಳ್ಳುವ, ಸಾವು ಬದುಕುಗಳ ನಡುವಿನ ವ್ಯತ್ಯಾಸಗಳೆಲ್ಲ ಬೆರೆತುಹೋಗುವಂತಹ ಯಾತನೆಗಳನ್ನೇ ಪರಂಪರೆ, ಸಂಸ್ಕೃತಿ, ಇದು ಇರಬೇಕಾದದ್ದೇ ಹೀಗೆ ಎಂದೆಲ್ಲ ಬಿಂಬಿಸಿ ನಂಬಿಸಿ ಒಂದಿಡೀ ಸಮುದಾಯವನ್ನೇ ವಿನಾಕಾರಣ ಇನ್ನಿಲ್ಲದ ಅಂಧಕಾರದಿಂದ ಬಿಡುಗಡೆಯೇ ಇಲ್ಲ ಎಂದು ತಲೆಮಾರುಗಳಿಂದ ತಲೆಮಾರಿಗೆ ಹೇಳಿಕೊಡುತ್ತಲೇ ಬರುವ, ಇರುವ, ಅದನ್ನು ಒಪ್ಪುವಂತೆ ಬಲತ್ಕರಿಸುವ, ಒಪ್ಪದಿದ್ದಾಗ ಕತ್ತಿ, ಕುತಂತ್ರ, ಮೌಢ್ಯದ ಕಡೆಗೆ ದೇವರ ಹೆಸರಿಟ್ಟು ನಂಬಿಸುವ ಅಕ್ಷರವಂತರು, ಅವರೂ ನಮ್ಮದೇ ರಕ್ತ-ಮಾಂಸವನ್ನು ಹೊತ್ತ ಮನುಷ್ಯರು ಎಂದರೆ ನಿಜವೆಂದು ನಂಬುತ್ತಿಲ್ಲವೇ ನಾವು ಕೂಡ? ಆಶ್ಚರ್ಯಪಡದೆ?

ಈ ದೇಶ, ಅದಕೊಂದು ಸಂವಿಧಾನ. ಈ ದೇಶ, ಅದಕೊಂದು ಸಂಸ್ಕೃತಿ. ಈ ಸಂಸ್ಕೃತಿಯೇ ಸಂವಿಧಾನವಾಗಬೇಕೆಂದರೆ ನಮ್ಮ ಆಯ್ಕೆ ಏನಾಗಿರಬೇಕು? ಅದಕ್ಕೆ ಕಾಲ ಕಾಲಕ್ಕೆ ನಮ್ಮ ಚರಿತ್ರೆಯಲ್ಲಿ ಉದಾಹರಣೆಗಳು ಸೃಜಿಸಿವೆ. ಹಾಗಾಗಿ ಇಂದು ನಮ್ಮ ಸಂವಿಧಾನವೇ ಸಂಸ್ಕೃತಿಯಾಗಬೇಕಾದ ತುರ್ತು. ಏಕೆಂದರೆ, ನಿಮ್ಮ ಸಂಸ್ಕೃತಿ ಭೂಮಿ, ದುಡಿಮೆ, ನೀರು, ನೆಲ ಎಲ್ಲವನ್ನು ಕಿತ್ತುಕೊಂಡು ನಮ್ಮನ್ನು ಬೇಡುವ ಬೊಗಸೆಯಾಗಿಯಷ್ಟೇ ಉಳಿಸಲು ಪ್ರೇರೇಪಿಸಿತು. ಇನ್ನೂ ಆ ಯತ್ನಗಳು ನಡೆದೇ ಇವೆ. ನಿಮ್ಮ ಧರ್ಮಗ್ರಂಥವೂ ಅದನ್ನೇ ಪೋಷಿಸಿತು. ನಿಮ್ಮ ಸಂಸ್ಕೃತಿ ಹಸಿದವನಿಗೆ ಪಾಪ-ಪುಣ್ಯದ ಪ್ರವಚನ ಹೇಳಿ, ತಪ್ಪು ಕಾಣಿಕೆಯಾಗಿ ಕಪ್ಪ ಕೇಳಿದರೆ, ನಮ್ಮ ಸಂವಿಧಾನ ಅಕ್ಕಿ ಕದ್ದವನ ಬಡಿಯಲಿಲ್ಲ. ಅವನ ಮನೆಗೆ ಬೊಗಸೆ ಅಕ್ಕಿಗೆ ದಿಕ್ಕು ಬರೆಯಿತು. ನಮ್ಮ ಸಂವಿಧಾನ ಯಾರನ್ನು ಸುಡಲಿಲ್ಲ, ನೀರು, ನೆಲಕ್ಕೆ ಗಡಿ-ಮಡಿಗಳ ಇಕ್ಕಟ್ಟುಗಳ ಪೋಷಿಸಲಿಲ್ಲ. ಅದು ತಾನೇ ಸರ್ವಕಾಲಕೂ ಅಂತಿಮ ಅಂತಲೂ ಎಲ್ಲೂ ಸಾರಿಲ್ಲ. ಹಾಗಾಗಿಯೇ ನಾವಿನ್ನು ಕೃತಜ್ಞರಾಗಿರದಿದ್ದರೂ ಅಲ್ಲಿ ಕ್ಷಮೆ ಉಂಟು. ಕಡು ಕ್ರೂರಿಗೂ ದಯಾಮಯ ತೀರ್ಪುಂಟು. ಅಲ್ಲಿ ಹೊಸ ನೋವಿಗೆ ಮುಲಾಮುಂಟು. ಹಳೆ ವ್ಯಾಧಿಗೆ ಸೌಮ್ಯದ ತಿಳಿವುಗಳುಂಟು. ನನ್ನೊಳಗೆ ಬಾಬಾ ಸಾಹೇಬ್ ಅಂಬೇಡ್ಕರ್ ಯಾರು ಎಂದರೆ, ಅವರಿಗಿರುವ ಇಲ್ಲಿವರಿಗಿನ ಎಲ್ಲಾ ವಿದ್ವತ್ತು, ಅವರ ನೌಕರಿ, ಇತ್ಯಾದಿ ಇತ್ಯಾದಿ ಮಾಹಿತಿಗಳಿಗಿಂತ ಅದೊಂದು ಮನುಷ್ಯತ್ವದ ಪರಾಕಾಷ್ಠೆಯ ಮೂರ್ತರೂಪ, ಅದೊಂದು ಅನಂತ ಕರುಣೆಯ ಒರತೆ ಎಂಬುದೇ ಮತ್ತೆ ಮತ್ತೆ ನನ್ನ ಉತ್ತರವಾಗಿರುತ್ತದೆ.

> ಬಾಬಾ ಸಾಹೇಬ್ ಅಂಬೇಡ್ಕರ್ ಕೋಟ್ಯಂತರ ಯುವ ಮನಸ್ಸುಗಳ ಒಳಗೆ ಇಳಿದು ಬೆಳೆಯುತ್ತಲೇ ಇರುವ ಪರಿ ನಿಜಕ್ಕೂ ಅಚ್ಚರಿ ಅನಿಸುತ್ತದೆ. ಅಂಬೇಡ್ಕರ್ ಅವರೊಳಗಿನ ಅನಂತ ಕರುಣೆಯ ಒರತೆ, ಮಾನವ ಹಕ್ಕುಗಳ ಪಾಠ ಹೇಳುವ ಮಹೋಪಾಧ್ಯಾಯ, ಪ್ರತೀ ಕ್ಷಣವೂ ಎಚ್ಚರಿಸುವ ಪ್ರಖರ ಆತ್ಮಸಾಕ್ಷಿ, ಪ್ರಜ್ಞೆ ಮತ್ತು ಕರುಣೆಯ ಜೀವಂತ ಪರಂಪರೆ. ಎಂಥ ಗ್ರಹಿಕೆ! ಹೊಸನುಡಿಗಟ್ಟು, ಹೊಸ ಆಲೋಚನೆ, ನೋಡುವ ಕ್ರಮವೂ ಹೊಸದೇ. ಆರಾಧನೆಗಿಂತ ಅರಿವಿಗೆ ಆದ್ಯತೆ. ಆಕ್ರೋಶಕ್ಕಿಂತ ವಿವೇಕದ ಮಾತು. ಪ್ರತಿಕಾರಕ್ಕಿಂತ ಮಾನವೀಯತೆಯೇ ಮೇಲು ಎನ್ನುವ ಪ್ರಬುದ್ಧತೆ. ಹಳೆಯ ಗಾಯವನ್ನು ನೆನಪಿಸಿಕೊಳ್ಳುತ್ತಲೇ ಅದಕ್ಕೆ ಮದ್ದು ಅರೆಯುವ ಕನಸು. ಹೊಸ ಬಗೆಯ ದೃಷ್ಟಿಕೋನ. ಇಂತಹ ಯುವ ಮನಸ್ಸುಗಳನ್ನು ಅರಿತಾಗ ನಾಳಿನ ಭಾರತದ ಬಗೆಗೆ ಭರವಸೆ ಮೂಡುತ್ತದೆ.

ಅನುಗಾಲಕೂ ಅಂಬೇಡ್ಕರ್ ಬೆಳಕು

ಶ್ರೀನಿವಾಸ ಶೆಟ್ಟಿ
ಪೊಲೀಸ್ ಶ್ವಸ್ತ ಪಡೆ

ಸ್ವಾಭಿಮಾನ ಕಲಿಸಿದ ಸಾಹೇಬ್

ನನ್ನೊಳಗಿನ ಅಂಬೇಡ್ಕರ್ ಅಂದ್ರೆ ತುಂಬು ಸ್ವಾಭಿಮಾನಿ. ಪ್ರತಿಕ್ಷಣಕ್ಕೂ ಘನತೆಯಿಂದ ಬದುಕಬಲ್ಲ ಚೇತನ. ಅರಿಕ್ಷಣ ನನ್ನ ವ್ಯಕ್ತಿತ್ವ ಮುಕ್ಕಾಗುವ ಕಡೆ ಅಲ್ಲಿ ನನ್ನ ಚಪ್ಪಲಿಯನ್ನು ಬಿಡಬೇಡ ಎಂದು ಕೂಗುವ ತೇಜಸ್ಸು, ಹ್ಞಾಂ, ಭೀಮ ಸಾಹೇಬ್ ನನ್ನೊಳಗೆ ಇರುವುದು ಹೀಗೆ.

ಪ್ರಬುದ್ಧ ಬದುಕಿಗಾಗಿ ಕಷ್ಟಪಡುವ, ಸತ್ಯವನ್ನೇ ನಡೆವ ಹಾದಿಯುದ್ದಕ್ಕೂ ಚೆಲ್ಲುವ, ತುಳಿವವರ ಕಂಡು ಧೂಮಕೇತುವಂತೆ ಅಪ್ಪಳಿಸುವ, ತುಳಿತಕ್ಕೊಳಗಾದವರ ಬದುಕಿಗೆ ಬದುವಾಗಿ ನಿಲ್ಲುವ ಮಾರ್ಗಕ್ಕಿರುವ ಬೆಳಕು ನನ್ನ ಭೀಮ ಸಾಹೇಬ್.

ಸಾಂತ್ವನ-ಕಾರುಣ್ಯ-ಕನಸುಗಳ ಗೂಡು ಕಟ್ಟಿದವರು. ನಾವು ಮೊದಲು ಭಾರತೀಯರು, ಅಂತಿಮವಾಗಿಯೂ ಎಂದು ದೇಶಭಕ್ತಿಯ ಬೀಜಬಿತ್ತಿದವರು. ಅಸ್ಪೃಶ್ಯತೆಗೆ ಸ್ವತಃ ನಲುಗಿ ಸಮತ್ವದ ಹಾದಿ ಕೊಟ್ಟವರು. ಸ್ತ್ರೀ ಸಮಾನತೆಗಾಗಿ ನಿಂತವರು. ದೇಶಕ್ಕಾಗಿ ಆರ್ಥಿಕ ನೀತಿ ರೂಪುರೇಷೆ ಕೊಟ್ಟವರು. ಪ್ರಕೃತಿಯ ಒಡಲ ಕಾಯಲು ನಿಂತವರು-ಹೀಗೆ ಹೇಳುತ್ತಾ ಹೋದರೆ ನನ್ನೊಳಗಿನ ಅಂಬೇಡ್ಕರ್ ನಾವೇ ಆಗಲು ಎಷ್ಟೊಂದು ಮಾರ್ಗಗಳನ್ನು ರೂಪಿಸಿಕೊಟ್ಟಿದ್ದಾರೆ; ಸಂವಿಧಾನದ ಪ್ರತಿ ಪದಕ್ಕೂ ಇಡೀ ಜೀವನವನ್ನೇ ಮೀಸಲಿಟ್ಟ.

ನನ್ನೊಳಗಿನ ಅಂಬೇಡ್ಕರ್ ಪ್ರತಿಕ್ಷಣಕ್ಕೂ ಎಚ್ಚರಿಕೆಯಲ್ಲಿರುವ ಆತ್ಮಸಾಕ್ಷಿ. ಹಸಿದವರಿಗೆ ಅಷ್ಟಿಷ್ಟು ಅನ್ನ ಕೊಡುವಂತೆ ಓದಲು ಪ್ರೇರೇಪಿಸಿದವ, ಬೌದ್ಧಿಕ ಗುಲಾಮಗಿರಿಯನ್ನು ತೊರೆಯಲು ತಾನೇ ಜ್ಞಾನದ ಜ್ಯೋತಿಯಾಗಿ ನಿಂತು ತುಚ್ಛವಾಗಿ ಕಾಣುವ ಜಾತಿಯಲ್ಲಿ ಉಚ್ಚ ಸ್ಥಾನಕ್ಕೆ ಕರೆದು ಕೂರಿಸುವವ, ಘನತೆಯ ಬದುಕಿಗೆ ಇಷ್ಟಲ್ಲದೇ ನನ್ನ ಪರಿವಾರಕ್ಕೂ ಶಿಕ್ಷಣ, ಹೋರಾಟ, ಸಂಘಟನೆಯ ಶಕ್ತಿ ಕೊಟ್ಟವರು.

ಜನ್ಮಿಸಿದಿಂದ ಇಲ್ಲಿವರೆಗೂ ಮನೆಯಿಂದ ಮಂದಿರದವರೆಗೂ, ಉಳುವ ನೆಲದಿಂದ ಕಾಯ್ದು ಗಡಿವರೆಗೂ, ಶಾಲೆಯಿಂದ ಸರ್ಕಾರದವರೆಗೂ, ಸಂಸ್ಕೃತಿಯಿಂದ ಹಸನಾದ ಬದುಕಿನವರೆಗೂ ಇರುವರು. ಧೈರ್ಯವಾಗಿ ಬದುಕಾಗಿ ಬೆಳಕಾಗಿ ಬೆಂಗಾವಲಾಗಿ ಆತ್ಮಸ್ಥೈರ್ಯವಾಗಿ ನಿಲ್ಲುವ ಅಂಬೇಡ್ಕರ್ ಎಲ್ಲರೊಳಗಿನ ಅರಿವಿನ ಬೆಳಕು.

ಪದ್ಮಶ್ರೀ ಟಿ
ಉಪನ್ಯಾಸಕಿ

ನನ್ನರಿವಿನ ಆರದ ಹಣತೆ

'ಬಾಬಾ ಸಾಹೇಬ್' ಎಂಬುದಾಗಿ ಕೋಟ್ಯಂತರ ಹೃದಯಗಳ ಭಾವಾಂತರಾಳದಲ್ಲಿ ನೆಲೆ ನಿಂತಿರುವ ಅಂಬೇಡ್ಕರ್; ಇಂದು ನನ್ನ ಅರಿವಿನ ಆರದ ಹಣತೆಯಾಗಿಯೂ ಬೆಳಗುತ್ತಿದ್ದಾರೆ. ಸಾಮಾನ್ಯವಾಗಿ, ಶೂದ್ರವರ್ಗದಲ್ಲಿ ಅಂಬೇಡ್ಕರ್ ಅವರ ಬಗ್ಗೆ ಅಜ್ಞಾನವನ್ನು ವ್ಯವಸ್ಥಿತವಾಗಿ ಬೆಳೆಸಲಾಗಿದೆ. ಅದಕ್ಕೊಂದು ನೆಪವೆಂಬಂತೆ ಮೀಸಲಾತಿಯ ವ್ಯವಸ್ಥೆಯನ್ನು ಬಳಸಿಕೊಳ್ಳಲಾಗಿದೆ. ಎಕ್ವಿಟಿ (ನ್ಯಾಯ)ಗೂ ಇಕ್ವಾಲಿಟಿ (ಸಮಾನತೆ)ಗೂ ಇರುವ ಸರಳ ವ್ಯತ್ಯಾಸವನ್ನು ಅರಿಯದೆ ಇರುವುದೇ ಇದಕ್ಕೆ ಕಾರಣ. ಸಾಮಾಜಿಕ ನ್ಯಾಯವೆಂಬುದು ಈ ದೇಶದ ಶೋಷಣೆಯನ್ನು ಅಂತ್ಯಗೊಳಿಸುವ ಸೂಕ್ತ ಸಾಧನ ಎನ್ನಬಹುದು. ಬಹುಜನ ಹಿತವೆಂಬ ನವಜಾತ ಶಿಶುವಿನ ಜನನ ಸಿರಿಗೆ ಭೀಮರಾಯರ ವಿಚಾರ ಬಲವೇ ಆಧಾರ. ಒಂದೂವರೆ ದಶಕಗಳ ಕೆಳಗೆ ಬಾಳ ಜೊತೆಗಾರ ಹಚ್ಚಿದ ಅಂಬೇಡ್ಕರ್ ಹಣತೆಯು; ನನ್ನರಿವಿನಾಳದಲ್ಲಿ ಹುದುಗಿದ್ದ ಬಹುಬಗೆಯ ಬಾಲಿಶತನವನ್ನು ಬಯಲಿಗೆಳೆಯಿತೆಂದು ವಿನಯದಿಂದ ಹೇಳಲು ಬಯಸುತ್ತೇನೆ. ಅಂಬೇಡ್ಕರ್ ಎಂದರೆ ಜಾತಿಯ ಭೀತಿಯಲ್ಲ, ಅದೊಂದು ಮಾನವ ಪ್ರೀತಿ.

'ಕೊನೆ ಮೊದಲಲ್ಲಿಯೂ ನಾನೊಬ್ಬ ಭಾರತೀಯ'ನೆಂಬ ಭಾವೈಕ್ಯತೆಯ ಬಂಧುತ್ವದ ಬೆಳೆ ತೆಗೆಯಲು ದುಡಿದು ಮಡಿದ ಮಹಾ ಮಾನವನ ಭೀಮಯಾನವನ್ನು ಭಾರತೀಯರಾದ ನಾವು ಅರಿಯುವುದು ಅನಿವಾರ್ಯ. ಏಕೆಂದರೆ ಪ್ರಜಾಪ್ರಭುತ್ವವನ್ನು ಅಣಕಿಸುವ ಕಣ್ಣುಗಳಲ್ಲೀಗ ಕಾಂತಿ ಹೆಚ್ಚುತ್ತಿದೆ, ಸರ್ವಾಧಿಕಾರದ ಸರಸ-ಸಲ್ಲಾಪಗಳು ಸರ್ಪಗಳಾಗಿ ಸಿಡಿಯುತ್ತಿವೆ. ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರ ಭಾವನೆಗಳ ಸಾಗರದಲ್ಲೀಗ ಕೋಮುವಾದದ ಉಲ್ಕೆಗಳು ಅಪ್ಪಳಿಸತೊಡಗಿವೆ. ಸಮತೆ-ಮಮತೆಗಳ ಸಮನ್ವಯ ಸಾಧನವಾದ ಸಂವಿಧಾನವೆಂಬ ತೇರಿನ ಗಾಲಿಗಳನ್ನು ಗೇಲಿಗಳ ಮೂಲಕ ಮುರಿಯುವ ಕುಬುದ್ಧಿವಂತರ ಕಾಲವಿದು. 'ಸರ್ವಜನಾಂಗದ ಶಾಂತಿಯ ತೋಟ'ದಲ್ಲೀಗ ಅಸಹಿಷ್ಣುತೆಯದೇ ರಾಜ್ಯಭಾರ. ಇದೆಲ್ಲದರ ನಿವಾರಣೆಗೆ ಅಂಬೇಡ್ಕರ್ ವಿಚಾರಧಾರೆಯಲ್ಲಿನ ಚಿಕಿತ್ಸಕ (Therapeutic) ಅಂಶಗಳು ಅತ್ಯಂತ ಪ್ರಾಮುಖ್ಯತೆ ಪಡೆಯುವ ತುರ್ತು ಇಂದು ಮುಖ್ಯ.

ಅಂಬೇಡ್ಕರ್ ಆರಾಧನೆಯ ಆಳದಲ್ಲಿನ ಅನ್ಯಾಯದ ಅಲೆಗಳನ್ನು ಅರಿತಿದ್ದರು. ಆದರೆ ಅದರ ಸೆಳೆತಗಳಿಗೆ ಅವರ ಹೆಸರು ದುರ್ಬಳಕೆಯಾಗದಂತೆ ರಕ್ಷಿಸಿಕೊಳ್ಳಬೇಕಾದ ಜವಾಬ್ದಾರಿ ನಮ್ಮ ಮೇಲಿದೆ. ನಾ ಕಂಡ ಅಂಬೇಡ್ಕರ್ ಅನ್ಯಾಯಕ್ಕೆದುರು ಪ್ರಜ್ವಲಿಸುವ ವಿಚಾರ ಜ್ವಾಲೆ, ಬಡವರ ಗುಡಿಸಲಿನಲ್ಲಿ ಮಗನ ಓದಿಗೆ ಜೊತೆಯಾಗುವ ಬುದ್ಧಿದೀಪ. ಸಂಕುಚಿತ ಸ್ವಾರ್ಥಗಳಿಂದ ಕೊಳೆಯುತ್ತಿದ್ದ ಜಾತಿವಾದಿ ಮಿದುಳು ಮತ್ತು ಮನಸ್ಸುಗಳಿಗೆ ಮಾನವ ಹಕ್ಕುಗಳ ಪಾಠ ಹೇಳಿದ ಮಹೋಪಾಧ್ಯಾಯ. ಭಾರತದ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಭವಿಷ್ಯಕ್ಕೊಂದು ಭಾಷ್ಯ ಬರೆದವರು ನನ್ನೊಳಗಿನ ಅಂಬೇಡ್ಕರ್.

ಕಾಲದ ಜೊತೆಗಿನ ಅದ್ಭುತ ಪಯಣ

ಚಲನಶೀಲತೆಯ ಪ್ರತೀಕವಾಗಿ ವಸ್ತುಸಂಗ್ರಹಾಲಯಕ್ಕೆ 'ಪಯಣ' ಎಂಬ ಹೆಸರಿಡಲಾಗಿದೆ. ಕಾರನ್ನು ಎತ್ತುಗಳು ಎಳೆಯುತ್ತಿರುವ ಪಯಣದ ಫಲಕ ಕೂಡ ಬದಲಾವಣೆ ಜಗದ ನಿಯಮ ಎಂಬ ಮಾತನ್ನು ಸಾರುವಂತಿದೆ.

ಗಣಂಗೂರು ನಂಜೇಗೌಡ

ಶ್ರೀರಂಗಪಟ್ಟಣದಿಂದ ಮೈಸೂರಿಗೆ ತೆರಳುವ ಮಾರ್ಗದಲ್ಲಿ ಬೆಂಗಳೂರು-ಮೈಸೂರು ಹೆದ್ದಾರಿ ಬದಿಯಲ್ಲಿ ಬೃಹತ್ ಚಕ್ರ ವಿನ್ಯಾಸದ ವಿಭಿನ್ನವಾದ ಕಟ್ಟಡ ನಮ್ಮನ್ನು ಸೆಳೆಯುತ್ತದೆ. ಅದು ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ ಅವರ ಆಸಕ್ತಿಯ ಫಲವಾಗಿ ಸುಮಾರು ಹತ್ತು ಎಕರೆ ವಿಸ್ತೀರ್ಣದಲ್ಲಿ ಸ್ಥಾಪಿಸಿರುವ ಅಪರೂಪದ ಮ್ಯೂಸಿಯಂ. ಅಲ್ಲಿ ಎತ್ತುಗಳು ಕಾರನ್ನು ಎಳೆಯುತ್ತಿರುವ ಚಿತ್ರದೊಂದಿಗೆ

ಕರ್ಮಯೋಗಿ ಶಾರದಾಪ್ರಸಾದ್

ಶಾರದಾಪ್ರಸಾದ್

ಮೂರು ಪ್ರಧಾನ ಮಂತ್ರಿಗಳಿಗೆ ವಾರ್ತಾ ಸಲಹೆಗಾರರಾಗಿದ್ದ ಎಚ್. ವೈ.ಶಾರದಾ ಪ್ರಸಾದ್ ಜನ್ಮಶತಮಾನೋತ್ಸವ ವರ್ಷವಿದು. ತಮ್ಮ ನಿಸ್ಪೃಹತೆ, ಬದ್ಧತೆ, ವೃತ್ತಿಪರತೆ, ವೈಯಕ್ತಿಕ ನಿಷ್ಠೆಯಿಂದ ಪ್ರಧಾನಿ ಹುದ್ದೆಯಲ್ಲಿದ್ದವರಿಗೆ ಅವರು ಆಪ್ತವಾಗಿದ್ದರು. ನಿವೃತ್ತಿಯ ವಯಸ್ಸನ್ನು ದಾಟಿದ ನಂತರವೂ ಆರು ಸಲ ಸೇವಾವಧಿಯ ವಿಸ್ತರಣೆ ಪಡೆದಿದ್ದರು

ಕೆ. ಸತ್ಯನಾರಾಯಣ

ಎಚ್. ವೈ. ಶಾರದಾ ಪ್ರಸಾದ್ (15.4.1924–2.9.2008) ಎಂದಕೂಡಲೇ ಎಲ್ಲರಿಗೂ ನೆನಪಾಗುವುದು ಅವರು ಮೂರು ಪ್ರಧಾನ ಮಂತ್ರಿಗಳಿಗೆ ವಾರ್ತಾ ಸಲಹೆಗಾರರಾಗಿದ್ದದ್ದು; ಇಂದಿರಾಗಾಂಧಿಯವರ ಆಪ್ತವಲಯದಲ್ಲಿದ್ದದ್ದು ಎಂಬುದು. ನಿಜ, ಇದು ಅವರ ವ್ಯಕ್ತಿತ್ವದ, ಬದುಕಿನ ಮುಖ್ಯ ಭಾಗ. ಅದರೆ ಪ್ರಸಾದರ ವ್ಯಕ್ತಿತ್ವದ ಆಸಕ್ತಿ ಸಾಧನೆಗಳ ಹರವು ಇನ್ನೂ ವಿಶಾಲವಾದದ್ದು, ವೈವಿಧ್ಯವಾದದ್ದು.

ಹೊಳೆನರಸೀಪುರ ಯೋಗಾನರಸಿಂಹಂ ಶಾರದಾಪ್ರಸಾದರು ಸಾಹಿತ್ಯದ ಆನರ್ಸ್ ಡಿಗ್ರಿ ಪಡೆದದ್ದು ಮೈಸೂರು ಮಹಾರಾಜ ಕಾಲೇಜಿನಲ್ಲಿ. ಕ್ವಿಟ್ ಇಂಡಿಯಾ ಚಳವಳಿ ಸಂದರ್ಭದಲ್ಲಿ ಎರಡು ಸಲ ಸೆರೆಮನೆಯ ವಾಸ, ಚಳವಳಿಯ ಸಕ್ರಿಯ ನಾಯಕತ್ವ. ಆದರೆ ಮುಂದೆಂದೂ ತಾನು ಸ್ವಾತಂತ್ರ್ಯ ಹೋರಾಟಗಾರ ಎಂಬ ಹೆಗ್ಗಳಿಕೆಯನ್ನು ಮುಂದೆ ಮಾಡಲಿಲ್ಲ. ಸೆರೆಮನೆಯ ದಿನಚರಿ 'A Window On The Wall' ('ಅರಿವಿನ ಆಡುಂಬೋಲ') ಪ್ರಕಟವಾದದ್ದು ಕೂಡ ಅವರು ತೀರಿಕೊಂಡ ಬಳಿಕವೇ. ಅವರ ಸ್ವಾತಂತ್ರ್ಯ ಚಳವಳಿಯ ದೇಶಪ್ರೇಮ, ಆದರ್ಶಪ್ರಿಯತೆ, ಕನಸುಗಾರಿಕೆ, ದೇಶವನ್ನು ಕಟ್ಟುವ ಸಾರ್ವಜನಿಕ ಜವಾಬ್ದಾರಿಯ ನಿರ್ವಹಣೆ ಇವುಗಳಿಂದ ಪ್ರಸಾದರು ಎಂದೂ ವಿಮುಖರಾಗಲಿಲ್ಲ. ಕರ್ನಾಟಕದ ಅವರ ಬಹುತೇಕ ಸಾಂಸ್ಕೃತಿಕ ಒಡನಾಡಿಗಳು ಕಾಂಗ್ರೆಸ್ ಮತ್ತು ನೆಹರೂರವರ ಕಡುವಿರೋಧಿಗಳಾಗಿದ್ದರು. ಅಂಥ ದಿನಗಳಲ್ಲೂ ಶಾರದಾಪ್ರಸಾದರು ಮಾತ್ರ, ತನ್ನ ತಲೆಮಾರಿನ ದೃಷ್ಟಿಕೋನವನ್ನೂ ಕನಸುಗಾರಿಕೆಯನ್ನೂ ಪ್ರಭಾವಿಸಿದ್ದು ನೆಹರೂ ಅವರ ಕೃತಿಗಳು, ಅವರ ವೈಜ್ಞಾನಿಕ ಮನೋಧರ್ಮ ಎಂಬುದನ್ನು ಪ್ರಸ್ತಾಪಿಸುತ್ತಲೇ ಇದ್ದರು. ಸಾರ್ವಜನಿಕ ಅಡಳಿತದ ಜವಾಬ್ದಾರಿಯಿತ ನಿರ್ವಹಣೆಯಿಂದಲೂ ದೇಶ ಕಟ್ಟುವ ಕಡೆಗೆ ಗಮನ ಕೊಡುವುದು ಮುಖ್ಯ ಎನ್ನುವುದು ಅವರೇ ಕಾರಣವಾಗಿ ಸ್ಥಾಪಿತವಾದ 'Indian Institute of Mass Communications', 'National Institute of Design'ನಂತಹ ಸಂಸ್ಥೆಗಳ ಮಹತ್ವದಿಂದಲೂ ತಿಳಿಯುತ್ತದೆ. ಪಂಚವಾರ್ಷಿಕ ಯೋಜನೆಗಳ ಯುಗ ಪ್ರಾರಂಭವಾದಾಗ ಹೊರಬಂದ 'ಯೋಜನಾ' ಪತ್ರಿಕೆಯ ದೀರ್ಘಕಾಲದ ಸಂಪಾದಕರು ಕೂಡ ಆಗಿದ್ದರು.

ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಬಹುಬೇಗ ಸಹಾಯಕ ಸಂಪಾದಕರಾದರೂ ಪ್ರಧಾನ ಮಂತ್ರಿಗಳ ವಾರ್ತಾ ಸಲಹೆಗಾರರಾಗಿಯೇ ವೃತ್ತಿಜೀವನದ ಬಹುಭಾಗವನ್ನು ಕಳೆದರು. ಇದು ಕೇಂದ್ರ ಸರ್ಕಾರದ ಕಾರ್ಯದರ್ಶಿಯ ಸ್ತರದ ಹುದ್ದೆ. ಅವರು ನಿವೃತ್ತಿಯ ವಯಸ್ಸನ್ನು ದಾಟಿದ ನಂತರವೂ ಆರು ಸಲ ಸೇವಾವಧಿಯ ವಿಸ್ತರಣೆ ಪಡೆದಿದ್ದರು. ತಮ್ಮ ನಿಸ್ಪೃಹತೆ, ಬದ್ಧತೆ, ವೃತ್ತಿಪರತೆ, ವೈಯಕ್ತಿಕ ನಿಷ್ಠೆಯಿಂದ ಪ್ರಧಾನಿಗೆ ಆಪ್ತವಾಗಿದ್ದರು. ಪ್ರಧಾನಿಗೆ ತಾನು ಕೇವಲ ವಾರ್ತಾ ಸಲಹೆಗಾರನೇ ಹೊರತು ರಾಜಕೀಯ, ಅರ್ಥಿಕ, ಕಾನೂನು ಸಲಹೆಗಾರನಲ್ಲ ಎಂದೇ ಅವರೇ ಬರೆದುಕೊಂಡಿದ್ದಾರೆ. 'ಪ್ರಧಾನ ಮಂತ್ರಿಗೆ ಅತ್ಯುತ್ತಮ ಸಲಹೆಗಾರನೆಂದರೆ ಪ್ರಧಾನ ಮಂತ್ರಿಯೇ ಆಗಿರುತ್ತಾನೆ. ಆದರೆ ಅನೇಕ ಸಲಹೆಗಾರರ ಮೂಲಕ ತನಗೆ ತಾನೇ ಸಲಹೆ ಕೊಟ್ಟುಕೊಳ್ಳುತ್ತಿರುತ್ತಾನೆ. (Prime Minister advises himself through others). ಅಲ್ಲದೆ, ಪ್ರಧಾನ ಮಂತ್ರಿಗೆ ಸಲಹೆಗಾರರಿಗಿಲ್ಲದ ಜನಸಂಪರ್ಕದ ಮೂಲಗಳಿಂದ ಕೂಡ ಮಾಹಿತಿ-ಒಳನೋಟಗಳು ದಕ್ಕುತ್ತಿರುತ್ತವೆ. ಈ ಅರಿವಿನ ಜೊತೆಗೆ ಪ್ರಧಾನ ಮಂತ್ರಿಗೆ ಚಾರಿತ್ರಿಕ ವ್ಯಕ್ತಿತ್ವ-ಪಾತ್ರವಿರುತ್ತದೆ; ಆದರೆ ಅವರ ಹತ್ತಿರವಿರುವ ಸಲಹೆಗಾರನಿಗೆ ಆ ರೀತಿಯ ಪಾತ್ರವಿರುವುದಿಲ್ಲ. ಇದನ್ನು ಮರೆತರೆ, ಸ್ವಪ್ರಾಮುಖ್ಯದ ಗೀಳು ಪ್ರಾರಂಭವಾಗುತ್ತದೆ. ನಾನು ಸಮಕಾಲೀನ ಚರಿತ್ರೆಗೆ ಹತ್ತಿರವಿರಬಹುದು: ಆದರೆ ಶಾಲಾ ಬಾಲಕನಂತೆ ಮರದ ಮೇಲೆ ತನ್ನ ಹೆಸರನ್ನು ಕೆತ್ತಿ, ಇತಿಹಾಸದಲ್ಲಿ ಉಳಿಯುವ ಬಾಲಿಶ ಹಂಬಲ ತನಗಿರಲಿಲ್ಲ' ಎಂದು ತಮಾಷೆ ಮಾಡಿಕೊಂಡಿದ್ದಾರೆ. ಇಂದಿರಾಗಾಂಧಿ ಒಮ್ಮೆ ಅವರನ್ನು ಆನಂದ ಭವನಕ್ಕೆ ಕಳುಹಿಸಿ ಬಹುಕಾಲದಿಂದ ಬೀಗ ಹಾಕಿರುವ ಹಳೆಯ ಬೀರುವಿನಿಂದ ಕೌಟುಂಬಿಕ-ರಾಜಕೀಯ ದಾಖಲೆಗಳನ್ನು ತರಲು ಸೂಚಿಸುತ್ತಾರೆ. ಹಾಗೆ ಹೋದಾಗ, ಆ ದಾಖಲೆಗಳನ್ನು ಕಂಡಾಗ ತನ್ನ ಮನಸ್ಸಿನಲ್ಲಿ ಹಾದುಹೋದ ಭಾವನೆಗಳ ಬಗ್ಗೆ ಬರೆದಿರುವ ಲೇಖನವು ಶಾರದಾಪ್ರಸಾದರ ಅತ್ಯುತ್ತಮ ಬರಹಗಳಲ್ಲೊಂದು. ಸೂಕ್ಷ್ಮತೆ, ಚಾರಿತ್ರಿಕ ಪ್ರಜ್ಞೆ, ವಸ್ತುನಿಷ್ಠತೆ ಎಲ್ಲವೂ ಬೆರೆತ ಲೇಖನವದು.

'ನಾನು ಬರೆಯದೆ ಹೋಗುವ ಪುಸ್ತಕ' ('The Book I Won't be Writing') ಎಂಬುದು ಅವರ ಪುಸ್ತಕವೊಂದರ ಶೀರ್ಷಿಕೆ. ನಿವೃತ್ತಿಯ ನಂತರ ಬರೆದ ವ್ಯಾಪಕ ಅಂಕಣ ಬರಹಗಳು ಅವರ ವೈವಿಧ್ಯಮಯ ಆಸಕ್ತಿ, ವಿಶಾಲವಾದ ಓದು ಮತ್ತು ಸಾಹಿತ್ಯಿಕ ಸೂಕ್ಷ್ಮಸಂವೇದನೆಗೆ ದಾಖಲೆಯಾಗಿವೆ. ಕರ್ನಾಟಕ, ಕನ್ನಡ ಸಾಂಸ್ಕೃತಿಕ ಲೋಕದೊಡನೆ ನಿರಂತರ ಕ್ರಿಯಾಶೀಲ ಒಡನಾಟದಿಂದಾಗಿ ಮೂಡಿದ ಪುಸ್ತಕ 'Exploring Karnataka' (ಟಿ. ಎಸ್. ಸತ್ಯನ್ ಸಹಲೇಖಕರು). ನೆಹರೂ ಆಯ್ದ ಬರವಣಿಗೆಯ ಸಂಪುಟಗಳನ್ನು ಪ್ರಕಟಿಸಿದ ಸಂಪಾದಕೀಯ ಮಂಡಳಿಯ ಸದಸ್ಯರೂ ಆಗಿದ್ದರು. ಶಿವರಾಮ ಕಾರಂತರ 'ಕುಡಿಯರ ಕೂಸು', 'ಮೈ ಮನಗಳ ಸುಳಿಯಲ್ಲಿ', ಆರ್.ಕೆ. ನಾರಾಯಣರ 'Swami and His Friends' ಕೃತಿಯನ್ನು ಭಾಷಾಂತರಿಸಿದರು. ಅವರ ಅಜ್ಜಿಯನ್ನು ಕುರಿತು ಮೊಮ್ಮಕ್ಕಳೆಲ್ಲ ಸೇರಿ ಬರೆದು, ಪ್ರಸಾದರೇ ಸಂಪಾದಿಸಿದ ಪುಸ್ತಕ ಆ ಕಾಲದ ಕೌಟುಂಬಿಕ ಜೀವನದ ಎಳೆಗಳ ದಾಖಲೆ. ಕನ್ನಡ ಸಾಹಿತ್ಯಿಕ-ಸಾಂಸ್ಕೃತಿಕ ಲೋಕಕ್ಕೆ ಆ ಕಾಲದಲ್ಲಿ ದೊರಕಿದ ರಾಷ್ಟ್ರೀಯ ಪುರಸ್ಕಾರಗಳ ಹಿಂದೆ ಅವರ ಪ್ರಭಾವವೂ ಇತ್ತೆಂದು ಹೇಳುತ್ತಾರೆ. ಶಿವರಾಮ ಕಾರಂತರೊಡನೆ ಅವರು ನಡೆಸಿರುವ ದೀರ್ಘ ಸಂದರ್ಶನವೂ ತುಂಬಾ ಜನಪ್ರಿಯವಾದದ್ದು.

ಇಷ್ಟೆಲ್ಲ ಸೂಕ್ಷ್ಮಸಂವೇದಿಯಾಗಿದ್ದ ಶಾರದಾಪ್ರಸಾದರು, ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ, ಪತ್ರಿಕಾ ಸ್ವಾತಂತ್ರ್ಯ ಹರಣವಾದಾಗ ಇಂದಿರಾಗಾಂಧಿಯವರ ಹತ್ತಿರ ಹೇಗೆ ಕೆಲಸ ಮಾಡಿದರು ಎಂಬ ಪ್ರಶ್ನೆ ಇದ್ದೇ ಇದೆ. ಈ ಪ್ರಶ್ನೆಯ ಅರಿವು ಅವರಿಗೂ ಇತ್ತು. ತುರ್ತು ಪರಿಸ್ಥಿತಿಯನ್ನು ಅವರು ಬೆಂಬಲಿಸಿಯೂ ಬರೆದಿಲ್ಲ, ವಿರೋಧಿಸಿಯೂ ಬರೆದಿಲ್ಲ. ಇಂದಿರಾ ಅವರು ತುರ್ತು ಪರಿಸ್ಥಿತಿಯನ್ನು ಸಡಿಲಿಸಿ ಚುನಾವಣೆಗಳನ್ನು ಘೋಷಿಸಲು ಕಾರಣವಾದದ್ದು ಮತ್ತು ವಿದೇಶ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿದ್ದ ತೀಕ್ಷ್ಣ ಟೀಕೆ-ಟಿಪ್ಪಣಿಗಳು, ಅವನ್ನೆಲ್ಲ ಅವರ ಗಮನಕ್ಕೆ ತಮ್ಮ ಕಚೇರಿ ತರುತ್ತಿತ್ತು ಎಂದು ಬರೆದುಕೊಂಡಿದ್ದಾರೆ. ಇಂದಿರಾ ಅವರ ರಾಜಕೀಯ ವಿರೋಧಿಯಾಗಿದ್ದ ಮೊರಾರ್ಜಿ ದೇಸಾಯಿ, ಜಯಪ್ರಕಾಶ ನಾರಾಯಣರಂತಹವರ ವ್ಯಕ್ತಿಚಿತ್ರಗಳನ್ನು ತಮ್ಮ ಅಂಕಣದಲ್ಲಿ ಬರೆದಾಗ, ಇಬ್ಬರನ್ನೂ ನೆಹರೂ ಮನೆತನ-ಇಂದಿರಾಗಾಂಧಿಯ ದೃಷ್ಟಿಕೋನದಿಂದ ವಿಶ್ಲೇಷಿಸಿಲ್ಲ ಎಂಬುದು ಕೂಡ ಮುಖ್ಯ. ಇಂದಿರಾ ಜೊತೆ ದೀರ್ಘಕಾಲ ಕೆಲಸ ಮಾಡಿದರೂ, ನೆಹರೂ ಬರವಣಿಗೆಯ ರೀತಿಯ ಬಗ್ಗೆಯೇ ಅವರಿಗೆ ಅಪಾರವಾದ ಗೌರವ.

ಸರ್ಕಾರಿ ಸೇವೆಯಿಂದ ನಿವೃತ್ತಿಯಾದ ದಿನ ಶಾರದಾಪ್ರಸಾದರು ಆಟೋರಿಕ್ಷಾದಲ್ಲಿ ಮನೆಗೆ ಹೋದರಂತೆ. ಎರಡು ಪುಟ್ಟ ಕೋಣೆಗಳಿದ್ದ ಮನೆಯಲ್ಲಿ ದೆಹಲಿಯಲ್ಲೇ ಅವರು ಕೊನೆಯ ತನಕ ವಾಸವಾಗಿದ್ದರು. ಮುಂದೆ ಅವರಿಗೆ ಪದ್ಮಭೂಷಣ, ರಾಷ್ಟ್ರೀಯ ಏಕತಾ ಪ್ರಶಸ್ತಿ ಬಂದವು. ಕರ್ನಾಟಕ, ಕನ್ನಡದೊಡನೆ ಒಡನಾಡುವ ಬಯಕೆಯಿಂದಾಗಿ ಮತ್ತೆ ಮತ್ತೆ ಕರ್ನಾಟಕದ ಪ್ರವಾಸ ಮಾಡುತ್ತಿದ್ದರು. ಸದ್ಯಕ್ಕೆ ಅವರ ಅಂಕಣ ಬರಹಗಳು ಮತ್ತು ಸಂಕ್ಷಿಪ್ತ ಜೀವನಚರಿತ್ರೆ ಮಾತ್ರ ಕನ್ನಡ ಓದುಗರಿಗೆ ಲಭ್ಯವಾಗಿದೆ. ಅವರು ಬಿಟ್ಟುಹೋಗಿರುವ ಅಪ್ರಕಟಿತ ಬರಹಗಳನ್ನು, ಅಸಂಖ್ಯಾತ ಖಾಸಗಿ ಪತ್ರಗಳನ್ನು ಸಂಪಾದಿಸಿ ಕನ್ನಡಿಗರಿಗೆ ಪರಿಚಯಿಸುವ ಜವಾಬ್ದಾರಿ ಅವರ ಕುಟುಂಬದ ಮುಂದಿನ ತಲೆಮಾರಿನ ಮೇಲಿದೆ. ಜನ್ಮಶತಮಾನೋತ್ಸವದ ಸಂದರ್ಭವು ಅದಕ್ಕೆ ಸೂಕ್ತ ಸಮಯವಾಗಿದೆ.

'ದ ಚೆರ್ರಿ ಆರ್ಕಾರ್ಡ್' ಆಧಾರಿತ 'ಆ ತೋಟ' ನಾಟಕದ ದೃಶ್ಯ

ರಷ್ಯಾದ 'ಆ ತೋಟ' ನಮ್ಮದೂ ಹೌದು

ಎಚ್ ಎಸ್ ನವೀನ ಕುಮಾರ್ ಹೊಸದುರ್ಗ

ರಷ್ಯಾದ ಸುಪ್ರಸಿದ್ಧ ಕಥೆಗಾರ, ನಾಟಕಕಾರ ಅಂಟನ್ ಚೆಕಾವ್ ನ ಹೆಸರಾಂತ ನಾಟಕ, 'ದ ಚೆರ್ರಿ ಆರ್ಕಾರ್ಡ್' ಆಧಾರಿತ 'ಆ ತೋಟ' (ಅನುವಾದ- ಕೆ.ವಿ. ಅಕ್ಷರ) ಕನ್ನಡದ ಒಂದು ವಿಶಿಷ್ಟ ನಾಟಕ. 19ನೇ ಶತಮಾನದಲ್ಲಿ ರಷ್ಯಾ ದೇಶದಲ್ಲಿ ಆಗುತ್ತಿದ್ದ ಸಾಮಾಜಿಕ ಪಲ್ಲಟ ಈ ಕಥೆಯ ಮೂಲವಸ್ತು. ವರ್ಗಾಧಾರಿತ ಸಮಾಜ ವ್ಯವಸ್ಥೆಯ ಕಾಲದಲ್ಲಿ ಜೀತ ಪದ್ಧತಿಯ ಅನುಸರಿಸುತ್ತಾ ಉಳ್ಳವರ ವರ್ಗ ತಮ್ಮ ಅನುಕೂಲಕ್ಕಾಗಿ, ಐಷಾರಾಮಕ್ಕಾಗಿ ನಿರ್ಮಿಸಿಕೊಂಡಿದ್ದ ತೋಟವೇ ಈ ನಾಟಕದ ಕೇಂದ್ರ ವಸ್ತು. ಜೀತಮುಕ್ತ ವ್ಯವಸ್ಥೆಗೆ ಸಮಾಜ ತೆರೆದುಕೊಂಡ ನಂತರ, ಈ ತೋಟದ ಮಾಲೀಕರಿಗೆ ಅದರ ನಿರ್ವಹಣೆ ಕಷ್ಟ ಸಾಧ್ಯವಾಗುತ್ತದೆ. ಅವರಲ್ಲಿ ಸರಿಯಾದ ಆರ್ಥಿಕ ಶಿಸ್ತು ಇರದ ಕಾರಣ, ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳುವವರಾಗಿರದ ಕಾರಣ ಸಾಲಗಾರರಾಗುತ್ತಾರೆ. ಕೊನೆಗೆ ತನ್ನ ಪೂರ್ವಜರು ಅದೇ ತೋಟದಲ್ಲಿ ಜೀತಗಾರರಾಗಿದ್ದು ಈಗ ಅದರ ಮ್ಯಾನೇಜರ್ ಆಗಿರುವ ವ್ಯಕ್ತಿ ತೋಟವನ್ನು ಹರಾಜಿನಲ್ಲಿ ಕೊಂಡುಕೊಳ್ಳುತ್ತಾನೆ. ಇದು ಆ ಮಾಲೀಕರ ಆರ್ಥಿಕ ಅಶಿಸ್ತನ್ನು ಎತ್ತಿ ಹಿಡಿಯುತ್ತದೆ. ಜೊತೆಗೆ ಆಳಿಸಿಕೊಳ್ಳುವವರ ಕೈಗೂ ಅಧಿಕಾರ ಬರುತ್ತದೆ ಎಂಬುದನ್ನು ಸೂಚಿಸುತ್ತದೆ. 19ನೇ ಶತಮಾನದ ಈ ಕಥೆ ಸಾರ್ವಕಾಲಿಕವಾಗುವಂತೆ ರಂಗದ ಮೇಲೆ ಪ್ರಸ್ತುತಪಡಿಸುವ ಪ್ರಯತ್ನವನ್ನು ಸಾಣೇಹಳ್ಳಿಯ ಶ್ರೀ ಶಿವಕುಮಾರ ರಂಗಪ್ರಯೋಗ ಶಾಲೆಯ ವಿದ್ಯಾರ್ಥಿಗಳು ಪ್ರಾಮಾಣಿಕವಾಗಿ ಮಾಡಿದ್ದಾರೆ. ಎನ್.ಎಸ್.ಡಿ ಪದವೀಧರ, ಇದೇ ರಂಗಶಾಲೆಯ ಹಳೆಯ ವಿದ್ಯಾರ್ಥಿ ಎಂ. ಮಧು ನಾಟಕದ ನಿರ್ದೇಶಕರು. ಯುವ ನಿರ್ದೇಶಕರ ಕೈಯಲ್ಲಿ ಹದವಾದ ಕಥಾವಸ್ತುವೊಂದು ಉತ್ತಮ ದೃಶ್ಯಕಾವ್ಯವಾಗಿ ರಂಗದ ಮೇಲೆ ಮೂಡಿ ಬಂದಿದೆ.

ನಿರ್ದೇಶಕರು ಇಲ್ಲಿ ರಂಗಸಜ್ಜಿಕೆ ಹಾಗೂ ಅತ್ಯುತ್ತಮ ಬೆಳಕಿನ ನಿರ್ವಹಣೆಯ ಮೂಲಕ ನಾಟಕವನ್ನು ಪ್ರೇಕ್ಷಕರ ಮನಸ್ಸಿನಲ್ಲಿ ಯಶಸ್ವಿಯಾಗಿ ನಿಲ್ಲಿಸುತ್ತಾರೆ. ರಂಗದ ಮಧ್ಯದಲ್ಲಿ ಬರುವ ಬಿಳಿ ಪರದೆಗಳು ನೆರಳು ಬೆಳಕಿನಲ್ಲಿ ತೋಟವಾಗಿ ಕಂಡರೆ, ಬೇರೆ ಸಮಯದಲ್ಲಿ ಅದು ಮನೆಯಾಗುತ್ತದೆ. ತೋಟದ ಮರ-ಗಿಡಗಳು ಅದರ ಜೊತೆಗೆ ಬೆರೆತುಕೊಂಡಿರುವ ಆ ಮನೆಯವರ ನೆನಪುಗಳು ಎಲ್ಲವೂ ಸಹ ನೆರಳು ಬೆಳಕಿನ ಮಾಧ್ಯಮದಲ್ಲಿ ಗೋಚರಿಸುತ್ತಾ, ಈ ನಾಟಕದಲ್ಲಿ ಅಲ್ಲಲ್ಲಿ ಕೊರತೆ ಎನಿಸುವ ನಟರ ಅಭಿನಯದ ಪಕ್ವತೆಯನ್ನು ತುಂಬಿ ಕೊಡುತ್ತದೆ. ಹೀಗಾಗಿ ಈ ತೋಟವೇ ನಾಟಕದ ಅತಿ ಮುಖ್ಯ ಜೀವಂತ ಪಾತ್ರ ಎಂದು ಪ್ರೇಕ್ಷಕರಿಗೆ ಅನಿಸಿಬಿಡುತ್ತದೆ. ಈ ತೋಟದ ಜೊತೆಗೆ ಹೆಣೆದುಕೊಂಡಿರುವ, ಜೀವಂತ ಪಾತ್ರಗಳ ಮಾನವೀಯ ಸಂಘರ್ಷಗಳು ತೊಳಲಾಟಗಳು, ಪ್ರೀತಿ ಪ್ರೇಮ ಎಲ್ಲವೂ ಕೂಡ ಅನಾವರಣಗೊಳ್ಳುತ್ತಾ ಹೋಗುತ್ತವೆ. ಜೊತೆಗೆ ವಿಭಿನ್ನ ಪಾತ್ರಗಳು ಅವರದೇ ಕಾಲಘಟ್ಟದಲ್ಲಿ ಬದುಕುತ್ತಾ ಯೋಚಿಸುತ್ತಾ ಭೂತ ಭವಿಷ್ಯತ್ತಿನ ಚಿಂತನೆಯಲ್ಲಿ ವರ್ತಮಾನವನ್ನು ಮರೆತಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ತೋಟವನ್ನು ಹರಾಜಿಗೆ ಹಾಕಿಸುವುದು ಬೇಡ, ಅದನ್ನು ರೆಸಾರ್ಟ್ ಮಾಡಬಹುದು ಅದೇ ಇಂದಿನ ಟ್ರೆಂಡ್ ಎಂದು ಮಾಲೀಕರಿಗೆ ಮ್ಯಾನೇಜರ್ ಸಲಹೆ ನೀಡುವಾಗ ಆತ ಇಂದಿನ ವಸ್ತುಸ್ಥಿತಿಯನ್ನು ಮನದಟ್ಟು ಮಾಡುತ್ತಾನೆ. ಆದರೆ ಭಾವನಾತ್ಮಕವಾಗಿ ತೋಟದೊಂದಿಗೆ ಬೆಸೆದುಕೊಂಡಿರುವ ಮಾಲೀಕರಾದ, ತಮ್ಮ ಹಾಗೂ ಅಕ್ಕ, ತಮ್ಮ ಬಾಲ್ಯದ ನೆನಪುಗಳನ್ನು ಅದರಲ್ಲಿ ಹುಡುಕುತ್ತಿರುತ್ತಾರೆ. ಮರೆಯಾಗಿ ಹೋಗಿರುವ ತಮ್ಮ ಅಮ್ಮನನ್ನು ಅಲ್ಲಿ ಅರಸುತ್ತಾರೆ ಹಾಗೂ ಅದರ ಆಧುನಿಕ ಪರಿವರ್ತನೆಗೆ ಅವರು ಒಪ್ಪಿಕೊಳ್ಳುವುದಿಲ್ಲ. ಕೊನೆಗೆ ತೋಟವನ್ನು ಕೊಂಡುಕೊಂಡ ಮ್ಯಾನೇಜರ್ ತಕ್ಷಣವೇ ಅಲ್ಲಿನ ಗಿಡಮರಗಳನ್ನು ಕತ್ತರಿಸಿ ಹಾಕುತ್ತಾನೆ. ಇದು ಪ್ರಕೃತಿಯ ಮೇಲೆ ಮನುಷ್ಯ ಮಾಡುತ್ತಿರುವ ನಿರಂತರ ದೌರ್ಜನ್ಯದ ಚಿತ್ರಣ. ಇಂತಹ ಕ್ರೌರ್ಯವನ್ನು ಸರಳವಾದ ನೆರಳು ಬೆಳಕಿನಲ್ಲಿ ತೋರಿಸಿರುವುದರಿಂದ ನಾಟಕ ನೋಡುಗರ ಮನಕ್ಕೆ ನಾಟುತ್ತದೆ.

ಅಭಿನಯದ ದೃಷ್ಟಿಯಿಂದ ಹೇಳುವುದಾದರೆ ರೆಪರ್ಟರಿ ವಿದ್ಯಾರ್ಥಿಗಳ ಅಭ್ಯಾಸ ಮಾಲಿಕೆಯ ಪ್ರಯೋಗ ಇದಾಗಿರುವುದರಿಂದ ಎಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆಂದು ಖಂಡಿತ ಹೇಳಬಹುದು. ಅದರಲ್ಲೂ ಕೆಲವು ಚಿಕ್ಕ ಪಾತ್ರಗಳು, ಉದಾಹರಣೆಗೆ ಮಧ್ಯದಲ್ಲಿ ಬಂದು ಹೋಗುವ ಹುಚ್ಚ ಭಿಕ್ಷುಕನ ಪಾತ್ರ ರಂಗದಲ್ಲಿ ಸಂಚಲನ ಮೂಡಿಸಿಬಿಡುತ್ತದೆ. ಉಳಿದವರ ಅಭಿನಯದಲ್ಲಿ ಇನ್ನೂ ಏನೋ ಬೇಕಿತ್ತು ಎಂಬ ಭಾವ ಪ್ರೇಕ್ಷಕರಲ್ಲಿ ಮೂಡುತ್ತದೆ. ರಂಗಶಾಲೆಯ ಹಳೆಯ ವಿದ್ಯಾರ್ಥಿನಿ ವಿದ್ಯಾರಾಣಿಯವರ ವಸ್ತ್ರ ವಿನ್ಯಾಸ, ಅಚ್ಚುಕಟ್ಟಾಗಿ ಮೂಡಿ ಬಂದಿರುವ ಗರಿಮೆ ಹಾಗೂ ಶಾಂತನು ಅವರ ಗಾಯನ ನಾಟಕದ ಮೆರಗನ್ನು ಹೆಚ್ಚಿಸುತ್ತದೆ.

'ಆ ತೋಟ' ನಾಟಕದಲ್ಲಿ ಸಾಣೇಹಳ್ಳಿಯ ಶ್ರೀ ಶಿವಕುಮಾರ ರಂಗಪ್ರಯೋಗ ಶಾಲೆಯ ವಿದ್ಯಾರ್ಥಿಗಳು

'ಅಂಬೇಡ್ಕರ್‌ರನ್ನು ನೋಡುವ ನೋಟ ಬದಲಾಗಲಿ'

10ನೇ ಪುಟದಿಂದ...

ಪ್ರೀತಿ ಪ್ರೇಮ ಉತ್ತಮ ನಡವಳಿಕೆಯಿಂದ ಮನಸ್ಸು ಸಂಬಂಧ ಗಟ್ಟಿಗೊಳ್ಳುತ್ತದೆಯೇ ವಿನಾ ಅರ್ಥವಿಲ್ಲದ ಜಾತಿ ಮತ ಅಂತಸ್ತು ಐಶ್ವರ್ಯಗಳಿಂದಲ್ಲ. ಇದನ್ನು ಧಾರ್ಮಿಕ ಸಂಘ ಸಂಸ್ಥೆಗಳು ರಾಜಕೀಯ ಪಕ್ಷಗಳು ಅಗತ್ಯವಾಗಿ ಅರ್ಥಮಾಡಿಕೊಳ್ಳಬೇಕು.

ಹೃದಯ ವೈಶಾಲ್ಯತೆಯ ಅಂಬೇಡ್ಕರ್, ಇಡೀ ಭಾರತ ಸಮಾಜದ ಶ್ರೇಯೋಭಿವೃದ್ಧಿ ಬಯಸಿದವರು. ಇದಕ್ಕೆ ಅವರು ಹುಟ್ಟಿ ಬೆಳೆದ ಹಾಗೂ ಪ್ರೇರಣೆಗೊಂಡ ಸಮಾಜವೂ ಕಾರಣವಾಗಿದೆ. ಕಟ್ಟುನಿಟ್ಟಾದ ಧಾರ್ಮಿಕ ಆಚರಣೆಯ ಕಬೀರ್ ಮನೆತನದಲ್ಲಿ ಹುಟ್ಟಿ ಬೆಳೆದ ಅಂಬೇಡ್ಕರ್ ಅವರಿಗೆ ಅಸ್ಪೃಶ್ಯತೆಯ ಕಾರಣದಿಂದ ಕರಾಳ ಅವಮಾನವಾಗಿರುವುದು ನಿಜ. ಜೊತೆಗೆ ಇದೇ ಸಮಾಜದ ಒಳಗೆ ಪ್ರೀತಿಯೂ ಪ್ರೋತ್ಸಾಹವೂ ಸಿಕ್ಕಿರುವುದು ಅಷ್ಟೇ ನಿಜ. ಮಳೆಯಲ್ಲಿ ತೊಯ್ದ ಬಾಲಕ ಭೀಮನನ್ನು ತಾಯಿ ಮಮತೆಯಿಂದ ಮರುಗಿದ ಬ್ರಾಹ್ಮಣ ಶಿಕ್ಷಕ ಪೆಂಡ್ಸೆ ಅವರು ಮನೆಗೆ ಕರೆದುಕೊಂಡು ಹೋಗಿ ಬೇರೆ ಬಟ್ಟೆ, ಬಿಸಿ ಆಹಾರ ಕೊಡಿಸಿದರು. ಇನ್ನೊಬ್ಬ ಬ್ರಾಹ್ಮಣ ಶಿಕ್ಷಕರು ಪ್ರತಿದಿನ ತಮ್ಮ ಊಟವನ್ನು ಬಾಲಕ ಭೀಮನೊಟ್ಟಿಗೆ ಹಂಚಿ ಊಟಮಾಡುತ್ತಿದ್ದರು. ಈ ಬಾಲಕ ಮುಂದೆ ಸಮಾಜಕ್ಕೆ ಬಹುದೊಡ್

ಅಪ್ಪಾಸಾಹೇಬ ಪೂಜಾರಿಯ ಕಣ್ಣೀರಿನ ಅಕ್ಷರಗಳು



ಸುಮಾರು 45 ವರ್ಷಗಳ ನಂತರ ಗೆಳೆಯ ಮತ್ತು ಸಹಪಾಠಿಯನ್ನು ಕಾಣುವ ಸಂದರ್ಭ ಕೆಲ ದಿನಗಳ ಹಿಂದೆ ಬಂತು. ಅದೂ ಒಂದು ವಿಶೇಷ ಪ್ರಸಂಗವೇ- ತನ್ನ ಆತ್ಮಕಥನದ ಮೊದಲನೇ ಭಾಗದ ಬಿಡುಗಡೆ ಮಾಡಲು ಅವನು ನನ್ನನ್ನು ಆಮಂತ್ರಿಸಿದ್ದ ಸಮಾರಂಭ ನಡೆದದ್ದು ಮಹಾರಾಷ್ಟ್ರದ ಸಾಂಸ್ಕೃತಿಕ ರಾಜಧಾನಿಯಾದ ಪುಣೆಯ ಐತಿಹಾಸಿಕ ಗಾಂಧಿ ಭವನದಲ್ಲಿ.

ಲೇಖಕನ ಹೆಸರು ಪ್ರಾಚಾರ್ಯ ಡಾ.ಅಪ್ಪಾಸಾಹೇಬ ಪೂಜಾರಿ. ಮರಾಠಿಯಲ್ಲಿ ಬರೆದ ಅವನ ಆತ್ಮಕಥನದ ಶೀರ್ಷಿಕೆ 'ಅಕ್ಷರೇ ಅಶ್ರೂಂಚೆ'. ಕನ್ನಡದಲ್ಲಿ ಹೇಳುವುದಾದರೆ 'ಕಣ್ಣೀರಿನ ಅಕ್ಷರಗಳು'. ಬೆಳಗಾವಿ ಜಿಲ್ಲೆಯ ಅಥಣಿಯಲ್ಲಿ ಜಾಧವಜಿ ಆನಂದಜಿ ಹೈಸ್ಕೂಲಿನಲ್ಲಿ ಓದುತ್ತಿದ್ದಾಗ, ಅಪ್ಪಾಸಾಹೇಬ ಸಹಪಾಠಿಯಲ್ಲದೇ ನಮ್ಮ ಗುರುಗಳಾಗಿದ್ದ ಫಡಕೆ ಸರ್ ಅವರ 'ಶಿಕೋಣೆ'ಯ ಸಹಪಾಠಿ ಕೂಡ. 'ಶಿಕೋಣೆ' ಅಂದರೆ ಟ್ಯೂಷನ್ ಕ್ಲಾಸ್.

ಅಪ್ಪಾಸಾಹೇಬ ಕಲ್ಪನೆ ಮಾಡಲೂ ಅಸಾಧ್ಯವೆಂಬಂತಹ ಕಡುಬಡತನದಲ್ಲಿ ಬೆಳೆದವನು. ಅವನ ತಂದೆ ಒಂದು ಸಣ್ಣದಾದ ಅಂಬಾಬಾಯಿ ದೇವಿ ಗುಡಿಯ ಪೂಜಾರಿ. ಗೆಳೆಯ ಚಿಕ್ಕವನಿದ್ದಾಗಲೇ ತಂದೆಯನ್ನು ಕಳೆದುಕೊಂಡ. ಸಂಸಾರ ನಡೆಸುವ ಮತ್ತು ಮೂರು ಮಕ್ಕಳನ್ನು ಬೆಳೆಸುವ ಜವಾಬ್ದಾರಿಯನ್ನು ತಾಯಿಯೇ ಹೊರಬೇಕಾಯಿತು. ನಾಲ್ಕಾರು ಮನೆಗಳಲ್ಲಿ ಪಾತ್ರೆಗಳನ್ನು ತಿಕ್ಕಿ, ಬಿಡುವಿದ್ದಾಗ ಒಂದೆರಡು ಹೊಟೇಲುಗಳಲ್ಲಿ ಕಾಳು ಹಸನು ಮಾಡುವ ಕೆಲಸ ಹಿಡಿದು ಅವನ ಈ ಮಹಾತಾಯಿ ಮಕ್ಕಳ ಹಸಿವು ನೀಗಿಸಿದಳು.

ಒಂದು ದಿನ ಏನು ಹೊಳೆಯಿತೋ ಏನೋ, ಅಂಬಾಬಾಯಿ ಗುಡಿಯಲ್ಲಿ ಭಕ್ತರು ಕೊಟ್ಟ ಪ್ರಸಾದದ ತೆಂಗಿನಕಾಯಿಯ ಕೆಲವು ಬಟ್ಟಲುಗಳನ್ನು ಫಡಕೆ ಸರ್ ಅವರಿಗೆ ಕೊಡಬೇಕೆಂದು ಅವರ ಮನೆಗೆ ಹೋದ. ಯಾವ ರೀತಿಯ ಸ್ವಾಗತ ತನಗೆ ಸಿಗುತ್ತದೋ ಎಂಬ ಭೀತಿ ಮನಸ್ಸಿನಲ್ಲಿತ್ತು. ಸರ್ ಅವರು ಇವನನ್ನು ಗುರುತಿಸಿ ಅತ್ಯಂತ ಪ್ರೀತಿಯಿಂದ ಒಳಗೆ ಕರೆದರು. ಇವನು ಒಂದಿಷ್ಟು ನಡಗುತ್ತಲೇ ಗುರುಗಳು ಕುಳಿತಿರುವ ಕುರ್ಚಿಯ ಎದುರು ನೆಲದ ಮೇಲೆ ಕುಳಿತುಕೊಳ್ಳುವ ಪ್ರಯತ್ನದಲ್ಲಿದ್ದಾಗ ಸರ್ ಅವರು ಅವನಿಗೆ ಹೇಳಿದ ಮಾತು ಅವರ ಅದರ್ಶ ವ್ಯಕ್ತಿತ್ವಕ್ಕೆ ಕನ್ನಡಿಯೇ ಹೌದು. 'ಪೂಜಾರಿ, ನಿನಗೆ ನಮ್ಮ ಮನೆಯ ನಿಯಮಗಳು ಗೊತ್ತಿಲ್ಲ. ಏಕೆಂದರೆ ನೀನು ಮೊದಲ ಬಾರಿ ಇಲ್ಲಿ ಬಂದಿರುವಿ. ಈ ಮನೆಯಲ್ಲಿ ಶ್ರೇಷ್ಠ, ಕನಿಷ್ಠ ಎಂಬ ಆಚರಣೆ ಇಲ್ಲ. ಈ ಮನೆಗೆ ಬಂದವರು ಎಲ್ಲರೂ ಸಮಾನರೇ. ಇಲ್ಲಿ ಬಂದವರು ಕುರ್ಚಿ ಮತ್ತು ಪಲಂಗಿನ ಮೇಲೆ ಕೂಡಬೇಕು. ಅಲ್ಲಿ ಜಾಗ ಇಲ್ಲವಾದರೆ ಮಾತ್ರ ನಂತರ ಬಂದವರು ಚಾಪೆಯ ಮೇಲೆ ಕೂಡಬೇಕು' ಎಂದು ಹೇಳಿದವರೇ ಅಪ್ಪಾಸಾಹೇಬನನ್ನು ತಮ್ಮ ಜೊತೆಯಲ್ಲಿ ಕುರ್ಚಿಯ ಮೇಲೆ ಕೂರಿಸಿದರು. ಜೀವನದಲ್ಲಿ ಮೊಟ್ಟ ಮೊದಲನೇ ಸಲ ಕುರ್ಚಿಯ ಮೇಲೆ ಕೂಡುವ ಭಾಗ್ಯ ಅವನಿಗೆ ಲಭಿಸಿತು.

ಮರುಕ್ಷಣವೇ ಸರ್ ಪತ್ನಿಯನ್ನು ಕರೆದು 'ಇದು ನೋಡು, ನಮ್ಮ ಶಿಷ್ಯ ತೆಂಗಿನಕಾಯಿಯ ಬಟ್ಟಲುಗಳನ್ನು ತಂದಿದ್ದಾನೆ. ನಾಳೆ ಇದರ ಕೊಬ್ಬರಿಯ ವಡೆ ಮಾಡಿ ಇವನಿಗೂ ಕೊಡು' ಎಂದರು. ಇದೆಲ್ಲವೂ ಅಪ್ಪಾಸಾಹೇಬನಿಗೆ ನಂಬಲಾಗದ ಅನುಭವವೇ. ತಾನೆಲ್ಲಿದ್ದೇನೆ, ತನಗೇನಾಗುತ್ತಿದೆ ಎಂಬ ಯೋಚನೆಯಲ್ಲಿದ್ದಾಗಲೇ ಸರ್ ಕೇಳಿದರು- 'ಏನೋ, ನೀನು ಶಿಕೋಣೆಗೆ ಬರುವುದಿಲ್ಲ?' ಒಂದು ಸುದೀರ್ಘ ಮೌನ ಮುದ್ರೆಯ ನಂತರ ಅಪ್ಪಾಸಾಹೇಬ ಉತ್ತರಿಸಿದ- 'ಸರ್, ಫೀ ಕೊಡಲು ನನ್ನ ತಾಯಿಯ ಬಳಿ ಹಣವಿಲ್ಲ.' ಆಗ ಸರ್ ಹೇಳಿದರು, 'ನೀನು ಫೀ ಕೊಡುವ ಅವಶ್ಯಕತೆ ಇಲ್ಲ. ನಾಳೆಯಿಂದಲೇ ಇಲ್ಲಿ ಕಲಿಯಲಿಕ್ಕೆ ಬಾ.'

ಇದನ್ನು ಕೇಳಿ ಅಪ್ಪಾಸಾಹೇಬನ ಆನಂದಕ್ಕೆ ಎಲ್ಲೆಯಿಲ್ಲವಾಯಿತು. ಮನೆಗೆ ಓಡಿ ಹೋಗಿ ತಾಯಿಗೆ ಈ ಮಾತನ್ನು ಹೇಳಿದಾಗ ಆನಂದದ ಕಣ್ಣೀರು ಸುರಿಸಿದ ಅವಳು ಮಗನನ್ನು ಅಪ್ಪಿಕೊಂಡಳು.

ಅಪ್ಪಾಸಾಹೇಬನ ಆತ್ಮಕಥನದ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡುವಾಗ ನಾನು ಒಂದು ಮಾತು ಹೇಳಿದೆ. 'ಶಿಕ್ಷಣ ಅಂದರೆ ಏನು? ಇದರ ಅರ್ಥವನ್ನು ಒಬ್ಬ ತಜ್ಞರು ಅತ್ಯಂತ ಸರಳವಾಗಿ ಹೇಳಿದ್ದಾರೆ. 'ಶಾಲೆ-ಕಾಲೇಜಿನ ಕ್ಲಾಸ್ ರೂಮಿನ ನಾಲ್ಕು ಗೋಡೆಗಳ ಮಧ್ಯೆ ಕಲಿತದ್ದರಲ್ಲಿ ಅದೆಷ್ಟೋ ಮರೆತುಹೋದ ನಂತರ ಜೀವನದುದ್ದಕ್ಕೂ ಏನು ಉಳಿಯುತ್ತದೆಯೋ ಅದೇ ನಿಜವಾದ ಶಿಕ್ಷಣ.

ಅಥಣಿಯಲ್ಲಿ ಪಿಯುಸಿ ಮುಗಿಸಿ ನಾನು ಎಂಜಿನಿಯರಿಂಗ್ ಕಲಿಯುವುದಕ್ಕಾಗಿ ಐಐಟಿ ಮುಂಬಯಿಗೆ ಹೋದೆ. ಅಪ್ಪಾ ಸಾಹೇಬ ಬಿ.ಎ. ಮುಗಿಸಿದ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಯಾವುದೇ ಕಾರಣಕ್ಕಾಗಿ ಪ್ರವೇಶ ಸಿಗಲಿಲ್ಲ. ಅದಕ್ಕಾಗಿ ಅವನು ಮಹಾರಾಷ್ಟ್ರದಲ್ಲಿಯ ಕೊಲ್ಹಾಪುರಕ್ಕೆ ಹೋಗಿ ಎಂ.ಎ. ಮಾಡಿದ. ಕಡುಬಡತನವಂತೂ ಆಗಲೂ ಬೆನ್ನು ಬಿಟ್ಟಿರಲಿಲ್ಲ. ಆದರೆ ಬಡತನದಲ್ಲಿಯೇ ಕಷ್ಟಪಟ್ಟು ಜೀವನ ನಡೆಸುತ್ತಿದ್ದ ಅಥಣಿಯ ಶಂಕರ ಜಾಧವ ಎಂಬ ದಯಾಳು ಸಹಪಾಠಿಯೊಬ್ಬ ಅಪ್ಪಾಸಾಹೇಬನ ಸಹಾಯಕ್ಕಾಗಿ ದೇವದೂತನಾಗಿ ಮುಂದೆ ಬಂದ. ಎಂ.ಎ. ಶಿಕ್ಷಣದ ಎರಡು ವರ್ಷಗಳ ಕಾಲಾವಧಿಯಲ್ಲಿ ಅವನ ಎಲ್ಲ ಅಗತ್ಯಗಳನ್ನೂ ಶಂಕರನೇ ತೀರಿಸಿದ. ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯಲ್ಲಿ ಮಂಗಳವೇಢಾ ಎಂಬ ಊರಿನ ಕಾಲೇಜಿನಲ್ಲಿ ಅಪ್ಪಾಸಾಹೇಬನಿಗೆ ಪ್ರಾಧ್ಯಾಪಕನ ನೌಕರಿ ಸಿಕ್ಕಿತು. ಬಾಳಿಗೆ ಒಂದಿಷ್ಟು ಆರ್ಥಿಕ ಸ್ಥೈರ್ಯ ಬಂತು. ಅಧ್ಯಯನಶೀಲತೆ ಅವನ ರಕ್ತದ ಗುಣವಾಗಿದ್ದರಿಂದ ಅರ್ಥಶಾಸ್ತ್ರದಲ್ಲಿ ಪಿಎಚ್.ಡಿ. ಪದವಿ ದೊರಕಿಸಿಕೊಂಡ. ಕೆಲವೇ ವರ್ಷಗಳಲ್ಲಿ ಮರಾಠಿ ಭಾಷೆಯಲ್ಲಿ ಪ್ರಸಿದ್ಧ ಗ್ರಂಥಗಳನ್ನು ಬರೆದು ಹೆಸರು ಗಳಿಸಿದ.

ಆದರೆ ಅಪ್ಪಾಸಾಹೇಬನಿಗೆ ಇನ್ನೂ ಹೆಚ್ಚು ಕೀರ್ತಿ ತಂದ ಕಾರಣವೆಂದರೆ ಮರಾಠಿ ಸಂತ ಸಾಹಿತ್ಯದಲ್ಲಿ ಅವನು ಮಾಡಿದ ಬಹುಮೂಲ್ಯ ಶೋಧಕಾರ್ಯ. ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ವಚನ ಸಾಹಿತ್ಯಕ್ಕೆ ಇರುವ ಮಹತ್ವವೇ ಮಹಾರಾಷ್ಟ್ರದಲ್ಲಿ ಸಂತ ಸಾಹಿತ್ಯಕ್ಕಿದೆ. ಜ್ಞಾನೇಶ್ವರ, ತುಕಾರಾಮ, ನಾಮದೇವ ಮುಂತಾದ ಮಹಾನ್ ಸಂತ ಶಿರೋಮಣಿಗಳು ಹಿಂದೂ ಧರ್ಮದ ಚಿರಂತನ ಆಧ್ಯಾತ್ಮಿಕ ಸಾರವನ್ನು, ಸಾಮಾಜಿಕ ಸಮಾನತೆಯ ಪಾಠವನ್ನು ಜನಸಾಮಾನ್ಯರ ಭಾಷೆಯಲ್ಲಿ ಕಾವ್ಯಮಯ ಶೈಲಿಯಲ್ಲಿ ಬಿತ್ತರಿಸಿದರು. ಭೀಮಾ ನದಿಯ ಸುರಮ್ಯ ತೀರದಲ್ಲಿರುವ ಮಂಗಳವೇಢಾ ಇದು ಅನೇಕ ಸಂತರ ಜನ್ಮಭೂಮಿ, ತಪೋಭೂಮಿ. ಮಹಾನ್ ಸಂತ-ಕವಿಗಳಾದ ಚೋಖಾಮೇಳಾ ಮತ್ತು ಕಾನ್ಹೋಪಾತ್ರಾ ಇಲ್ಲಿಯವರೇ. ಅಪ್ಪಾ ಸಾಹೇಬನು ಈ ಸಂತರ ಇತಿಹಾಸದ ಅನ್ವೇಷಣೆ ಮಾಡಿ ಬರೆದ ಗ್ರಂಥಕ್ಕೆ ಮಹಾರಾಷ್ಟ್ರದಲ್ಲಿ ತುಂಬಾ ಮನ್ನಣೆ ಸಿಕ್ಕಿತು. ಇವೆಲ್ಲವುಗಳ ವಿವರಣೆ ಎಂದರೆ ಸುಖಕರವಾದ ಕಣ್ಣೀರಿನ ಅಕ್ಷರಗಳ ಸುರಿಮಳೆಯೇ ಸರಿ.

ಗೆಳೆಯ ಅಪ್ಪಾಸಾಹೇಬನ ಈ ಉದ್ಬೋಧಕ ಆತ್ಮಕಥನ ಕನ್ನಡದಲ್ಲಿಯೂ ಬೇಗನೆ ಬರಬೇಕು ಎಂಬುದು ನಮ್ಮಿಬ್ಬರ ಇಚ್ಛೆ. ಹಾಗೂ ಈ ಬಯಕೆಯನ್ನು ಸಾಕಾರಗೊಳಿಸುವ ನನ್ನ ಸಂಕಲ್ಪದೊಂದಿಗೆ ಅವನ ಆತ್ಮಕಥನದ ಎರಡನೆಯ ಭಾಗ ಬೇಗನೆ ಹೊರಬರಲೆಂದು ಹಾರೈಸುವೆ.

(ಲೇಖನದ ಪೂರ್ಣಪಾಠ www.prajavani.net ನಲ್ಲಿ)

ಜೈಲಿನೊಳಗಿನ ಕೈದಿಗಳ ಯೋಚಕ ಕಥೆ

ಜೈಲ್ ಡೈರಿ – ಕೈದಿಗಳ ನೈಜ ಕಥನ
ಲೇ: ಐ.ಜೆ. ಮ್ಯಾಗೇರಿ
ಪ್ರ: ಸಂಗಾತ ಪುಸ್ತಕ
ಸಂ: 9341757653

ಕೈದಿಗಳ ಬದುಕಿನ ಬಗ್ಗೆ ಕೆಲವು ಕೃತಿಗಳು ಬಂದುಹೋಗಿವೆ. ಜೈಲುಗಳಲ್ಲಿ ಇದ್ದುಬಂದ ಹೋರಾಟಗಾರರ ಕಥನಗಳೂ ಪ್ರಕಟವಾಗಿವೆ. ಜೈಲು ಅಧಿಕಾರಿಗಳಿಗೆ ಕೈದಿಗಳ ಬದುಕನ್ನು ಹತ್ತಿರದಿಂದ ನೋಡುವ ಅವಕಾಶ ಇದೆ. ಕರ್ನಾಟಕ ಕಾರಾಗೃಹ ಇಲಾಖೆಯಲ್ಲಿ ಅಧಿಕಾರಿಯಾಗಿರುವ ಐ.ಜೆ.ಮ್ಯಾಗೇರಿ ಅವರು ವಿವಿಧ ಕಡೆ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ಕೆಲವು ಕೈದಿಗಳ ಕಥೆಯನ್ನು 'ಜೈಲು ಡೈರಿ' ಕಥೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಈ ಕೃತಿ ಪತ್ರಿಕೆಯೊಂದರಲ್ಲಿ ಅಂಕಣ ರೂಪದಲ್ಲಿ ಪ್ರಕಟಗೊಂಡ ಲೇಖನಗಳ ಗುಚ್ಛ. 21 ಶೀರ್ಷಿಕೆಯಡಿ ಇದನ್ನು ಕಟ್ಟಿಕೊಟ್ಟಿದ್ದಾರೆ. ಸಾಹಿತ್ಯಾಸಕ್ತರೂ ಆದ ಲೇಖಕರು ತಮ್ಮ ಅನುಭವವನ್ನು ನಿರೂಪಿಸುತ್ತ ಕಟ್ಟಿರುವ ಈ ಕಥನಗಳು ಚಿಂತನೆಯಾಗಿ ರೂಪಾಂತರಗೊಂಡಿವೆ. ಅಲ್ಲಲ್ಲಿ ದಾರ್ಶನಿಕರ, ಪ್ರಸಿದ್ಧ ಲೇಖಕರ ಉಲ್ಲೇಖವೂ ಇದೆ. ಆದರೆ ಅನುಭವಗಳ ನಿರೂಪಣೆಯಲ್ಲಿ ಕೆಲವೆಡೆ ನೀತಿ ಬೋಧೆ ಹೆಚ್ಚೇ ಇವೆ ಎನಿಸುತ್ತದೆ.

ಕುಡುಕನೊಬ್ಬ ಹಸಿ ಬಾಣಂತಿಯನ್ನು ತನ್ನ ಕಾಮುಕತೆಗಾಗಿ ಭೀಕರವಾಗಿ ಕೊಂದ ಪ್ರಸಂಗ, ಸಂಸಾರ ಬಿಟ್ಟು ಜೈಲಿನಲ್ಲಿ ಇರಲಾಗದೇ ಪೆರೋಲಿನ ಮೇಲೆ ಬಿಡುಗಡೆಯಾದ ವ್ಯಕ್ತಿ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಸಂಗ... ಹೀಗೆ ಕೈದಿಗಳ ವಿಭಿನ್ನ ಕಥೆಯಿಂದಾಗಿ ಕೃತಿ ಓದಿಸಿಕೊಂಡು ಹೋಗುತ್ತದೆ.

ಕೃತಿಯಲ್ಲಿ ಅಲ್ಲಲ್ಲಿ ಅಕ್ಷರ ದೋಷ, ಪದ ಪ್ರಯೋಗದಲ್ಲಿ ದೋಷಗಳಿವೆ. ಆ ಕಡೆಯೂ ಲಕ್ಷ್ಯ ವಹಿಸಿದ್ದಲ್ಲಿ ಕೃತಿಯ ಮೌಲ್ಯ ಹೆಚ್ಚುತಿತ್ತು. ರಾಬೆನ್ ಐಸ್ಲ್ಯಾಂಡ್ (ರಾಬೆನ್ ಐಲ್ಯಾಂಡ್ ಸರಿ ಪ್ರಯೋಗ), ಟರ್ಡಿಯೊ (ತಾರದೇವ್).. ಹೀಗೆ ಕೆಲವು ಉದಾಹರಿಸಬಹುದು.

ಓದಲು ಹಿರಿ



ನಿಜದ ಕಣ್ಣಲ್ಲಿ ಸ್ವಾಮಿ ವಿವೇಕಾನಂದ
ಲೇ:ಅನೂಡಿ ನಾಗರಾಜ್
ಪ್ರ: ಅನೂಡಿ ಪ್ರಕಾಶನ
ಸಂ: 7619199779

ವಿವೇಕಾನಂದರ ಚಿಂತನೆಗಳತ್ತ ನೋಟ

ಹಿಂದೂ ಧರ್ಮದ ನೆಲೆಗಟ್ಟಿನಲ್ಲಿ ವಿವೇಕಾನಂದರನ್ನು ವಿಶ್ಲೇಷಿಸುವ ಸಾಕಷ್ಟು ಕೃತಿಗಳಿವೆ. ಆನೂಡಿ ನಾಗರಾಜ್‌ರ 'ನಿಜದ ಕಣ್ಣಲ್ಲಿ ಸ್ವಾಮಿ ವಿವೇಕಾನಂದ' ಕೃತಿ ಮುಖ್ಯವೆನ್ನಿಸುವುದು, ವಿವೇಕಾನಂದರಿಗೆ ಒಂದು ಸಾಮಾಜಿಕ ಆಯಾಮವನ್ನು ಕಲ್ಪಿಸಿರುವುದರಲ್ಲಿ. ಈ ಸಾಮಾಜಿಕ ಆವರಣ 'ಬಹುತ್ವ ಭಾರತ'ದ ಆಶಯಕ್ಕೆ ಪೂರಕವಾಗಿದೆ ಹಾಗೂ ಧರ್ಮವನ್ನು ಜೀವಪರಗೊಳಿಸುವುದಾಗಿದೆ.

ಕೃತಿಯ ಶೀರ್ಷಿಕೆಯಲ್ಲಿನ 'ನಿಜ', ವಿವೇಕಾನಂದರ ಚಿಂತನೆಗಳನ್ನು ಸಮಕಾಲೀನಗೊಳಿಸುವ ಪ್ರಯತ್ನವಾಗಿದೆ. ವರ್ತಮಾನದ ಬಿಕ್ಕಟ್ಟುಗಳಿಗೆ ವಿವೇಕರ ಚಿಂತನೆಗಳಲ್ಲಿ ಇರಬಹುದಾದ ಔಷಧಿರೂಪದ ಸಾಧ್ಯತೆಗಳನ್ನು ಕೃತಿ ಸಹೃದಯರ ಗಮನಕ್ಕೆ ತರುವಂತಿದೆ. 'ನಿಜ' ಎನ್ನುವ ವಿಶೇಷಣಕ್ಕೆ ಕೃತಿಯಲ್ಲಿ ಮತ್ತೊಂದು ಅರ್ಥವೂ ಇದೆ. ಅದು, ವಿವೇಕಾನಂದರ ವ್ಯಕ್ತಿತ್ವವನ್ನು ಕುಬ್ಜಗೊಳಿಸುವ ಚೌಕಟ್ಟನ್ನು ಮುಕ್ತಗೊಳಿಸುವುದು ಹಾಗೂ ಈ ದೇಶ ಕಂಡ ಅಪೂರ್ವ ವ್ಯಕ್ತಿತ್ವವೊಂದನ್ನು ಪೂರ್ವಗ್ರಹಗಳಿಂದ ಹೊರತರುವುದು. ವಿವೇಕಾನಂದರ ಚಿಂತನೆಗಳನ್ನು ವರ್ತಮಾನದ ಕಣ್ಣಿನಲ್ಲಿ ನೋಡುವ ಹಾಗೂ ಅವರ ವ್ಯಕ್ತಿತ್ವವನ್ನು ವಿಸ್ತಾರಗೊಳಿಸುವ – ಎರಡೂ ಉದ್ದೇಶಗಳಲ್ಲಿ ನಾಗರಾಜ್ ಸಾಕಷ್ಟು ಯಶಸ್ವಿಯಾಗಿದ್ದಾರೆ. ಆ ಯಶಸ್ಸು ಕೃತಿಯ ಗೆಲುವೂ ಹೌದು.

'ಹಿಂದೂ – ಹಾಗೆಂದರೇನು?', 'ವರ್ಣ, ಜಾತಿ, ಕುಲಗಳು ಭರತಖಂಡದ ಧರ್ಮವೇ?', 'ದಾರಿ ಯಾವುದಯ್ಯ ಭಾರತೀಯರ ಕಲ್ಯಾಣಕ್ಕೆ?', 'ಸನ್ಯಾಸ – ಹಾಗೆಂದರೇನು?', 'ಸೌಹಾರ್ದವೆಂದರೆ ವೈಮನಸ್ಯವೇ?' – ಕೃತಿಯಲ್ಲಿನ ಅಧ್ಯಾಯಗಳ ಈ ಶೀರ್ಷಿಕೆಗಳೇ ಪುಸ್ತಕದ ಉದ್ದೇಶವನ್ನೂ ಸೂಚಿಸುವಂತಿವೆ. ವಿವೇಕಾನಂದರ ಬಗ್ಗೆ ಆಸಕ್ತಿಯುಳ್ಳವರು ಮಾತ್ರವಲ್ಲದೆ, ಸಾಮಾಜಿಕ ಸ್ವಾಸ್ಥ್ಯದ ಹಂಬಲವುಳ್ಳ ಎಲ್ಲರೂ ಗಮನಿಸಬೇಕಾದ ಕೃತಿಯಿದು.

ರೆಕ್ಕೆಯಿಲ್ಲದ ಬೆಳ್ಳಕ್ಕಿಯ ಬ್ಯೂಟಿ

ಮಕ್ಕಳಿಗೆ ಇಂಗ್ಲಿಷ್‌ನಲ್ಲಿ ನೂರಾರು ಚಿತ್ರಕಥೆ ಪುಸ್ತಕಗಳು ಸಿಗುತ್ತವೆ. ಆದರೆ ಈ ರೀತಿಯ ಕೃತಿಗಳು ಕನ್ನಡದಲ್ಲಿ ಪ್ರಕಟವಾಗುವುದು ಕಡಿಮೆ. ಆ ಕೊರತೆ ನೀಗಿಸುವ ಕೃತಿ 'ಬ್ಯೂಟಿ ಬೆಳಕ್ಕಿ'. ಲಲಿತಾ ಕೆ.ಹೊಸಪ್ಯಾಟಿ ಬರೆದಿರುವ ಸರಳ ಕಥೆಗಳಿಗೆ ಸಂತೋಷ್ ಸಸಿಹಿತ್ಲು ಸೊಗಸಾದ ಚಿತ್ರಗಳನ್ನು ರಚಿಸಿದ್ದಾರೆ. ಪುಸ್ತಕದ ಮುದ್ರಣ ಗುಣಮಟ್ಟವೂ ಸೊಗಸಾಗಿದ್ದು, ಇಲ್ಲಿನ ಪಕ್ಷಿ, ಪ್ರಾಣಿ, ಪರಿಸರದ ಚಿತ್ರಗಳು ಪುಟ್ಟ ಮಕ್ಕಳನ್ನು ಆಕರ್ಷಿಸುವುದರಲ್ಲಿ ಯಾವುದೇ ಅನುಮಾನವಿಲ್ಲ.

50 ಪುಟಗಳ ಪುಟ್ಟ ಪುಸ್ತಕದಲ್ಲಿ ಒಟ್ಟು ಹತ್ತು ಕಥೆಗಳಿವೆ. ಎಲ್ಲವೂ ಪ್ರಾಣಿ, ಪಕ್ಷಿ, ಮರಗಿಡಗಳಿಗೆ ಸಂಬಂಧಿಸಿದವು. ಮೊದಲ ಕಥೆ 'ಮರ ಅಲುಗಾಡಿಸಿದ ಇರುವೆ' ಶೀರ್ಷಿಕೆಯೇ ಹೇಳುವಂತೆ ಅಹಂಕಾರದಿಂದ ಬೀಗುತ್ತಿದ್ದ ದೈತ್ಯ ಮರದ ಬುಡವನ್ನು ಅಲುಗಾಡಿಸುವ ಪುಟ್ಟ ಇರುವೆಯ ಕಥೆ. ಲೇಖಕಿ ಮಕ್ಕಳಿಗೆ ಅರ್ಥವಾಗುವಷ್ಟು ಸರಳ ಭಾಷೆಯಲ್ಲಿ ಕಥೆಯನ್ನು ನಿರೂಪಿಸಿದ್ದಾರೆ. ಬದುಕಿನಲ್ಲಿ ಯಾರನ್ನೂ ಕಡೆಗಣಿಸಬಾರದೆಂಬ ಈ ಕಥೆಯ ನೀತಿಯೂ ಸೊಗಸಾಗಿದೆ.

'ಇಲ್ಲಿನ ಕಥೆಗಳು ಚಿಕ್ಕವು, ಪುಟಾಣಿ ಮಗುವಿನ ಹಾಗಿರುವವು. ತಟಕ್ಕನೆ ಮುಗಿದು ಹೋಗುವಂಥವು. ಅವು ಪುಟ್ಟ ಮುತ್ತುಗಳ ಹಾಗೆ ತಮ್ಮೊಡಲಲ್ಲಿ ಅಪಾರ ಪ್ರೀತಿ, ಕಾಳಜಿಯನ್ನು ಬಚ್ಚಿಟ್ಟುಕೊಂಡಿರುವುವು. ವೃತ್ತಿಯಿಂದ ಶಿಕ್ಷಕಿಯಾಗಿರುವ ಲೇಖಕಿ ಮಕ್ಕಳಿಗೆ ಕಿವಿಮಾತು ಹೇಳಿರುವಂತಿದೆ' ಎಂದು ಬೆನ್ನುಡಿಯಲ್ಲಿ ಕೃತಿಯ ಕುರಿತು ಬರೆದಿದ್ದಾರೆ.

ಪುಸ್ತಕದ ಶೀರ್ಷಿಕೆಯ ಕಥೆ 'ಬ್ಯೂಟಿ ಬೆಳ್ಳಕ್ಕಿ' ರೆಕ್ಕೆಯಿಲ್ಲದ ಬೆಳ್ಳಕ್ಕಿಯ ಬದುಕಿನ ಕುರಿತಾದ ಕಥೆ. ಇದಕ್ಕೆ ಸಂತೋಷ್ ಸಸಿಹಿತ್ಲು ಬಿಡಿಸಿರುವ ಲಿಪ್‌ಸ್ಟಿಕ್ ಹಚ್ಚಿಕೊಂಡ ಗಿಳಿ, ಸೌಂದರ್ಯ ಸ್ಪರ್ಧೆಗೆ ಸಿದ್ಧವಾಗಿ ಬಂದ ಕಾಗೆ, ಮೇಕಪ್‌ನಲ್ಲಿ ಮಿಂಚುತ್ತಿರುವ ನವಿಲು...ಚಿತ್ರಗಳು ಒಂದೇ ನೋಟದಲ್ಲಿ ಮಕ್ಕಳಿಗೆ ಮುದ ನೀಡುವಂತಿವೆ. ಒಂದು ತಾಸಿನಲ್ಲಿ ಓದಿ ಮುಗಿಸಬಹುದಾದಷ್ಟು ಈ ಕೃತಿ ಪುಟ್ಟ ಮಕ್ಕಳಿಗೆ ಮುದ ನೀಡುವುದರೊಂದಿಗೆ ಸರಳ ಕನ್ನಡ ಕಲಿಕೆಯ ಸಾಧನವೂ ಹೌದು.

ಫೆಂಟಾಬ್ಲೆಸ್ ಮತ್ತು ಪ್ರಿಯಾ ಸ್ಕೂ ಟರ್

ಮರ ಮತ್ತು ತಗಡಿನಿಂದ ಮಾಡಿದ ಇಂಗ್ಲೆಂಡ್ ಮೂಲದ ಮಾರಿಸ್ 15(6) ಕಾರು

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ

ಹೂಕಣಿವೆಯ ಚಂದುಳ್ಳಿ ಚೆಲುವೆಯರು!

ರಹಮತ್ ತರೀಕೆರೆ



ಪ್ರವಾಸ

'ಗಿರಿಜಾ ಕಲ್ಯಾಣ' ಹುಟ್ಟಿದ ಹಂಪಿ ಸೀಮೆಯಿಂದ, ಶಿವನನ್ನು ವರಿಸಲು ಪಾರ್ವತಿಯೇ ಬೆಳೆಸಿದ ಹೂದೋಟದಂತಿರುವ ಪುಷ್ಪಕಣಿವೆಗೆ ಹೋಗಬೇಕೆಂದು ಬಹಳ ಕಾಲದಿಂದ ತಪಿಸುತ್ತಿದ್ದೆ. ಅನೇಕ ಸಲ ಹಿಮಾಲಯದ ಚಾರಣಕ್ಕೆ ಹೋದರೂ ಅದೆಂತೊ ಇದು ತಪ್ಪಿಸಿಕೊಳ್ಳುತಿತ್ತು. ನಂದಾದೇವಿ ರಾಷ್ಟ್ರೀಯ ಉದ್ಯಾನದಲ್ಲಿರುವ ಈ ಕಣಿವೆಯ ದರ್ಶನವಿಲ್ಲದೆ ಹಿಮಾಲಯ ಚಾರಣ-ಯಾತ್ರೆ ಅಪೂರ್ಣ. 12 ವರ್ಷಗಳಿಗೊಮ್ಮೆ ಪಶ್ಚಿಮಘಟ್ಟದಲ್ಲಿ ಮೈದೋರುವ ನೀಲಕುರಿಂಜಿ ತಾನೊಂದೇ ಮೆರೆಯುತ್ತದೆ. ಆದರೆ ಪುಷ್ಪಕಣಿವೆಯಲ್ಲಿ ಅರಳುವುದು 600ಕ್ಕೂ ಹೆಚ್ಚು ಪ್ರಭೇದದ ಹೂವು. ಆಗಸ್ಟ್ ಮೊದಲ ವಾರದಲ್ಲಿ ಬಹುಪಾಲು ಹೂ ಅರಳುತ್ತದೆ. ತುಸು ಮುಂಚೆ ಹೋದರೆ ಇನ್ನೂ ಮೊಗ್ಗು; ಕೊಂಚ ತಳುವಿದರೆ ಹೂವುದುರಿದ ಗಿಡಗಳ ಕಂಕಾಲ ದರ್ಶನ.

ವರ್ಷದಲ್ಲಿ ಹದಿನೈದು ದಿನ ವರ್ಣರಂಜಿತ ಸ್ವರ್ಗವನ್ನು ಸೃಷ್ಟಿಸುವ ಈ ಕೋಮಲ ಹೂಗಳಿರುವುದು ಅತ್ಯಂತ ಕಠಿಣ ಹವಾಮಾನದ ಪರ್ವತಗಳ ಮೇಲೆ. 12,000 ಅಡಿ ಎತ್ತರದಲ್ಲಿ. ಅಲ್ಲಿಗೆ ಮುಟ್ಟುವುದೂ ಸರಳವಲ್ಲ. ಬದರಿ ಹಾದಿಯಲ್ಲಿರುವ ಗೋವಿಂದಘಾಟಿನಲ್ಲಿ ಇಳಿದು, 14 ಕಿ.ಮೀ ಗಂಗಾರಿಯಾದ ಬೇಸ್‌ಕ್ಯಾಂಪಿಗೆ ನಡೆಯಬೇಕು. ಅಲ್ಲಿಂದ ಮತ್ತೆ 4 ಕಿ.ಮೀ ಕಠಿಣ ನಡಿಗೆ. ಆದರೆ ಈ ಕಠಿಣಹಾದಿ ಭೋರ್ಗರೆವ ನದಿ ಮತ್ತು ಜಲಪಾತಗಳ ನಡುವೆ, ತೊಗಟೆ ಸುಲಿದುಕೊಂಡು ನಿಂತ ಭೂರ್ಜವೃಕ್ಷದ ಕಾಡಿನೊಳಗೆ ಹಾಯುತ್ತದೆ. ಒಂದು ಬಗೆಯ ಆಹ್ಲಾದಕರ ಕಷ್ಟದ ಚಾರಣ. ಹಾದಿಯುದ್ದಕ್ಕೂ ಹೂಗಿಡ ಗಾಳಿಗೆ ತಲೆಯಲುಗಿಸಿ ಸ್ವಾಗತಿಸುತ್ತವೆ. ನಾನು ಅವುಗಳಲ್ಲಿ ತಲ್ಲೀನನಾದಾಗೆಲ್ಲ 'ಕಣಿವೆಯಲ್ಲಿ ಅಪಾರ ಹೂಗಳಿವೆ. ಮಧ್ಯಾಹ್ನದೊಳಗೆ ಹೂವಿನ ಕಣಿವೆಯನ್ನು ತೊರೆಯಬೇಕು. ಹಿಮಪಾತ ಇಲ್ಲವೆ ಮಳೆಗೆ ಸಿಗಬಹುದು' ಎಂದು ಗೈಡು ಅವಸರಿಸುತ್ತಿದ್ದನು.

ಹಿಮಾಲಯದ ಎಲ್ಲ ಚಾರಣಗಳಲ್ಲೂ ಹೂವು ಕಾಣಿಸುತ್ತವೆ. ಯಾರೊ ಮರೆತು ಹೂಗುಚ್ಛ ಬಿಟ್ಟುಹೋದಂತಿದ್ದ ಅವುಗಳ ಪಟಗಳನ್ನು ಹಿಂದೆ ತೆಗೆದಿದ್ದೆ. ಅದರಲ್ಲೂ ಅಡವಿಗೆ ಬೆಂಕಿಬಿದ್ದಂತೆ ಅರಳುವ ಕೆಂಪು ಬುರಾಂಶ್, ನಮ್ಮ ಮುತ್ತುಗವನ್ನು ನೆನಪಿಸುತ್ತದೆ. ಆದರೆ ಹೂಗಣಿವೆಯ ಪರಿಯೇ ಬೇರೆ. ಇಲ್ಲಿ ಹಿಮಾಲಯ ಸೀಮೆಯ ಸಮಸ್ತ ಹೂಗಳು ಮಾತಾಡಿಕೊಂಡು ಪರಿಸೆ ಸೇರುತ್ತವೆ. ಸುತ್ತ ಗೋಡೆಗಟ್ಟಿದಂತೆ ಪರ್ವತಗಳು. ನಡುವೆ ತೊಟ್ಟಲಂತಿರುವ ಪಚ್ಚೆಯ ಹಾಸಿಗೆಯಂತಿರುವ ಹುಲ್ಲುಗಾವಲು. ಅದರೊಳಗೆ ಲಕ್ಷಲಕ್ಷ ಹೂಗಳ ದರಬಾರು.

ಹಾದಿಯಲ್ಲಿ ಅಡ್ಡಸಿಗುವ ಪರ್ವತವೊಂದನ್ನು ಹತ್ತಿ ಇಳುಕಲನ್ನು ಇಳಿಯುತ್ತಿದ್ದಂತೆ ಚಕ್ಕನೆ ವಿಶಾಲ ಹೂಗಣಿವೆ ಮೈದೋರುತ್ತದೆ. ಆಗಸದಿಂದ ಹಸಿರುಹುಲ್ಲಿನ ಮೇಲೆ ಸುರಿದ ಕೆಂಪು ಹಳದಿ ನೀಲಿ ಬಿಳಿ ಅರಿಸಿಣ ರಕ್ತದ ಹನಿಗಳೇ ಅರಳಿದಂತೆ. ಇವನ್ನು 'ವಜ್ರಮುಖವ ಚಾಚಿ ಮುತ್ತುವ' ಸುತ್ತುವ ಸಹಸ್ರಾರು ಜೇನ್ನೊಣಗಳು. (ಹಾದಿಯಲ್ಲಿ ಪರ್ವತಗಳ ಕಲ್ಲುಳಾವಣಿಗಳಲ್ಲಿ ಕಂಡ ದೊಡ್ಡದೊಡ್ಡ ಜೇನುಹುಟ್ಟುಗಳು ಇವುಗಳ ಕಾಮಗಾರಿಯ ಫಲಗಳು). ಪರ್ವತ ಹುಲ್ಲು ಹೂವು ದುಂಬಿ ಹೊಳೆ ಹಿಮಪಾತ ಚಳಿ ಬಿಸಿಲು ಮಳೆಗಳ ಪರಸ್ಪರ ನಂಟಿನ ಬಹುತ್ವ.

ಹೂಗಣಿವೆಯಲ್ಲಿ ಹಿಮಾಲಯದ ವಿಶಿಷ್ಟ ಹೂವಾದ ಬ್ರಹ್ಮಕಮಲವಿಲ್ಲ. ಅದಕ್ಕಾಗಿ ಸನಿಹದಲ್ಲಿರುವ 15,000 ಅಡಿ ಎತ್ತರವಿರುವ ಹೇಮಕುಂಡ ಸಾಹೇಬ್ ಗುರುದ್ವಾರಕ್ಕೆ ಹೋಗಬೇಕು. ಶಿಖರಗಳ ತುಂಬ ಹೊಂಗಳಸ ಊರಿದಂತೆ ತಿಳಿಹಳದಿ ಕಮಲ. ಇನ್ನೂ ಪಕಳೆರೆಕ್ಕೆ ಬಿಚ್ಚುತ್ತಿರುವ ದೊಡ್ಡ ಕೋಸುಗಡ್ಡೆ; ಬಾಕುಗಳಂತೆ ಸೆಟೆದ ಗರಗಸದ ಮುಳ್ಳಿನ ಹಸಿರೆಲೆಗಳ ನಡುವೆ ಇಟ್ಟ ಆಕಾಶಬುಟ್ಟಿ. ನಿಂತು ಆಸ್ವಾದಿಸಬೇಕೆಂದರೆ ಮನುಷ್ಯ ಮಾತ್ರರಾದವರು ಸಹಿಸಲಾಗದ ಭೀಕರ ಚಳಿ. ಸದಾ ಮಂಜು. ಸಂಜೆ ಹಿಮಪಾತ. ತಾಪಮಾನ ಶೂನ್ಯಕ್ಕೆ ಇಳಿಯುತ್ತದೆ. ಅಲ್ಲೂ ಮಧ್ಯಾಹ್ನದ ಹೊತ್ತಿಗೆ ಚಾರಣಿಗರು ಯಾತ್ರಿಗರು ಪರ್ವತವಿಳಿದು ಕೆಳಗೆ ಹೋಗಲೇಬೇಕು.

ಹೇಮಕುಂಡದಲ್ಲಿ ಆಸುಪಾಸಿನ ಹಿಮಗಲ್ಲುಗಳು ಜಿನುಗಿ ಜಲಪಾತಗಳಾಗಿ ಧುಮುಕಿ ನಿರ್ಮಾಣವಾದ ಬೆಳ್ಳಿಯ ಅಚ್ಚೋದ ಸರೋವರವಿದೆ. ಅದು ತುಂಬಿ ನೀರು ಹೊರಚೆಲ್ಲಿ ಹೊಳೆಯಾಗಿ ಕೆಳಕ್ಕೆ ಇಳಿಯುತ್ತದೆ- ದೂರದ ಬಂಗಾಳ ಕೊಲ್ಲಿಯ ಸಹಸ್ರಾರು ಕಿಲೊಮೀಟರ್ ಪಯಣಕ್ಕೆ.

ಹಿಮಾಲಯವೆಂದರೆ ಹಿಮಪರ್ವತ ಶಿಖರ ಕಾಡು ನದಿಗಳ ಸಂಗಮವೆಂದೇ ತಿಳಿವಳಿಕೆ. ಆದರೆ ಗಗನಚುಂಬಿ ಶಿಖರಗಳ ಜತೆ ನೆಲಚುಂಬಿ ಹೂಲೋಕವೂ ಇಲ್ಲಿದೆ. ಇವುಗಳ ಚೆಲುವನ್ನು ಕಾಣಲು, ಆಗಸದೊಂದಿಗೆ ಆಟವಾಡುವ ಶಿಖರಗಳನ್ನೂ ದೇವದಾರು ವೃಕ್ಷಗಳನ್ನೂ ಕತ್ತೆತ್ತಿ ನೋಡುವಂತೆ ನಡೆಹಾದಿಯ ಆಜುಬಾಜಿನ ನೆಲವನ್ನೂ ಗಮನಿಸಬೇಕು. ಹಿಮಾಲಯ ಭವ್ಯವೆನಿಸುವುದು ತನ್ನ ಧೀರೋದಾತ್ತ ಶಿಖರಗಳಿಂದ ಮಾತ್ರವಲ್ಲ, ತನ್ನಡಿಯ ಹೂವು ಹುಲ್ಲುಗಳಿಂದ. ಹಿಮಾಲಯದ ಬೃಹತ್ತಿನ ಅಹಮಿಕೆಗೆ ತಿವಿಯಲೆಂದೊ ಶಿಖರಗಳ ಏಕತಾನತೆ ಮುರಿಯಲೆಂದೊ ಅಥವಾ ಸಿಂಗರಿಸಲೆಂದೊ ನಿಸರ್ಗವೇ ಸೃಷ್ಟಿಸಿರುವ ಬಣ್ಣಗಳ ಜಗತ್ತಿದು. ಈ ಜಗತ್ತಿನ ಅಧ್ಯಯನಕ್ಕಾಗಿ ಬಂದು, ಕಾಲುಜಾರಿ ಬಿದ್ದು ನಿಧನಳಾದ ಒಬ್ಬ ಸಸ್ಯವಿಜ್ಞಾನಿಯ ಗೋರಿಯೊಂದು ಅಲ್ಲಿದೆ- ಪುಷ್ಪಪ್ರೇಮವೂ ದುರಂತ ಮರಣವೂ ಒಟ್ಟಿಗೆ ಸಂಭವಿಸಿದಂತೆ. ಆಕೆಯ ಸಮಾಧಿ ಹೂವಿನ ಋತುಮಾನದಲ್ಲಿ ನಿಸರ್ಗವೇ ಸಲ್ಲಿಸುವ ಪುಷ್ಪಾಂಜಲಿಯಂತೆ ಬಿದ್ದಹೂವುಗಳಿಂದ ಮುಚ್ಚಿ ಹೋಗುತ್ತದೆ.

ಹೂವುಗಳೆಲ್ಲ ಉದುರಿದ ಬಳಿಕ ಕಣಿವೆ ಹಿಮದ ಸಮಾಧಿಯಲ್ಲಿ ಧ್ಯಾನಕ್ಕೆ ಸಲ್ಲುತ್ತದೆ. ಮತ್ತೆ ಬೇಸಿಗೆಯ ಬಿಸಿಲಿಗೆ ಹಿಮಕರಗಿ, ಕೊಚ್ಚಿಕೆಸರಿನ ನೆಲದೊಳಗಿಂದ ಉದುರಿದ ಬೀಜಗಳು ಅಂಕುರವಾಗಿ ಗಿಡವಾಗಿ ಹೂತಳೆಯುತ್ತವೆ. ಇದೊಂದು ಜೀವಸಾವುಗಳ ಕಟುಮಧುರ ಆವರ್ತನ.

ಹೂಕಣಿವೆಯಲ್ಲಿ ಬಣ್ಣವೇ ಹಸಿರಿನ ಮೇಲೆ ಚೆಲ್ಲಿದಂತೆ, ಹಿಮಹೊದ್ದು ನಲಿಯುವ ಪುಟ್ಟ ಹೂವುಗಳ ಲೋಕ... ಚಿತ್ರಗಳು: ರಹಮತ್ ತರೀಕೆರೆ, ಸತ್ಯಜಿತ್ ದಂಡಗಿ, ಕಲೀಮ್ ಉಲ್ಲಾ

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಕ್ಕ ಚಕ್ಕ ಶೇಕ್ಸ್‌ಪಿಯರ್ ಕಥೆಯ ಜೋಕಾಲಿಯಲ್ಲಿ ಜೋಕೆ!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ಮತ್ತು ಆತನ ಸ್ನೇಹಿತ ರವಿ ಜೋಕಾಲಿಯಲ್ಲಿ ಆಟವಾಡುತ್ತಿದ್ದರು. ಗುಂಡ ಅದರಲ್ಲಿ ಕೂತಿದ್ದ, ರವಿ ಜೋರಾಗಿ ಜೋಕಾಲಿಯನ್ನು ದೂಡುತ್ತಿದ್ದ. ಗುಂಡ ಖುಷಿಯಲ್ಲಿ 'ಇನ್ನೂ ಜೋರಾಗಿ..' ಎಂದು ಹುರಿದುಂಬಿಸುತ್ತಿದ್ದ. ಹೀಗೆ ದೂಡುತ್ತಾ..ದೂಡುತ್ತಾ... ರವಿ ತನ್ನೆಲ್ಲಾ ಬಲವನ್ನು ಹಾಕಿ ಜೋರಾಗಿ ತಳ್ಳಿದ. ಆ ರಭಸಕ್ಕೆ ಗುಂಡ ಜೋಕಾಲಿಯಿಂದಲೇ ದೂರಕ್ಕೆ ಎಸೆಯಲ್ಪಟ್ಟ!

ಜಾಣಪದ ಆಟ

ಇಲ್ಲಿ ಕೊಟ್ಟಿರುವ 'ವಸ' ಪದಕ್ಕೆ ಹಿಂದೆ ಒಂದಕ್ಷರ ಸೇರಿಸಿ 3 ಅಕ್ಷರದ ಅರ್ಥಬದ್ಧ ಪದ ರಚಿಸಿ

1		ವ	ಸ
2		ವ	ಸ
3		ವ	ಸ
4		ವ	ಸ
5		ವ	ಸ
6		ವ	ಸ
7		ವ	ಸ
8		ವ	ಸ
9		ವ	ಸ
10		ವ	ಸ

ಗಾದೆ ನಿನಗೆಷ್ಟು ಗೊತ್ತು?

ಇಲ್ಲಿ ಕೊಟ್ಟಿರುವ ಅಪೂರ್ಣ ಗಾದೆ ಮಾತುಗಳನ್ನು ಕೆಳಗಿನ ಪಟ್ಟಿಯಲ್ಲಿನ ಸೂಕ್ತ ಶಬ್ದದಿಂದ ಬಿಟ್ಟ ಸ್ಥಳ ತುಂಬಿ ಪೂರ್ಣಗೊಳಿಸಿ

1.ಮಗ	2.ಅಚ್ಚೇರು	3.ಲತ್ತೆ	4.ಅಂಬಲಿ
5.ಆನೆ	6.ನಾಲಿಗೆ	7.ಅಕ್ಕ	8.ನದಿ
	9.ಜಾಣ	10.ಹಚಡ	

1. ಆಕಳ ಹೊಟ್ಟೇಲಿ_____ಬಂಗಾರ
2. _____ಮೂಲ, ಋಷಿ ಮೂಲ ಕೇಳಬಾರದು
3. _____ಸತ್ತರೆ ಅಮಾವಾಸ್ಯೆ ನಿಲ್ಲದು
4. ಎಳೆ ಸಿಕ್ರ_____ನುಂಗಾವ
5. _____ಹೋದದ್ದೇ ದಾರಿ
6. ಮಾತಿಗೆ ಸೋತವನೇ_____
7. ಅರಮನೆಯ ಅಮೃತಕ್ಕಿಂತಲೂ ನೆರೆ ಮನೆಯ _____ ಲೇಸು
8. _____ಒಳ್ಳೇದಾದರೆ ನಾಡೆಲ್ಲಾ ಒಳ್ಳೇದು
9. ಜಾಣನಿಗೆ ಮಾತಿನ ಪೆಟ್ಟು, ಕೋಣನಿಗೆ_____ಪೆಟ್ಟು
10. ಮಳೆ ಬಂದ್ರ ಕೇಡಲ್ಲ, ____ಉಂಡ್ರ ಕೇಡಲ್ಲ



ಪ್ರಾಸಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ			
ದು	ದಿ	ಹ	ಕೌ
ಜಂ	ಕ	ಹೆ	ಮೊ
ಹೊ	ಸಂ	ಗೌ	ದ

1) ವ ಸ / ವ ಸ

2) ರ ವ / ರ ವ

3) ಡಿ ಮೆ / ಡಿ ಮೆ

4) ಗ ಮ / ಗ ಮ

5) ಲ ಸು / ಲ ಸು

6) ಸ ರು / ಸ ರು

ಗಣಿತದಲ್ಲಿ ಗರ್ದಿ ಗಮ್ಮತ್ತು

ಹೀಗೆಂದೂ ಮಾಡಬೇಡಿ!

ನೀವು ಹೀಗೆ ಮಾಡಬೇಡಿ. ಏಕೆಂದರೆ ಇಲ್ಲಿ ಉತ್ತರ ಸರಿ ಇದೆ. ಆದರೆ ಲೆಕ್ಕ ಮಾಡುವ ಕ್ರಮ ತಪ್ಪಿದೆ.

1. $\frac{26}{65} = \frac{2}{5}$

2. $\frac{19}{95} = \frac{1}{5}$

3. $\frac{16}{64} = \frac{1}{4}$

4. $\frac{166}{664} = \frac{1}{4}$

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದ ಬಂಧ: 1.ಕುಣಿತ-ಗಣಿತ 2.ಉಸಿರು-ಹಸಿರು 3.ಸಂಬಳ-ಕಂಬಳ 4.ಶಬರಿ-ಡಬರಿ 5.ಅಮರ-ಸಮರ 6. ಸಲಿಗೆ-ಸುಲಿಗೆ

ಮೋಜಿನ ಇಂಗ್ಲಿಷ್: BACK, DUCK, HACK, JACK, KICK, LOCK, PICK, ROCK, SICK, TICK

ಜಾಣಪದ ಆಟ: 1.ಅಂತರ 2.ಅಂಬಾರಿ 3.ಅಂಬರ 4.ಅಂಕುಶ 5.ಅಂಕುರ 6.ಅಂಬಲಿ 7.ಅಂಕಣ 8.ಅಂಗಣ 9.ಅಂಜನ 10.ಅಂಗಡಿ 11.ಸಂಗತಿ 12.ಸಂಕಷ್ಟ 13.ಸಂಪ್ರತಿ 14.ಸಂಬಂಧ 15.ಸಂಕ್ರಾಂತಿ 16.ಸಂಗಡ 17.ಸಂಯಮ 18.ಸಂಹಾರ 19.ಸಂಸಾರ 20.ಸಂತಾಪ 21.ಕಂದರ 22.ಕಂಕಣ 23.ಗಂಗಾಳ 24.ಜಂಜಡ 25.ಜಂಗುಳಿ 26.ಜಂಗಮ 27.ತಂಗಳು 28.ದಂಪತಿ 29.ನಂದನ 30.ಪಂಜರ 31.ಪಂಗಡ 32.ಇಂಚರ 33.ಬಂಧನ 34.ಮಂದಾರ 35.ಉಂಬಳಿ 36.ಕಂಬಳಿ 37.ಶಂಕರ 38.ಶಂಕರಿ 39.ಹಂದರ 40.ಹಂಬಲ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಫಹೀಮ್
ಹಾವೇರಿ

ಅಭಿನಂದನ್ ಎಂ.
ಟಿ.ನರಸೀಪುರ

ಎಚ್.ಎಸ್.ಸ್ವರೂಪ
ಬೆಂಗಳೂರು

ಜೇಡನ್ ನಿಹಿತ್
ಶಿವಮೊಗ್ಗ

ಪ್ರಾರ್ಥನಾ ಆರ್. ಟಿ.
ಕೊಂಡ್ಲಹಳ್ಳಿ

ದಿಶಾ ಆರ್.ಜೆ.
ಉತ್ತರ ಕನ್ನಡ

ಪಾಕ್‌ನಲ್ಲಿ ಜೀವನ ವೆಚ್ಚ ದುಬಾರಿ: ಎಡಿಬಿ ವರದಿ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದಲ್ಲಿ ಹಣದುಬ್ಬರವು ಏರಿಕೆಯಾಗಿದೆ. ಏಷ್ಯಾ ಖಂಡದ ಇತರೆ ರಾಷ್ಟ್ರಗಳಿಗೆ ಹೋಲಿಸಿದರೆ ಅಲ್ಲಿನ ಜನರ ಜೀವನ ನಿರ್ವಹಣೆ ವೆಚ್ಚವು ದುಬಾರಿಯಾಗಿದೆ ಎಂದು ಏಷ್ಯಾ ಅಭಿವೃದ್ಧಿ ಬ್ಯಾಂಕ್‌ನ (ಎಡಿಬಿ) ವರದಿ ತಿಳಿಸಿದೆ.

2024–25ನೇ ಆರ್ಥಿಕ ವರ್ಷದಲ್ಲಿ ಹಣದುಬ್ಬರವು ಶೇ 25ರಷ್ಟು ಇರಲಿದೆ. ಇಡೀ ಏಷ್ಯಾದಲ್ಲಿಯೇ ಪಾಕಿಸ್ತಾನದಲ್ಲಿ ವಸತಿ, ತೆರಿಗೆ, ಆರೋಗ್ಯ, ಆಹಾರದ ನಿರ್ವಹಣೆ ವೆಚ್ಚವು ಹೆಚ್ಚಿದೆ ಎಂದು ತಿಳಿಸಿದೆ.

ಜಿಡಿಪಿ ಬೆಳವಣಿಗೆಯು ಶೇ 1.9ರಷ್ಟು ಪ್ರಗತಿ ಕಾಣಲಿದೆ. ಇದು ಮ್ಯಾನ್ಮಾರ್, ಅಜರ್ಬೈಜಾನ್ ಹಾಗೂ ನೌರು ದೇಶದ ಆರ್ಥಿಕತೆ ಬೆಳವಣಿಗೆಗಿಂತಲೂ ಕಡಿಮೆ ಇದೆ ಎಂದು ಹೇಳಿದೆ.

2025–26ನೇ ಆರ್ಥಿಕ ವರ್ಷದಲ್ಲಿ ಹಣದುಬ್ಬರವು ಶೇ 15ರಷ್ಟು ಇರಲಿದೆ. ಏಷ್ಯಾದ 46 ರಾಷ್ಟ್ರಗಳಿಂದಲೂ ಇದು ಹೆಚ್ಚಿದೆ. ಜಿಡಿಪಿ ಬೆಳವಣಿಗೆಯು ಶೇ 2.8ರಷ್ಟು ಪ್ರಗತಿ ಕಾಣಲಿದೆ ಎಂದು ಎಡಿಬಿ ಮುನ್ನೋಟವನ್ನು ಉಲ್ಲೇಖಿಸಿದ ಎಕ್ಸ್‌ಪ್ರೆಸ್ ಟ್ರಿಬ್ಯುನಲ್ ಪತ್ರಿಕೆ ವರದಿ ಮಾಡಿದೆ. ಕೇಂದ್ರೀಯ ಬ್ಯಾಂಕ್ ಆದ ಸ್ಟೇಟ್ ಬ್ಯಾಂಕ್ ಆಫ್ ಪಾಕಿಸ್ತಾನವು 2024–25ನೇ ಹಣಕಾಸು ವರ್ಷದಲ್ಲಿ ಹಣದುಬ್ಬರವು ಶೇ 21ರಷ್ಟು ಇರಲಿದೆ ಎಂದು ಅಂದಾಜಿಸಿದೆ.

ಹಟ್ಟಿ ಚಿನ್ನದ ಗಣಿ ಕಂಪನಿ: ಶೇ 90ರಷ್ಟು ಸಾಧನೆ

1,553 ಕೆ.ಜಿ ಚಿನ್ನ ಉತ್ಪಾದನೆ

ಪ್ರಜಾವಾಣಿ ವಾರ್ತೆ

ಹಟ್ಟಿ ಚಿನ್ನದ ಗಣಿ (ರಾಯಚೂರು ಜಿಲ್ಲೆ): ಸರ್ಕಾರಿ ಸ್ವಾಮ್ಯದ ಹಟ್ಟಿ ಚಿನ್ನದ ಗಣಿ ಕಂಪನಿಯು 2023–24ನೇ ಆರ್ಥಿಕ ವರ್ಷದಲ್ಲಿ ಒಟ್ಟು 1,553 ಕೆ.ಜಿ ಚಿನ್ನ ಉತ್ಪಾದಿಸುವ ಮೂಲಕ ಶೇ 90ರಷ್ಟು ಗುರಿ ಸಾಧಿಸಿದೆ.

ಕಳೆದ ಆರ್ಥಿಕ ವರ್ಷದಲ್ಲಿ 7.51 ಲಕ್ಷ ಟನ್ ಅದಿರು ತೆಗೆದು ಸಂಸ್ಕರಿಸುವ ಗುರಿ ಹೊಂದಿತ್ತು. ಒಟ್ಟು 7.18 ಲಕ್ಷ ಟನ್ ಅದಿರು ತೆಗೆದಿದೆ. ಒಟ್ಟು 1,750.578 ಕೆ.ಜಿ. ಚಿನ್ನ ಉತ್ಪಾದನೆಯ ಗುರಿ ಹೊಂದಿತ್ತು. ಒಟ್ಟು 1,553.110 ಕೆ.ಜಿ ಚಿನ್ನ ಉತ್ಪಾದಿಸಿದೆ.

2023ರ ಏಪ್ರಿಲ್‌ನಲ್ಲಿ 98.846 ಕೆ.ಜಿ, ಮೇ ತಿಂಗಳಿನಲ್ಲಿ 94.234 ಕೆ.ಜಿ, ಜೂನ್‌ನಲ್ಲಿ 98.542 ಕೆ.ಜಿ, ಜುಲೈನಲ್ಲಿ 99.642 ಕೆ.ಜಿ, ಆಗಸ್ಟ್‌ನಲ್ಲಿ 110.600 ಕೆ.ಜಿ, ಸೆಪ್ಟೆಂಬರ್‌ನಲ್ಲಿ 109.427 ಕೆ.ಜಿ, ಅಕ್ಟೋಬರ್‌ನಲ್ಲಿ 113.260 ಕೆ.ಜಿ, ನವೆಂಬರ್‌ನಲ್ಲಿ 83.273 ಕೆ.ಜಿ ಹಾಗೂ ಡಿಸೆಂಬರ್‌ನಲ್ಲಿ 118.372 ಕೆ.ಜಿ. ಚಿನ್ನ ಉತ್ಪಾದಿಸಲಾಗಿದೆ.



ಹಟ್ಟಿ ಚಿನ್ನದ ಗಣಿ ಕಂಪನಿಯ ಕಾರ್ಯಾಲಯ

ಪ್ರಸಕ್ತ ವರ್ಷದ ಜನವರಿಯಲ್ಲಿ 132.517 ಕೆ.ಜಿ, ಫೆಬ್ರುವರಿಯಲ್ಲಿ 253.171 ಕೆ.ಜಿ, ಮಾರ್ಚ್‌ನಲ್ಲಿ 241.221 ಕೆ.ಜಿ. ಚಿನ್ನ ಉತ್ಪಾದಿಸಲಾಗಿದೆ ಎಂದು ಆಡಳಿತ ಮಂಡಳಿಯು ತಿಳಿಸಿದೆ.

ಅಂಕಿ ಅಂಶ

1,750.578 ಕೆ.ಜಿ.
ಚಿನ್ನ ಉತ್ಪಾದನೆ ಗುರಿ

1,553.110 ಕೆ.ಜಿ
ಉತ್ಪಾದನೆಯಾದ ಒಟ್ಟು ಚಿನ್ನ

'ಅಧಿಕಾರಿಗಳು ಹಾಗೂ ಕಾರ್ಮಿಕರ ಪರಿಶ್ರಮದ ಫಲವಾಗಿ ಶೇ 90ರಷ್ಟು ಉತ್ಪಾದನೆ ಸಾಧ್ಯವಾಗಿದೆ. ನೌಕರ ವರ್ಗಕ್ಕೆ ಇನ್ನಷ್ಟು ಮೂಲ ಸೌಕರ್ಯ ಒದಗಿಸುವ ದಿಸೆಯಲ್ಲಿ ಚಿಂತನೆ ನಡೆದಿದೆ' ಎಂದು ಹಟ್ಟಿ ಚಿನ್ನದ ಗಣಿ ಕಂಪನಿಯ ಕಾರ್ಯ ನಿರ್ವಾಹಕ ನಿರ್ದೇಶಕ ಪ್ರಕಾಶ ಹೇಳಿದರು.

'ನಮ್ಮ ಯಾತ್ರಿ': ಕ್ಯಾಬ್ ಸೇವೆ ಶೀಘ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೊ ಚಾಲಕರೇ ಒಗ್ಗೂಡಿ ರಚಿಸಿಕೊಂಡಿರುವ ಆ್ಯಪ್ ಆಧಾರಿತ 'ನಮ್ಮ ಯಾತ್ರಿ'ಯು ಮುಂದಿನ ವಾರದಿಂದ ಪ್ರಾಯೋಗಿಕವಾಗಿ ಬೆಂಗಳೂರಿನಲ್ಲಿ ಕ್ಯಾಬ್ ಸೇವೆ ಆರಂಭಿಸಲಿದೆ.

ಈಗಾಗಲೇ, ಸೀಮಿತ ಬಳಕೆದಾರರಿಗೆ 'ನಮ್ಮ ಯಾತ್ರಿ' ಅಪ್ಲಿಕೇಶನ್‌ನಲ್ಲಿ ಕ್ಯಾಬ್ ಸೇವೆಯು ದೊರೆಯುತ್ತಿದೆ. ಅಪ್ಲಿಕೇಶನ್ ತೆರೆದ ತಕ್ಷಣವೇ ಮುಖಪುಟದಲ್ಲಿ ಟ್ಯಾಕ್ಸಿ ಸೇವೆಯ ಲಭ್ಯತೆ ಬಗ್ಗೆ ವಿವರಗಳು ಕಾಣಿಸಲಿವೆ. ಬೆಂಗಳೂರಿನಲ್ಲಿ ಪ್ರಯಾಣಿಕರಿಂದ ಉತ್ತಮ ಸ್ಪಂದನೆ ಸಿಕ್ಕಿದರೆ ಇತರೆ ನಗರಗಳಿಗೂ ಈ ಸೇವೆ ವಿಸ್ತರಿಸುವ ಸಾಧ್ಯತೆಯಿದೆ.

'ಸದ್ಯ ಶೂನ್ಯ ಶುಲ್ಕ ಆಧಾರಿತ ಆಟೊ ಸೇವೆ ಒದಗಿಸಲಾಗುತ್ತಿದೆ. ಮಂಗಳವಾರದಿಂದ ಅಧಿಕೃತವಾಗಿ ಕ್ಯಾಬ್ ಸೇವೆ ಆರಂಭಗೊಳ್ಳುವ ನಿರೀಕ್ಷೆಯಿದೆ. ಆ್ಯಪ್‌ನಲ್ಲಿ ಈ ಸೇವೆಯ ಸ್ಥಿರತೆ ಹಾಗೂ ಕ್ಯಾಬ್ ಸೇವೆಯ ಬೇಡಿಕೆ ಬಗ್ಗೆ ಪರೀಕ್ಷೆ ನಡೆಸಲಾಗುತ್ತಿದೆ. ಈಗಾಗಲೇ ಹಲವು ಗ್ರಾಹಕರು ಇದರ ಪ್ರಯೋಜನ ಪಡೆದಿದ್ದಾರೆ' ಎಂದು 'ಪ್ರಜಾವಾಣಿ'ಗೆ ಮೂಲಗಳು ತಿಳಿಸಿವೆ.

'ಶೂನ್ಯ ಶುಲ್ಕ ಮಾದರಿಯಡಿಯೇ ಕ್ಯಾಬ್ ಸೇವೆ ಆರಂಭಿಸಲಾಗುತ್ತಿದೆ. ಮಾರುಕಟ್ಟೆಯಲ್ಲಿರುವ ಇತರೇ ಕಂಪನಿಗಳ ಸೇವೆಗಿಂತ ಇದು ಭಿನ್ನವಾಗಿದೆ. ಈ ಕಂಪನಿಗಳಿಗೆ 'ನಮ್ಮ ಯಾತ್ರಿ' ಸೇವೆಯು ತೀವ್ರ ಸವಾಲೊಡ್ಡಲಿದೆ' ಎಂದು ತಿಳಿಸಿವೆ.

'ಕ್ಯಾಬ್ ಸೇವೆ ಆರಂಭಿಸುತ್ತಿರುವ ಬಗ್ಗೆ ಆಟೊ ರಿಕ್ಷಾ ಚಾಲಕರಿಂದ ಯಾವುದೇ ವಿರೋಧ ವ್ಯಕ್ತವಾಗಿಲ್ಲ. ಕ್ಯಾಬ್ ಚಾಲಕರೊಟ್ಟಿಗೆ ಗ್ರಾಹಕರಿಗೆ ಸೇವೆ ಒದಗಿಸಲು ಉತ್ಸುಕರಾಗಿದ್ದಾರೆ' ಎಂದು ಹೇಳಿವೆ.

ನಾನ್ ಎಸಿ ಹ್ಯಾಚ್‌ಬ್ಯಾಕ್ ಕಾರು, ಎಸಿ ಸೆಡಾನ್ ಕಾರು ಮತ್ತು ಎಸಿ ಎಸ್‌ಯುವಿ ಕಾರಿನ ಸೌಲಭ್ಯವಿದೆ. ಇತರೆ ಕ್ಯಾಬ್ ಸೇವೆಗೆ ಹೋಲಿಸಿದರೆ 'ನಮ್ಮ ಯಾತ್ರಿ' ಕ್ಯಾಬ್ ದರವು ₹10ರಿಂದ ₹13 ಕಡಿಮೆ ಇರಲಿದೆ ಎಂದು ಹೇಳಿವೆ.

ಎನ್.ಆರ್.ಪುರ ರಬ್ಬರ್
ಆರ್‌ಎಸ್‌ಎಸ್-4 ₹181
ಆರ್‌ಎಸ್‌ಎಸ್-5 ₹174.50
ಗುಡ್ ಲಾಟ್ (ಪ್ರತಿ ಕೆ.ಜಿಗೆ) ₹164.50

ರಾಮನಗರ ರೇಷ್ಮೆಗೂಡು
ಮಿಶ್ರತಳಿ (ಸಿ.ಬಿ) ₹175-418
ದ್ವಿತಳಿ (ಬಿ.ಎ) ₹225-585

ಎಸ್‌ಇಸಿಐ ಸೂಚಿಸಿರುವ ಮೊಟ್ಟೆ ದಾರಣೆ
ಬೆಂಗಳೂರು
100ಕ್ಕೆ ₹460
12 ಕ್ಕೆ ₹62
ಮೈಸೂರು
100ಕ್ಕೆ ₹460

ಹಿಗ್ಗಿದ ರಿಯಾಲ್ಟಿ ವಲಯ

ನವದೆಹಲಿ (ಪಿಟಿಐ): ದೇಶದಲ್ಲಿ ಕಳೆದ ಒಂದು ದಶಕದ ಅವಧಿಯಲ್ಲಿ ವಸತಿ ಮತ್ತು ವಾಣಿಜ್ಯ ಆಸ್ತಿಗಳಿಗೆ ಬೇಡಿಕೆ ಹೆಚ್ಚಳವಾಗಿದೆ. ಇದರಿಂದ ಭಾರತದ ರಿಯಲ್ ಎಸ್ಟೇಟ್ ವಲಯದ ಮಾರುಕಟ್ಟೆ ಗಾತ್ರವು ಶೇ 73ರಷ್ಟು ಹಿಗ್ಗಿದೆ ಎಂದು ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ) ಹಾಗೂ ಆಸ್ತಿ ಸಲಹಾ ಸಂಸ್ಥೆ ನೈಟ್ ಫ್ರ್ಯಾಂಕ್ ಇಂಡಿಯಾ ವರದಿ ಹೇಳಿದೆ.

2015ರಲ್ಲಿ ವಸತಿ, ವಾಣಿಜ್ಯ ಆಸ್ತಿ ವಿಭಾಗದಲ್ಲಿನ ನಿರ್ಮಾಣ ಮತ್ತು ಸೇವಾ ಮೊತ್ತವು ₹26.11 ಲಕ್ಷ ಕೋಟಿ ಇತ್ತು. ಈಗ ₹40.30 ಲಕ್ಷ ಕೋಟಿಗೆ ಮುಟ್ಟಿದೆ. ಮಾರುಕಟ್ಟೆ ಗಾತ್ರವು ಸಾಕಷ್ಟು ವಿಸ್ತರಿಸಿದೆ. ದೇಶದ ಆರ್ಥಿಕ ಬೆಳವಣಿಗೆಗೆ ಶೇ 7.3ರಷ್ಟು ಕೊಡುಗೆ ನೀಡುತ್ತಿದೆ ಎಂದು ಹೇಳಿದೆ.

2034ರ ವೇಳೆಗೆ ದೇಶದ ರಿಯಲ್ ಎಸ್ಟೇಟ್ ವಲಯದ ಮಾರುಕಟ್ಟೆ ಮೌಲ್ಯವು ₹122 ಲಕ್ಷ ಕೋಟಿಗೆ (1.48 ಟ್ರಿಲಿಯನ್ ಡಾಲರ್) ತಲುಪಲಿದೆ ಎಂದು ವರದಿಯು ಅಂದಾಜಿಸಿದೆ.

ಮುಖ್ಯಾಂಶಗಳು

- 250ಕ್ಕೂ ಹೆಚ್ಚು ಕೈಗಾರಿಕೆಗಳ ಜತೆ ರಿಯಾಲ್ಟಿ ಕ್ಷೇತ್ರದ ಬೆಸುಗೆ
- ದೇಶದ ಆರ್ಥಿಕತೆ ಬೆಳವಣಿಗೆಗೆ ಚಾಲಕ ಶಕ್ತಿ
- ವಸತಿ, ವಾಣಿಜ್ಯ ಆಸ್ತಿಗಳಿಗೆ ಬೇಡಿಕೆ ಹೆಚ್ಚಳ

ಈ ವಲಯವು 250ಕ್ಕೂ ಹೆಚ್ಚು ಪೂರಕ ಕೈಗಾರಿಕೆಗಳೊಂದಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಂಪರ್ಕ ಬೆಸೆದುಕೊಂಡಿದೆ. ಕೃಷಿ ವಲಯದ ಬಳಿಕ ಅತಿಹೆಚ್ಚು ಉದ್ಯೋಗಾವಕಾಶ ಸೃಷ್ಟಿಯಾಗುವ ವಲಯವೂ ಇದಾಗಿದೆ. ದೇಶದ ಒಟ್ಟು ಉದ್ಯೋಗಗಳಲ್ಲಿ ಈ ವಲಯದ ಪಾಲು ಶೇ 18ರಷ್ಟಿದೆ ಎಂದು ವಿವರಿಸಿದೆ.

ಮನೆಗಳು ಮತ್ತು ಕಚೇರಿ ಸ್ಥಳಕ್ಕೆ ಬೇಡಿಕೆ ಹೆಚ್ಚಿದೆ. ಆತಿಥ್ಯ ಹಾಗೂ ರಿಟೇಲ್ ವಲಯದ ವಿಸ್ತರಣೆಯಿಂದಾಗಿ ಮಾರುಕಟ್ಟೆ ಗಾತ್ರವು ಹೆಚ್ಚಳವಾಗಿದೆ ಎಂದು ತಿಳಿಸಿದೆ.

2034ರ ವೇಳೆಗೆ ವಸತಿ ಮಾರುಕಟ್ಟೆಯ ಮೌಲ್ಯವು ₹75.75 ಲಕ್ಷ ಕೋಟಿ ಮುಟ್ಟುವ ನಿರೀಕ್ಷೆಯಿದೆ. ಕಚೇರಿ ವಲಯವು ಮೌಲ್ಯವು ₹10.45 ಲಕ್ಷ ಕೋಟಿಯಷ್ಟು ಕೊಡುಗೆ ನೀಡುವ ಸಾಧ್ಯತೆಯಿದೆ ಎಂದು ಅಂದಾಜಿಸಿದೆ.

'ಮುಂದಿನ ದಶಕಗಳಲ್ಲಿ ಭಾರತದ ಆರ್ಥಿಕತೆಯು ನಿರೀಕ್ಷೆಗೂ ಮೀರಿ ಬೆಳೆಯಲಿದೆ. ಆರ್ಥಿಕತೆಯ ಈ ಚಾಲಕ ಶಕ್ತಿಗೆ ರಿಯಲ್ ಎಸ್ಟೇಟ್ ಕ್ಷೇತ್ರವು ಮೂಲಾಧಾರವಾಗಲಿದೆ' ಎಂದು ನೈಟ್ ಫ್ರ್ಯಾಂಕ್ ಇಂಡಿಯಾದ ಹಿರಿಯ ಕಾರ್ಯ ನಿರ್ವಾಹಕ (ಸಂಶೋಧನೆ, ಸಲಹೆ, ಮೂಲ ಸೌಕರ್ಯ ಮತ್ತು ಮೌಲ್ಯ ವಿಭಾಗ) ಗುಲಾಮ್ ಜಿಯಾ ಹೇಳಿದ್ದಾರೆ.

'ಮೇಕ್ ಇನ್ ಇಂಡಿಯಾ' ಕಾರ್ಯತಂತ್ರ, ಮನೆ ಖರೀದಿಗೆ ಗ್ರಾಹಕರು ಮಾಡುವ ವೆಚ್ಚವು ಭಾರತದ ಆರ್ಥಿಕತೆ ಮೌಲ್ಯ ವೃದ್ಧಿಗೆ ಸಹಕಾರಿಯಾಗಲಿದೆ ಎಂದು ತಿಳಿಸಿದ್ದಾರೆ.

ಮೂಟೆಗೆ ₹10 ಸಾವಿರ ದರ

ರೊಬಸ್ಟಾ ಕಾಫಿ ಧಾರಣೆ ಏರಿಕೆ: ಬೆಳೆಗಾರರಲ್ಲಿ ಹರ್ಷ

• ರವಿ ಕೆಳಂಗಡಿ

ಕಳಸ (ಚಿಕ್ಕಮಗಳೂರು ಜಿಲ್ಲೆ): ರೊಬಸ್ಟಾ ಕಾಫಿ ದರವು ಏರುಗತಿಯಲ್ಲೇ ಸಾಗಿದ್ದು, ಹೊಸ ದಾಖಲೆ ಬರೆಯುತ್ತಿದೆ. ಇದರಿಂದ ಬೆಳೆಗಾರರಲ್ಲಿ ಕಾಫಿ ಕೃಷಿ ಬಗ್ಗೆ ಹೊಸ ಹುಮ್ಮಸ್ಸು ಮೂಡಿದೆ.

ಶನಿವಾರ ಲಂಡನ್ ಮಾರುಕಟ್ಟೆಯಲ್ಲಿ ರೊಬಸ್ಟಾ ಕಾಫಿ ಬೆಲೆಯು ಪ್ರತಿ ಟನ್‌ಗೆ 3,852 ಡಾಲರ್‌ಗೆ ಏರಿಕೆ ಆಗಿದ್ದು, ಇದು ಸಾರ್ವಕಾಲಿಕ ಗರಿಷ್ಠ ಮಟ್ಟವಾಗಿದೆ. ನ್ಯೂಯಾರ್ಕ್ ಮಾರುಕಟ್ಟೆಯಲ್ಲಿ ಪ್ರತಿ ಪೌಂಡ್ ಅರೇಬಿಕಾ ಕಾಫಿ ಬೆಲೆ 277 ಸೆಂಟ್ಸ್‌ಗೆ ಏರಿಕೆ ಆಗಿದ್ದು, ಇದು ಕಳೆದ ಎಂಟು ತಿಂಗಳ ಗರಿಷ್ಠ ಮಟ್ಟವಾಗಿದೆ.

ರೊಬಸ್ಟಾ ಕಾಫಿ ದರ ಕೆ.ಜಿಗೆ ₹375ಕ್ಕೆ ಏರಿಕೆಯಾಗಿದ್ದರೆ, ಅರೇಬಿಕಾ ಕಾಫಿ ಕೂಡ ಕೆ.ಜಿಗೆ ₹320ಕ್ಕೆ ತಲುಪಿದೆ. ಹಾಗಾಗಿ, 50 ಕೆ.ಜಿ ತೂಕದ ರೊಬಸ್ಟಾ



ಕಾಫಿ ಚೀಲಕ್ಕೆ ₹10 ಸಾವಿರ ಧಾರಣೆ ಸಿಗುತ್ತಿದೆ.

ಮೂರು ವರ್ಷದ ಹಿಂದೆ ರೊಬಸ್ಟಾ ಕಾಫಿ ಮೂಟೆಗೆ ₹3,500 ದರ ಇತ್ತು. ನಮ್ಮ ಜೀವನದಲ್ಲೇ ಕಾಫಿಗೆ ಇಂತಹ ಬೆಲೆ ಬರುತ್ತದೆ ಎಂದು ಕನಸಲ್ಲೂ ಯೋಚಿಸಿರಲಿಲ್ಲ ಎಂದು ಬೆಳೆಗಾರರು ಅಚ್ಚರಿ ವ್ಯಕ್ತಪಡಿಸುತ್ತಾರೆ.

ರೊಬಸ್ಟಾ ಕಾಫಿಯನ್ನು ಅಧಿಕವಾಗಿ ಉತ್ಪಾದನೆ ಮಾಡುವ ವಿಯೆಟ್ನಾಂ ದೇಶದಲ್ಲಿ ಒಣಹವೆಯಿಂದ ಉತ್ಪಾದನೆ ಕುಸಿದಿದೆ. ಈಗಾಗಲೇ ಶೇ 20ಕ್ಕೂ ಹೆಚ್ಚು ಪ್ರಮಾಣದಲ್ಲಿ ಉತ್ಪಾದನೆ ಕಡಿಮೆ ಆಗಿದೆ. ಇದರಿಂದ ರೊಬಸ್ಟಾಗೆ ಜಾಗತಿಕ ಮಟ್ಟದಲ್ಲಿ ಬೇಡಿಕೆ ಕುದುರಿದೆ ಎನ್ನುತ್ತಾರೆ ವರ್ತಕರು.

ಬಹುತೇಕ ಬೆಳೆಗಾರರು ಈಗಾಗಲೇ ₹7,500ರಿಂದ ₹8,000ಕ್ಕೆ ಕಾಫಿಯನ್ನು ಮಾರಾಟ ಮಾಡಿದ್ದಾರೆ. ಉಳಿದ ಬೆಳೆಗಾರರು ಇನ್ನಷ್ಟು ಬೆಲೆ ಏರುವ ನಿರೀಕ್ಷೆಯಿಂದ ಮಾರಾಟ ಮಾಡದೆ ಉಳಿಸಿಕೊಂಡಿದ್ದಾರೆ. ಮಳೆ ಕಾರಣದಿಂದ ಬ್ರೆಜಿಲ್‌ನಲ್ಲೂ ಅರೇಬಿಕಾ ಕಾಫಿಗೆ ಹಾನಿ ಆಗುತ್ತಿದೆ. ಇದರಿಂದ ಮುಂದಿನ ಫಸಲು ಕಡಿಮೆ ಆಗುವ ಆತಂಕ ಇದೆ. ಇದರಿಂದ ಅರೇಬಿಕಾ ಬೆಲೆ ಕೂಡ ಏರಿಕೆಯ ಹಾದಿ ಹಿಡಿದಿದೆ ಎಂದು ಎನ್ನುತ್ತಾರೆ ಅವರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಅಶ್ರು ತರ್ಪಣ

ಶ್ರೀಮತಿ ವಾಸಂತಿ ನಾರಾಯಣ್
ಏಪ್ರಿಲ್ 22,1947 ಏಪ್ರಿಲ್ 05 2024
ಮಮತೆಯ ಮಡದಿ, ಪ್ರೀತಿಯ ಅಮ್ಮ ಮತ್ತು ಮುದ್ದಿನ ಅಜ್ಜಿ
ಹೃದಯಾಂತರಾಳದಿಂದ, ನನ್ನ ಮಮತೆಯ ಮಡದಿಯು ಅಳಸಲಾಗದ ನೆನಪುಗಳು, ಮತ್ತು ಗುಣಭರಿತ ಜೀವನವನ್ನು ತ್ಯಜಿಸಿ, ದಿನಾಂಕ 05-04-2024 ರಂದು ದೈವಾಧೀನರಾದರೆಂದು ತಿಳಸಲು ವಿಷಾದಿಸುತ್ತೇವೆ.
ತತ್ತಂಬಂಧ, ವೈಕುಂಠ ಸಮಾರಾಧನೆ: 16-04-2024 ರಂದು ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ಶೋಕಭರಿತ, ಪ್ರೀತಿಯ ನೆನಪುಗಳೊಂದಿಗೆ
ಜಿ.ಎನ್.ನಾರಾಯಣ ರಾವ್ (ಪತಿ) ಮತ್ತುಕುಟುಂಬ.
489, 5ನೇ ಮೈನ್, 11ನೇ ಕ್ರಾಸ್,
ಮಹಾಲಕ್ಷ್ಮಿಪುರಮ್, ಬೆಂಗಳೂರು-560 086.

NAME CHANGE ANNOUNCEMENT
Log on to : dhclassifieds.com

ವೈಕುಂಠ ಸಮಾರಾಧನೆ

ಶ್ರೀ ಜಯರಾಮ ರೆಡ್ಡಿ
ಬಿ.ಪಿ.ಆರ್.ಓ, ಬಿ.ಬಿ.ಎಂ.ಪಿ. (ನಿವೃತ್ತ)
ದಿನಾಂಕ: 04.04.2024 ಗುರುವಾರ ಬೆಳಿಗ್ಗೆ 7:57 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ತತ್ತಂಬಂಧವಾದ ಉತ್ತರ ಕ್ರಿಯಾದಿಗಳು ದಿನಾಂಕ: 15.04.2024, ಸೋಮವಾರ ಬೆಳಿಗ್ಗೆ 10:00 ಗಂಟೆಗೆ
ಪುಣ್ಯಾಹ ಮತ್ತು ವೈಕುಂಠ ಸಮಾರಾಧನೆಯನ್ನು ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ಕಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು:
ಶ್ರೀಮತಿ ಐಶ್ವರ್ಯ ರೆಡ್ಡಿ, ಶ್ರೀ ಕೆ.ಜ. ವೆಂಕಟೇಶ ರೆಡ್ಡಿ ಮತ್ತು ಕುಟುಂಬದವರು.

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಕೆ.ಎಸ್. ಚಂದ್ರಶೇಖರಯ್ಯ
ವಿಜಯ ಶಿಕ್ಷಣ ಸಂಸ್ಥೆಯ ಸಂಸ್ಥಾಪಕರಾದ ಇವರು ದಿನಾಂಕ 9-4-2024 ರಂದು ಸದ್ಗತಿಯನ್ನು ಹೊಂದಿದ್ದಾರೆ. ಆರ್ದರ್ ಶಿಕ್ಷಕರು, ಶ್ರೇಷ್ಠ ಶಿಕ್ಷಣ ತಜ್ಞರೂ ಆದ ಶ್ರೀ ಕೆ ಎಸ್ ಚಂದ್ರಶೇಖರಯ್ಯನವರ ನಿಧನದಿಂದ ಶಿಕ್ಷಣ ಕ್ಷೇತ್ರಕ್ಕೆ ಹಾಗೂ ವಿಜಯ ವಿದ್ಯಾಸಂಸ್ಥೆಗೆ ತುಂಬಲಾರದ ನಷ್ಟವಾಗಿದೆ.
ಅವರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿ ನೀಡಲೆಂದು ಕೋರಿಕೊಳ್ಳುತ್ತೇವೆ.
ದುಃಖಿತಪ್ತ ಕುಟುಂಬಸ್ಥರು ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ
ವಿಜಯ ವಿದ್ಯಾ ಸಂಸ್ಥೆ, ಸೌತ್ ಎಂಡ್ ವೃತ್ತ, ಮೂರನೆಯ ಬಡಾವಣೆ, ಜಯನಗರ, ಬೆಂಗಳೂರು

9 ಜನರಿಗೆ ಇರಿದ ದಾಳಿಕೋರ ಪೊಲೀಸರ ಗುಂಡೇಟಿಗೆ ಬಲಿ

ಆಸ್ಟ್ರೇಲಿಯಾ: ಚಾಕು ಇರಿತಕ್ಕೆ 6 ಸಾವು

ಸಿಡ್ನಿ(ಎಪಿ): ಇಲ್ಲಿನ ಜನನಿಬಿಡ ಶಾಪಿಂಗ್ ಮಾಲ್‌ವೊಂದರಲ್ಲಿ ಶಂಕಿತ ದಾಳಿಕೋರನೊಬ್ಬ ಚಾಕುವಿನಿಂದ ಇರಿದು ಆರು ಜನರನ್ನು ಹತ್ಯೆ ಮಾಡಿದ ಭೀಕರ ಘಟನೆ ಶನಿವಾರ ನಡೆದಿದೆ. ಇರಿತದಿಂದ ಮಗು ಸೇರಿ ಹಲವರು ಗಾಯಗೊಂಡಿದ್ದಾರೆ. ಪೊಲೀಸ್ ಗುಂಡೇಟಿಗೆ ದಾಳಿಕೋರ ಬಲಿಯಾಗಿದ್ದಾನೆ.

ಸಿಡ್ನಿಯ ಪೂರ್ವ ಉಪನಗರದ ಬಾಂಡಿ ಜಂಕ್ಷನ್‌ನಲ್ಲಿರುವ ವೆಸ್ಟ್‌ಫೀಲ್ಡ್ ಶಾಪಿಂಗ್ ಸೆಂಟರ್‌ನಲ್ಲಿ ಈ ಘಟನೆ ನಡೆದಿದೆ. ಹಂತಕ, ಮಗು ಸೇರಿ ಒಂಬತ್ತು ಜನರಿಗೆ ಚಾಕುವಿನಿಂದ ಇರಿದಿದ್ದಾನೆ. ಹಂತಕ ಚಾಕು ಕೈಬಿಡದಿದ್ದಾಗ ಆತನ ಮೇಲೆ ಮಹಿಳಾ ಪೊಲೀಸ್ ಇನ್‌ಸ್ಪೆಕ್ಟರ್ ಒಬ್ಬರು ಗುಂಡು ಹಾರಿಸಿ, ದಾಳಿಗೆ ಒಳಗಾಗಿದ್ದ ಜನರನ್ನು ರಕ್ಷಿಸಿದ್ದಾರೆ. ಹಂತಕ ಸ್ಥಳದಲ್ಲೇ ಹತನಾಗಿದ್ದಾನೆ ಎಂದು ನ್ಯೂ ಸೌತ್ ವೇಲ್ಸ್‌ನ ಎಸಿಪಿ ಅಂಥೋನಿ ಕುಕ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

'ಶಂಕಿತ ವ್ಯಕ್ತಿ ಒಬ್ಬನೇ ಈ ಕೃತ್ಯ ಎಸಗಿದ್ದಾನೆ. ಆತ ಯಾರೆಂಬುದು ಇನ್ನೂ ಗೊತ್ತಾಗಿಲ್ಲ. ತನಿಖೆ ಈಗಷ್ಟೇ ಶುರುವಾಗಿದೆ. ಇದು ಬಹಳ ಸಮಯ ತೆಗೆದುಕೊಳ್ಳಬಹುದು' ಎಂದು ಕುಕ್ ಹೇಳಿದ್ದಾರ

ಪಿಚ್‌ನಲ್ಲಿ ಬ್ಯಾಟರ್‌ಗಳ ಪರದಾಟ • ಐದನೇ ಗೆಲುವು ದಾಖಲಿಸಿದ ಸಂಜು ಪಡೆ

ರಾಯಲ್ಸ್‌ಗೆ ರೋಚಕ ಗೆಲುವು

ಮುಲ್ಲನ್‌ಪುರ (ಚಂಡೀಗಢ), (ಪಿಟಿಐ): ಬೌಲರ್‌ಗಳ ಸ್ನೇಹಿಯಾಗಿದ್ದ ಪಿಚ್‌ನಲ್ಲಿ ಎರಡೂ ತಂಡಗಳು ವೇಗವಾಗಿ ರನ್ ಗಳಿಸಲು ಪರದಾಡಿದವು.

ಆದರೆ ರಾಜಸ್ಥಾನ್ ರಾಯಲ್ಸ್ ತಂಡ ಶಿಮ್ರೋನ್ ಹೆಟ್ಮೆಯರ್ ಅವರ ಕೊನೆಗಳಿಗೆಯ ಬೀಸಾಟದಿಂದ (ಅಜೇಯ 27, 10ಎ) ಶನಿವಾರ ಐಪಿಎಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡದ ಮೇಲೆ ಮೂರು ವಿಕೆಟ್‌ಗಳ ರೋಚಕ ಪಡೆಯಿತು.

ಮಹಾರಾಜ ಯಾದವೀಂದ್ರ ಸಿಂಗ್ ಕ್ರೀಡಾಂಗಣದಲ್ಲಿ ಮೊದಲು ಆಡಲು ಕಳುಹಿಸಲ್ಪಟ್ಟ ಪಂಜಾಬ್ 20 ಓವರುಗಳಲ್ಲಿ 8 ವಿಕೆಟ್‌ಗೆ 147 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಇದಕ್ಕೆ ಉತ್ತರವಾಗಿ ರಾಯಲ್ಸ್ ತಂಡ ಉತ್ತಮ ಆರಂಭ ಮಾಡಿದರೂ ಮಧ್ಯಮ ಹಂತದಲ್ಲಿ ಪರದಾಡಿ ಕೊನೆಗೆ ಒಂದು ಎಸೆತ ಇರುವಂತೆ 7 ವಿಕೆಟ್‌ಗೆ 152 ರನ್ ಹೊಡೆಯಿತು.

ಕೊನೆಯ 5 ಓವರುಗಳಲ್ಲಿ ರಾಯಲ್ಸ್‌ಗೆ ಜಯಗಳಿಸಲು 49 ರನ್‌ಗಳು ಬೇಕಿದ್ದವು. ಏಳು ವಿಕೆಟ್‌ಗಳು ಕೈಲಿದ್ದವು. ಆದರೆ ಪಂಜಾಬ್ ಬೌಲರ್‌ಗಳು ಸುಲಭವಾಗಿ ಬಿಟ್ಟು ಕೊಡಲಿಲ್ಲ.

ಶಿಖರ್ ಧವನ್ ಗಾಯಾಳಾಗಿದ್ದರಿಂದ ನಾಯಕತ್ವ ವಹಿಸಿದ್ದ ಸ್ಯಾಮ್ ಕರನ್ 19ನೇ ಓವರ್‌ನಲ್ಲಿ ಎರಡು ಬೌಂಡರಿ ನೀಡಿದರೂ, ಎರಡು ವಿಕೆಟ್ (ರೋವ್ಮನ್ ಪಾವೆಲ್ ಮತ್ತು ಕೇಶವ ಮಹಾರಾಜ್) ಪಡೆದ ಕಾರಣ ಪಂದ್ಯ ರೋಚಕವಾಯಿತು.

ಕೊನೆಯ ಓವರ್‌ನಲ್ಲಿ ಹತ್ತು ರನ್‌ಗಳು ಬೇಕಿದ್ದವು. ಅರ್ಷದೀಪ್ ಸಿಂಗ್ ಬೌಲಿಂಗ್‌ನಲ್ಲಿ ವೆಸ್ಟ್ ಇಂಡೀಸ್‌ನ ಹೆಟ್ಮೆಯರ್ ಎರಡು ಸಿಕ್ಸರ್ ಸೇರಿ 14 ರನ್ ಬಾರಿಸಿದರು.

ರಾಯಲ್ಸ್ ತಂಡಕ್ಕೆ ತನುಷ್ ಕೋಟ್ಯಾನ್ (24) ಮತ್ತು ಯಶಸ್ವಿ ಜೈಸ್ವಾಲ್ (39, 28ಎ) 8 ಓವರುಗಳಲ್ಲಿ 56 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದ್ದರು.

ಜೋಸ್ ಬಟ್ಲರ್ ಬದಲು ಅವಕಾಶ ಪಡೆದ ಮುಂಬೈನ ತನುಷ್ ಟಿ20ಯಲ್ಲಿ ಮೊದಲ ಬಾರಿ ಇನಿಂಗ್ಸ್ ಆರಂಭಿಸಿದ್ದರು. ಲಿವಿಂಗ್‌ಸ್ಟೋನ್ ಈ ಜೊತೆಯಾಟ ಮುರಿದರು. ನಂತರ ಸಂಜು ಸ್ಯಾಮ್ಸನ್ (18) ಮತ್ತು ರಿಯಾನ್ ಪರಾಗ್ 23 ರನ್ ಕೊಡುಗೆಯಿತ್ತರು.

ಇದಕ್ಕೆ ಮೊದಲು, ಪಂಜಾಬ್ ತಂಡವೂ ಪರದಾಡಿತು. 3 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 26 ರನ್ ಗಳಿಸಿದ್ದ ಅತಿಥೇಯ ತಂಡ, ಆರಂಭಿಕ ಆಟಗಾರ ಅಥರ್ವ ತೈಡೆ (16, 12 ಎ) ಅವರ ನಿರ್ಗಮನದ ಬಳಿಕ ಬಳಿಕ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡಿತು.

ಟ್ರೆಂಟ್ ಬೌಲ್ಟ್ ಪವರ್ ಪ್ಲೇ ಅವಧಿಯ ಮೊದಲ ಮೂರು ಓವರುಗಳಲ್ಲಿ 15 ರನ್ ಮಾತ್ರ ನೀಡಿದರು.

ಒಟ್ಟಾರೆ ಮೊದಲ ಆರು ಓವರ್‌ಗಳಲ್ಲಿ ಬಂದಿದ್ದು 38 ರನ್‌ಗಳಷ್ಟೇ.

ಅರ್ಧದಷ್ಟು ಓವರ್‌ಗಳು ಮುಗಿದಾಗ ಪಂಜಾಬ್ ಮೊತ್ತ 4 ವಿಕೆಟ್‌ಗೆ 53. ಜಾನಿ ಬೇಸ್ಕೊ, ಸ್ಯಾಮ್ ಕರನ್ ಮತ್ತು ಪ್ರಭಸಿಮ್ರನ್ ಸಿಂಗ್ ಅವರ ವಿಕೆಟ್‌ಗಳನ್ನೂ ಕಳೆದುಕೊಂಡಿತು.

ಇನಿಂಗ್ಸ್‌ನ ಕೊನೆಯ ಹಂತದಲ್ಲಿ 'ಇಂಪ್ಯಾಕ್ಟ್ ಸಬ್' ಅಶುತೋಷ್ ಶರ್ಮಾ (31, 16 ಎಸೆತ) ತಮಗೆ ಕೊಟ್ಟ ಕೆಲಸವನ್ನು ಉತ್ತಮವಾಗಿಯೇ ನಿರ್ವಹಿಸಿದರು.

ವಿಕೆಟ್ ಕೀಪರ್ ಜಿತೇಶ್ ಶರ್ಮಾ (29, 24 ಎಸೆತ) ಸಹ ಉಪಯುಕ್ತ ಆಟವಾಡಿದರು.

ಕೊನೆಯ ಆರು ಓವರುಗಳಲ್ಲಿ 72 ರನ್‌ಗಳು ಹರಿದುಬಂದು ತಂಡದ ಮೊತ್ತ 150ರ ಸನಿಹ ತಲುಪಿತು.

ವೇಗಿ ಆವೇಶ್ ಖಾನ್ (34ಕ್ಕೆ 2) ಮತ್ತು ಎಡಗೈ ಸ್ಪಿನ್ನರ್ ಕೇಶವ ಮಹಾರಾಜ್ (23ಕ್ಕೆ2) ಯಶಸ್ಸು ಪಡೆದರು.

ಶಿಮ್ರೋನ್ ಹೆಟ್ಮೆಯರ್ ಅವರ ಹೊಡೆತದ ವೈಖರಿ. ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಪಂಜಾಬ್ ಕಿಂಗ್ಸ್: 8 ವಿಕೆಟ್‌ಗೆ 147 (20 ಓವರುಗಳಲ್ಲಿ)

ಅಥರ್ವ ಸಿ ಸೇನ್ ಬಿ ಆವೇಶ್ 15 (12ಎ, 4x2)
ಬೇಸ್ಕೊ ಸಿ ಹೆಟ್ಮೆಯರ್ ಬಿ ಮಹಾರಾಜ್ 15 (19ಎ, 4x1)
ಪ್ರಭಸಿಮ್ರನ್ ಸಿ ಜುರೆಲ್ ಬಿ ಚಾಹಲ್ 10 (14ಎ, 4x1)
ಕರನ್ ಸಿ ಸುರೆಲ್ ಬಿ ಮಹಾರಾಜ್ 6 (10ಎ)
ಜಿತೇಶ್ ಸಿ ಪರಾಗ್ ಬಿ ಆವೇಶ್ 29 (24ಎ, 4x1, 6x2)
ಶಶಾಂಕ್ ಸಿ ಜುರೆಲ್ ಬಿ ಸೇನ್ 9 (9ಎ, 4x1)
ಲಿವಿಂಗ್‌ಸ್ಟೋನ್ ರನೌಟ್ (ಕೋಟ್ಯಾನ್/ ಸ್ಯಾಮ್ಸನ್) 21 (14ಎ, 4x2, 6x1)
ಅಶುತೋಷ್ ಸಿ ಮಹಾರಾಜ್ ಬಿ ಬೌಲ್ಟ್ 31 (16ಎ, 4x1, 6x3)
ಹರ್‌ಪ್ರೀತ್ ಔಟಾಗದೇ 3 (3ಎ)
ಇತರೆ: 8 (ಲೆಗ್‌ಬೈ 2, ನೋಬಾಲ್ 1, ವೈಡ್ 5)
ವಿಕೆಟ್ ಪತನ: 1-27 (ಅಥರ್ವ ತೈಡೆ, 3.4), 2-41 (ಪ್ರಭಸಿಮ್ರನ್ ಸಿಂಗ್, 6.3), 3-47 (ಜಾನಿ ಬೇಸ್ಕೊ, 7.6), 4-52 (ಸ್ಯಾಮ್ ಕರನ್, 9.3), 5-70 (ಶಶಾಂಕ್ ಸಿಂಗ್, 12.1), 6-103 (ಜಿತೇಶ್ ಶರ್ಮಾ, 16.1), 7-122 (ಲಿಯಾಮ್ ಲಿವಿಂಗ್‌ಸ್ಟೋನ್, 17.5), 8-147 (ಅಶುತೋಷ್ ಶರ್ಮಾ, 19.6)
ಬೌಲಿಂಗ್: ಟ್ರೆಂಟ್ ಬೌಲ್ಟ್ 4-0-22-1; ಕುಲದೀಪ್ ಸೇನ್ 4-0-35-1; ಆವೇಶ್ ಖಾನ್ 4-0-34-2; ಯಜುವೇಂದ್ರ ಚಾಹಲ್ 4-0-31-1; ಕೇಶವ ಮಹಾರಾಜ್ 4-0-23-2.

ರಾಜಸ್ಥಾನ ರಾಯಲ್ಸ್: 7 ವಿಕೆಟ್‌ಗೆ 152 (19.5 ಓವರ್)

ಜೈಸ್ವಾಲ್ ಸಿ ಪಟೇಲ್ ಬಿ ರಬಾಡ 39 (28, 4X4)
ಕೋಟ್ಯಾನ್ ಬಿ ಲಿವಿಂಗ್‌ಸ್ಟೋನ್ 24 (31ಎ, 4X3)
ಸ್ಯಾಮ್ಸನ್ ಎಲ್‌ಬಿಡಬ್ಲ್ಯು ರಬಾಡ 18 (14ಎ, 4X1, 6X1)
ರಿಯಾನ್ ಸಿ ರಬಾಡ ಬಿ ಅರ್ಷ್‌ದೀಪ್ ಸಿಂಗ್ 23 (18ಎ, 4X1, 6X1)
ಜುರೆಲ್ ಸಿ ಶಶಾಂಕ್ ಸಿಂಗ್ ಬಿ ಪಟೇಲ್ 6 (11ಎ)
ಹೆಟ್ಮೆಯರ್ ಔಟಾಗದೇ 27 (10ಎ, 4X1, 6X3)
ಪಾವೆಲ್ ಸಿ ಜಿತೇಶ್ ಬಿ ಕರನ್ 11 (5ಎ, 4X2)
ಕೇಶವ್ ಸಿ ಲಿವಿಂಗ್ ಸ್ಟೋನ್ ಬಿ ಕರನ್ 1 (2ಎ)
ಬೌಲ್ಟ್ ಔಟಾಗದೇ 0
ಇತರೆ: 3 (ವೈಡ್ 3)
ವಿಕೆಟ್ ಪತನ: 1-56 (ತನುಷ್ ಕೋಟ್ಯಾನ್, 8.2), 2-82 (ಯಶಸ್ವಿ ಜೈಸ್ವಾಲ್, 11.4), 3-89 (ಸಂಜು ಸ್ಯಾಮ್ಸನ್, 13.2), 4-113 (ರಿಯಾನ್ ಪರಾಗ್, 16.4), 5-115 (ಧ್ರುವ್ ಜುರೇಲ್, 17.2), 6-136 (ರೋವ್ಮನ್ ಪಾವೆಲ್, 18.3), 7-138 (ಕೇಶವ್ ಮಹಾರಾಜ್, 18.6).
ಬೌಲಿಂಗ್: ಅರ್ಷದೀಪ್ ಸಿಂಗ್ 3.5-0-45-1, ಕಗಿಸೊ ರಬಾಡ 4-0-18-2, ಸ್ಯಾಮ್ ಕರನ್ 4-0-25-2, ಲಿಯಾಮ್ ಲಿವಿಂಗ್‌ಸ್ಟೋನ್ 3-0-21-1, ಹರ್ಷಲ್ ಪಟೇಲ್ 2-0-21-1, ಹರ್ಪ್ರೀತ್ ಬ್ರಾರ್ 3-0-22-0
ಪಂದ್ಯದ ಆಟಗಾರ: ಶಿಮ್ರೋನ್ ಹೆಟ್ಮೆಯರ್

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	6	5	1	10	0.767
ಕೋಲ್ಕತ್ತ ನೈಟ್ ರೈಡರ್ಸ್	4	3	1	6	1.528
ಚೆನ್ನೈ ಸೂಪರ್ ಕಿಂಗ್ಸ್	5	3	2	6	0.666
ಲಖನೌ ಸೂಪರ್ ಜೈಂಟ್ಸ್	5	3	2	6	0.436
ಸನ್‌ರೈಸರ್ಸ್ ಹೈದರಾಬಾದ್	5	3	2	6	0.344
ಗುಜರಾತ್ ಟೈಟನ್ಸ್	6	3	3	6	-0.637
ಮುಂಬೈ ಇಂಡಿಯನ್ಸ್	5	2	3	4	-0.073
ಪಂಜಾಬ್ ಕಿಂಗ್ಸ್	6	2	4	4	-0.218
ಡೆಲ್ಲಿ ಕ್ಯಾಪಿಟಲ್ಸ್	6	2	4	4	-0.975
ರಾಯಲ್ ಚಾಲೆಂಜರ್ಸ್ ಬೆಂಗಳೂರು	6	1	5	2	-1.124

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (316 ರನ್)
ಪರ್ಪಲ್ ಕ್ಯಾಪ್: ಯಜುವೇಂದ್ರ ಚಾಹಲ್, ರಾಜಸ್ಥಾನ ರಾಯಲ್ಸ್ (10 ವಿಕೆಟ್)

ಮುಂಬೈಗೆ 'ಸೂಪರ್' ಸವಾಲು

ಹಾರ್ದಿಕ್ –ಋತುರಾಜ್ ಗಾಯಕವಾಡ ಮುಖಾಮುಖಿ

ಮುಂಬೈ (ಪಿಟಿಐ): ಹಾಲಿ ಚಾಂಪಿಯನ್ಸ್ ಚೆನ್ನೈ ಸೂಪರ್ ಕಿಂಗ್ಸ್ ತಂಡ, ಭಾನುವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ಎದುರಿಸಲಿದ್ದು, ಎಲ್ಲರ ಕಣ್ಣುಗಳು ಭಾರತದ ಕ್ರಿಕೆಟ್ ದಿಗ್ಗಜ ಮಹೇಂದ್ರ ಸಿಂಗ್ ಧೋನಿ ಅವರ ಮೇಲಿದೆ. ವಿಶ್ವಕಪ್ ಎತ್ತಿಹಿಡಿದಿದ್ದ ವಾಂಖೆಡೆ ಕ್ರೀಡಾಂಗಣದಲ್ಲಿ ಧೋನಿ ಬಹುಶಃ ಕೊನೆಯ ಬಾರಿ ಆಡಲು ಇಳಿಯಲಿದ್ದಾರೆ.

ಇದು 42 ವರ್ಷದ ಆಟಗಾರನ ಕೊನೆಯ ಐಪಿಎಲ್ ಆಗುವುದು ಬಹುತೇಕ ಖಚಿತ. ಧೋನಿ ವಿಕೆಟ್ ಹಿಂದುಗಡೆ ಚುರುಕುತನ ಉಳಿಸಿಕೊಂಡಿದ್ದಾರೆ, ಮಾತ್ರವಲ್ಲ ಆಟವನ್ನು 'ಓದುವ' ಕಲೆ ಅವರಿಗೆ ಕರಗತ. ಹೀಗಾಗಿ ಚೆನ್ನೈ ತಂಡ ಅವರ ಮೇಲೆ ನಿರೀಕ್ಷೆಯಿಟ್ಟುಕೊಂಡಿದೆ. ಈ ಅವೃತ್ತಿಯಲ್ಲಿ ಸಿಎಸ್‌ಕೆ ಐದು ಪಂದ್ಯಗಳಲ್ಲಿ ಮೂರು ಗೆದ್ದು, ಎರಡು ಸೋತಿದೆ. ಇವರೆಡೂ ತವರಿನಿಂದಾಚೆ ಆಡಿದ ಪಂದ್ಯಗಳು.

ಚೆನ್ನೈ ತಂಡದ ಯುವನಾಯಕ ಋತುರಾಜ್ ಗಾಯಕವಾಡ್ ಮತ್ತು ಹಾರ್ದಿಕ್ ನಡುವಣ ಮೊದಲ ಪೈಪೋಟಿಗೂ ಈ ಪಂದ್ಯ ವೇದಿಕೆಯಾಗಲಿದೆ.

ಆರಂಭದ ಮೂರು ಪಂದ್ಯಗಳಲ್ಲಿ ಸತತ ಸೋಲು ಅನುಭವಿಸಿದ್ದ ಮುಂಬೈ ಈಗ ಗೆಲುವಿನ ಹಾದಿಗೆ ಮರಳಿದೆ.

ಶಿವಂ ದುಬೆ

ಸೂರ್ಯಕುಮಾರ್ ಯಾದವ್

ಬ್ಯಾಟರ್‌ಗಳು ಲಯಕ್ಕೆ ಮರಳುತ್ತಿದ್ದಾರೆ. ವಿರಾಮದ ನಂತರ ಕ್ರಿಕೆಟ್‌ಗೆ ಮರಳಿರುವ ಸೂರ್ಯಕುಮಾರ್ ಯಾದವ್ ಅಬ್ಬರಿಸಲು ಆರಂಭಿಸಿದ್ದಾರೆ. ಕಳೆದ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಎದುರು ಸೂರ್ಯ 19 ಎಸೆತಗಳಲ್ಲಿ 52 ರನ್ ಗಳಿಸಿದ್ದರು. ಇಶಾನ್ ಕಿಶನ್ ಈ ಬಾರಿ ಒಟ್ಟು 161 ರನ್ ಗಳಿಸಿದ್ದಾರೆ. ಈ ಬೆಳವಣಿಗೆ ಚೆನ್ನೈ ಬೌಲರ್‌ಗಳಿಗೆ ಎಚ್ಚರಿಕೆಯ ಗಂಟೆಯಾಗಿದೆ.

ಋತುರಾಜ್ ಗಾಯಕವಾಡ್ ಅವರು ಅಬ್ಬರದ ಆಟವಾಡದಿದ್ದರೂ, ಚೆನ್ನೈ ತಂಡದ ಬ್ಯಾಟಿಂಗ್ ಶಕ್ತಿಯಾಗಿದ್ದಾರೆ. ಬಿರುಸಿನ ಹೊಡೆತಗಳ ಆಟಗಾರ ಶಿವಂ ದುಬೆ (176 ರನ್) ಬ್ಯಾಟಿಂಗ್‌ನಲ್ಲಿ ಸ್ಥಿರ ಪ್ರದರ್ಶನ ನೀಡುತ್ತಿದ್ದಾರೆ. ರಚಿನ್ ರವೀಂದ್ರ, ಡೇರಿಲ್ ಮಿಚೆಲ್, ಅಜಿಂಕ್ಯ ರಹಾನೆ ಮತ್ತು ಶಾರ್ದೂಲ್ ಮಿಂಚಿದರೆ ಚೆನ್ನೈ ತಂಡದ ಪರ ಪ್ರಮುಖ ಬೌಲರ್ ಜಸ್‌ಪ್ರೀತ್ ಬೂಮ್ರಾ ಮಾತ್ರ ಪರಿಣಾಮಕಾರಿಯಾಗಿದ್ದಾರೆ. ಬ್ಯಾಟಿಂಗ್ ಪಿಚ್‌ನಲ್ಲಿ ಉಳಿದವರು ಪರದಾಡುತ್ತಿದ್ದು ಧಾರಾಳಿ ಎನಿಸಿದ್ದಾರೆ. ಆರ್‌ಸಿಬಿ ವಿರುದ್ಧದ ಪಂದ್ಯದಲ್ಲೇ ಬೂಮ್ರಾ ಬಿಗುದಾಳಿ ನಡೆಸಿದರೂ ಉಳಿದವರು ಸಪ್ಪೆಯಾಗಿದ್ದ ಕಾರಣ ತಂಡ 196 ರನ್‌ಗಳ ದೊಡ್ಡ ಮೊತ್ತ ಗಳಿಸಿತ್ತು.

ಚೆನ್ನೈ ಪರ ತುಷಾರ್ ದೇಶಪಾಂಡೆ, ಮುಸ್ತಫಿಜುರ್ ರೆಹಮಾನ್, ರವೀಂದ್ರ ಜಡೇಜ ಹಾಗೂ ರಚಿನ್ ರವೀಂದ್ರ ಅವರು ತಮ್ಮ ಹೊಣೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಬೇಕಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್

ನೈಟ್ ರೈಡರ್ಸ್– ಸೂಪರ್ ಜೈಂಟ್ಸ್ ಹಣಾಹಣಿ ಇಂದು

'ಬೀಸಾಟ ವೀರ'ರ ಮುಖಾಮುಖಿ

ಕೋಲ್ಕತ್ತ (ಪಿಟಿಐ): ಲಖನೌ ಸೂಪರ್ ಜೈಂಟ್ಸ್‌ನಲ್ಲಿ ಕ್ವಿಂಟನ್ ಡಿಕಾಕ್, ನಿಕೊಲಸ್ ಪೂರನ್ ಇದ್ದರೆ, ಇನ್ನೊಂದೆಡೆ ಕೋಲ್ಕತ್ತ ನೈಟ್ ರೈಡರ್ಸ್‌ನಲ್ಲಿ ಸುನಿಲ್ ನಾರಾಯಣ್ ಮತ್ತು ಆ್ಯಂಡ್ರೆ ರಸೆಲ್ ಅವರಿದ್ದಾರೆ. ಅದರಿಂದಾಗಿಯೇ ಭಾನುವಾರ ಈಡನ್ ಗಾರ್ಡನ್‌ನಲ್ಲಿ ನಡೆಯಲಿರುವ ಈ ಎರಡೂ ತಂಡಗಳ ಹಣಾಹಣಿಯಲ್ಲಿ ಸಿಕ್ಸರ್, ಬೌಂಡರಿಗಳ ಮಳೆ ಸುರಿಯುವ ನಿರೀಕ್ಷೆ ಗರಿಗೆದರಿದೆ.

ಆದರೆ ಕ್ರಿಕೆಟ್ ಎಂಬ ಅನಿಶ್ಚಿತತೆಗಳ ಆಟದಲ್ಲಿ ಏನು ಬೇಕಾದರೂ ಆಗಬಹುದು. ಅದಕ್ಕೆ ಈ ಎರಡೂ ತಂಡಗಳೇ ಸೂಕ್ತ ಉದಾಹರಣೆ.

ಲಖನೌ ತಂಡವು ತನ್ನ ಕಳೆದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಎದುರು ಸೋತಿತ್ತು. ಡೆಲ್ಲಿ ತಂಡದ ಸ್ಪಿನ್ನರ್ ಕುಲದೀಪ್ ಯಾದವ್ ಮುಂದೆ ಪೂರನ್ ಖಾತೆಯನ್ನೇ ತೆರೆಯಲಿಲ್ಲ. ಡಿಕಾಕ್ ಕೂಡ ಹೆಚ್ಚು ಅಬ್ಬರಿಸಿರಲಿಲ್ಲ. ಆದರೆ ಲಖನೌ ತಂಡದ ಯುವಪ್ರತಿಭೆ ಆಯುಷ್ ಬಡೋನಿ ಮಿಂಚಿದ್ದರು. ನಾಯಕ ಕೆ.ಎಲ್. ರಾಹುಲ್ 177ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದ್ದರು. ದೇವದತ್ತ ಪಡಿಕ್ಕಲ್ ವೈಫಲ್ಯ ಮುಂದುವರಿಯಿತು. ಸ್ಟೊಯಿನಿಸ್ ಅನಿಶ್ಚಿತ ಫಾರ್ಮ್ ಕೂಡ ಸುಧಾರಿಸಲಿಲ್ಲ.

ಆದರೆ ಗಳಿಸಿದ್ದ ಗೌರವಾರ್ಹ ಮೊತ್ತವನ್ನು ರಕ್ಷಿಸಿಕೊಳ್ಳಲು ತಂಡದ ಬೌಲರ್‌ಗಳಿಗೆ ಸಾಧ್ಯವಾಗಿರಲಿಲ್ಲ. ಸ್ಪಿನ್ನರ್ ರವಿ ಬಿಷ್ಣೋಯಿ ಹಾಗೂ ಯಶ್ ಠಾಕೂರ್ ಬಿಟ್ಟರೆ ಉಳಿದ ಬೌಲರ್‌ಗಳು ದುಬಾರಿಯಾದರು.

ಲಖನೌ ತಂಡವು ಇದುವರೆಗೆ ಐದು ಪಂದ್ಯಗಳಲ್ಲಿಆಡಿದೆ. ಅದರಲ್ಲಿ ಮೂರು ಗೆದ್ದು ಎರಡರಲ್ಲಿ ಸೋತಿದೆ. ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ.

ಕೋಲ್ಕತ್ತ ತಂಡವು ನಾಲ್ಕು ಪಂದ್ಯ ಆಡಿದ್ದು ಮೂರರಲ್ಲಿ ಜಯಿಸಿ, ಒಂದರಲ್ಲಿ ಸೋತಿದೆ. ಎರಡನೇ ಸ್ಥಾನದಲ್ಲಿದೆ. ಒಂದೊಮ್ಮೆ ಈ ಪಂದ್ಯದಲ್ಲಿ ಲಖನೌ ಗೆದ್ದರೆ ಈ ಸ್ಥಾನಗಳು ಅದಲು ಬದಲಾಗಬಹುದು. ಶ್ರೇಯಸ್ ಅಯ್ಯರ್ ನಾಯಕತ್ವದ ಕೋಲ್ಕತ್ತ ತಂಡವು ತನ್ನ ಮೂರು ಪಂದ್ಯಗಳಲ್ಲಿಯೂ ಸತತ ಜಯ ಸಾಧಿಸಿತ್ತು. ಆದರೆ ನಾಲ್ಕನೆಯದ್ದರಲ್ಲಿ ಚೆನ್ನೈ ಎದುರು ಸೋತಿತು. ಸ್ಪಿನ್ನರ್ ರವೀಂದ್ರ ಜಡೇಜ ಮೋಡಿಗೆ ಮಣಿಯಿತು.

ಫಿಲ್ ಸಾಲ್ಟ್, ಸುನಿಲ್, ಅಂಗ್‌ಕ್ರಿಷ್ ರಘುವಂಶಿ, ಶ್ರೇಯಸ್ ಅಯ್ಯರ್, ವೆಂಕಟೇಶ್ ಅಯ್ಯರ್, ರಿಂಕುಸಿಂಗ್, ರಸೆಲ್ ಮತ್ತು ರಮಣದೀಪ್ ಸಿಂಗ್ ಅವರೆಲ್ಲರೂ ಬ್ಯಾಟಿಂಗ್‌ನಲ್ಲಿ ಅಬ್ಬರಿಸುವವರೇ. ಒಬ್ಬರು ಬಿಟ್ಟರೆ ಇನ್ನೊಬ್ಬರು ಬೌಲರ್‌ಗಳ ಮೇಲೆ ನಿರ್ದಯ ಪ್ರಹಾರ ಮಾಡುವವರೇ. ಆದರೂ ಚೆನ್ನೈ ಎದುರು ಮಂಕಾಗಿದ್ದರು.

ಇದೀಗ ತವರಿನಲ್ಲಿ ಮತ್ತೆ ಜಯದ ಹಾದಿಗೆ ಮರಳುವ ಛಲದಲ್ಲಿದ್ದಾರೆ. ಸುನಿಲ್ ಮತ್ತು ರಸೆಲ್ ಬೌಲಿಂಗ್‌ನಲ್ಲಿಯೂ ಪ್ರತಾಪ ಮೆರೆಯಬಲ್ಲರು. 'ದುಬಾರಿ' ಬೌಲರ್ ಮಿಚೆಲ್ ಸ್ಟಾರ್ಕ್ ಹಾಗೂ 'ಮಿಸ್ಟರಿ ಬೌಲರ್' ವರುಣ್ ಚಕ್ರವರ್ತಿ ವಿಕೆಟ್ ಗಳಿಸಿದರೆ ತಂಡಕ್ಕೆ ಹೆಚ್ಚು ಅನುಕೂಲವಾಗಬಹುದು.

ಪಂದ್ಯ ಆರಂಭ: ಮಧ್ಯಾಹ್ನ 3.30
ನೇರಪ್ರಸಾರ ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನಿಮಾ ಆ್ಯಪ್.

ಸುನಿಲ್ ನಾರಾಯಣ ಮತ್ತು ಶ್ರೇಯಸ್ ಆಯ್ಯರ್ – ಪಿಟಿಐ ಚಿತ್ರ

ಬಾಕ್ಸಿಂಗ್: ತಂಡಕ್ಕೆ ಮರಳಿದ ಅಮಿತ್

ನವದೆಹಲಿ (ಪಿಟಿಐ): ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್ ಬೆಳ್ಳಿ ವಿಜೇತ ಅಮಿತ್ ಪಂಘಲ್ ಅವರು ಅಂತಿಮ ಒಲಿಂಪಿಕ್ ಅರ್ಹತಾ ಟೂರ್ನಿಯಲ್ಲಿ ಭಾಗವಹಿಸುವ ಭಾರತ ತಂಡಕ್ಕೆ ಮರಳಿದ್ದಾರೆ. ತಂಡದಲ್ಲಿ ಹಲವು ಬದಲಾವಣೆಗಳಾಗಿವೆ.

ಒಲಿಂಪಿಕ್ಸ್‌ಗೆ ಅರ್ಹತೆಯಾಗಲು ಅವಕಾಶ ನೀಡುವ ಈ ಅಂತಿಮ ಅರ್ಹತಾ ಟೂರ್ನಿ ಮೇ 25 ರಿಂದ ಜೂನ್ 2ರವರೆಗೆ ಬ್ಯಾಂಕಾಕ್‌ನಲ್ಲಿ ನಡೆಯಲಿದೆ. ಅಮಿತ್ 51 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ.

ಕಳೆದ ತಿಂಗಳು ಇಟಲಿಯಲ್ಲಿ ನಡೆದ ಈ ಹಿಂದಿನ ಅರ್ಹತಾ ಟೂರ್ನಿಯಲ್ಲಿ ಭಾರತ ಬಾಕ್ಸರ್‌ಗಳ ಸಾಧನೆ ಶೋಚನೀಯವಾಗಿತ್ತು. ಯಾರಿಗೂ ಒಲಿಂಪಿಕ್ಸ್ ಕೋಟಾ ಪಡೆಯಲು ಸಾಧ್ಯವಾಗಿರಲಿಲ್ಲ. ಅಲ್ಲಿ ಭಾಗವಹಿಸಿದ್ದ ಐವರು ಬಾಕ್ಸರ್‌ಗಳು ಎರಡನೇ ಅರ್ಹತಾ ಟೂರ್ನಿಗೆ ಸ್ಥಾನ ಕಳೆದುಕೊಂಡಿದ್ದಾರೆ.

ಭಾರತ ತಂಡದ ಹೈಪರ್ಫಾಮೆನ್ಸ್ ನಿರ್ದೇಶಕ ಬರ್ನಾರ್ಡ್ ಡ್ಯೂನ್ ಅವರು ಸ್ಥಾನ ಕಳೆದುಕೊಳ್ಳಬೇಕಾಯಿತು.

ರಾಷ್ಟ್ರೀಯ ತಂಡದಿಂದ ಸ್ಥಾನ ಕಳೆದುಕೊಂಡ ಐವರು– 2023ರ ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತರ

ಹಾಕಿ ಸರಣಿ: ಭಾರತಕ್ಕೆ ಮತ್ತೆ ನಿರಾಸೆ ಕ್ಲೀನ್‌ಸ್ವೀಪ್ ಮಾಡಿದ ಆಸ್ಟ್ರೇಲಿಯಾ

ಪರ್ತ್ (ಪಿಟಿಐ): ಒಲಿಂಪಿಕ್ಸ್ ಸಿದ್ಧತೆಯ ಭಾಗವಾಗಿ ಆಸ್ಟ್ರೇಲಿಯಾ ಪ್ರವಾಸದಲ್ಲಿರುವ ಭಾರತ ಪುರುಷರ ಹಾಕಿ ತಂಡ ಸೋಲಿನ ಸರಮಾಲೆಯಿಂದ ಹೊರಬರಲು ಸಾಧ್ಯವಾಗಲಿಲ್ಲ. ಶನಿವಾರ ನಡೆದ ಐದನೇ ಹಾಗೂ ಅಂತಿಮ ಹಾಕಿ ಟೆಸ್ಟ್ ಪಂದ್ಯದಲ್ಲೂ ಆತಿಥೇಯ ಆಸ್ಟ್ರೇಲಿಯಾ 3-2 ಗೋಲುಗಳಿಂದ ಭಾರತ ತಂಡವನ್ನು ಸೋಲಿಸಿತು.

ಆಸ್ಟ್ರೇಲಿಯಾ ಸರಣಿಯನ್ನು 5-0 ಕ್ವೀನ್‌ಸ್ವೀಪ್ ಮಾಡಿತು. ಮೊದಲ ಪಂದ್ಯವನ್ನು 1-5 ರಿಂದ ಸೋತಿದ್ದ ಭಾರತ, ಎರಡನೇ ಟೆಸ್ಟ್ 2-4 ಹಾಗೂ ಮೂರು ಮತ್ತು ನಾಲ್ಕನೇ ಟೆಸ್ಟ್ ಅನ್ನು ಕ್ರಮವಾಗಿ 1-2 ಮತ್ತು 3-1 ರಿಂದ ಸೋತಿತ್ತು.

ಉತ್ತಮ ಪ್ರದರ್ಶನ ನೀಡುವ ವಿಶ್ವಾಸದೊಂದಿಗೆ ಕಣಕ್ಕಿಳಿದ ಭಾರತ ತಂಡ ಹೋರಾಟ ತೋರಿದರೂ ಪ್ರಬಲ ಆಸ್ಟ್ರೇಲಿಯಾ ಎದುರು ಗೆಲ್ಲಲು ಆಗಲಿಲ್ಲ.

ಭಾರತದ ಪರ ನಾಯಕ ಹರ್ಮನ್ ಪ್ರೀತ್ ಸಿಂಗ್ (4ನೇ ನಿಮಿಷ) ಮತ್ತು ಬಾಬಿ ಸಿಂಗ್ ಧಾಮಿ (53ನೇ ನಿ.) ಗೋಲು ಗಳಿಸಿದರೆ, ಆಸ್ಟ್ರೇಲಿಯಾ ಪರ ಜೆರೆಮಿ ಹೇವಾರ್ಡ್ (20ನೇ ನಿ.), ಕೀ ವಿಲ್ಲಾಟ್ (38ನೇ ನಿ.) ಮತ್ತು ಟಿಮ್ ಬ್ರಾಂಡ್ (39ನೇ ನಿ.) ಗೋಲು ಗಳಿಸಿದರು.

ಪ್ರವಾಸಿ ತಂಡದ ಆಟಗಾರರು ಆಕ್ರಮಣಕಾರಿಯಾಗಿ ಆಟ ಆರಂಭಿಸಿದರು. 4ನೇ ನಿಮಿಷದಲ್ಲಿ ಹರ್ಮನ್ ಪ್ರೀತ್ ಅವರು ಪೆನಾಲ್ಟಿ ಕಾರ್ನರ್ ನಲ್ಲಿ ದೊರೆತ ಅವಕಾಶವನ್ನು ಗೋಲಾಗಿ ಪರಿವರ್ತಿಸುವ ಮೂಲಕ ಭಾರತಕ್ಕೆ ಮುನ್ನಡೆ ತಂದುಕೊಟ್ಟರು. ಸರಣಿಯಲ್ಲಿ ಮೂರನೇ ಗೋಲು ಗಳಿಸಿದರು. 20ನೇ ನಿಮಿಷದಲ್ಲಿ ಹೇವಾರ್ಡ್ ಗಳಿಸಿದ ಗೋಲಿನಿಂದ ಆಸ್ಟ್ರೇಲಿಯಾ ಸಮಬಲ ಸಾಧಿಸಿತು. ಸರಣಿಯಲ್ಲಿ ಏಳನೇ ಗೋಲು ದಾಖಲಿಸಿದರು.

ಟೆನಿಸ್: ಕಿವೀಸ್‌ಗೆ ಮಣಿದ ಭಾರತ

ಚಾಂಗ್ಮಾ (ಚೀನಾ), (ಪಿಟಿಐ): ಭಾರತ ತಂಡ, ಬಿಲ್ಲೀ ಜೀನ್ ಕಿಂಗ್ ಕಪ್ ಟೆನಿಸ್ ಟೂರ್ನಿಯಲ್ಲಿ ಶನಿವಾರ ನ್ಯೂಜಿಲೆಂಡ್ ಎದುರು 1-2 ಅಂತರದ ಸೋಲನುಭವಿಸಿತು. ಅಂಕಿತಾ ರೈನಾ ನಿರ್ಣಾಯಕ ಎರಡನೇ ಸಿಂಗಲ್ಸ್ ಗೆಲ್ಲಲು ವಿಫಲವಾಗಿದ್ದು, ಪ್ರಾರ್ಥನಾ ತೊಂಬರೆ ಜೊತೆ ಡಬಲ್ಸ್‌ನಲ್ಲಿ ಸೋತಿದ್ದು ಹಿನ್ನಡೆಗೆ ಕಾರಣವಾಯಿತು.

ಮೂರನೇ ಸ್ಥಾನದಲ್ಲಿ ಮುಗಿಸಿದ ಕಾರಣ ಭಾರತ, ಏಷ್ಯಾ-ಓಷಾನಿಯಾ ಒಂದನೇ ಗುಂಪಿನಲ್ಲೇ ಉಳಿಯಲಿದೆ.

ಋತುಜಾ ಭೋಸಲೆ ಮೊದಲ ಸಿಂಗಲ್ಸ್‌ನಲ್ಲಿ 6-2, 7-5 ರಿಂದ ಮೋನಿಖ್ ಬಾರಿ ಅವರನ್ನು ಸೋಲಿಸಿದರು. ಆದರೆ ಅಂಕಿತಾ ಮುಂದಿನ ಪಂದ್ಯದಲ್ಲಿ ವಿಶ್ವದ 169ನೇ ಕ್ರಮಾಂಕದ ಆಟಗಾರ್ತಿ ಲುಲು ಸುನ್ ಅವರಿಗೆ 2-6, 0-6 ರಲ್ಲಿ ಸುಲಭವಾಗಿ ಶರಣಾದ ಕಾರಣ ಡಬಲ್ಸ್ ಪಂದ್ಯ ನಿರ್ಣಾಯಕವಾಯಿತು.

ಚೆಸ್: ಪ್ರಗ್ನು, ಗುಕೇಶ್‌ಗೆ ಪುಟಿದೇಳುವ ಅವಕಾಶ

ಟೊರಾಂಟೊ (ಪಿಟಿಐ): ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ಅರ್ಧ ಭಾಗ ಮುಗಿದಿದ್ದು ಶುಕ್ರವಾರ ವಿರಾಮದ ದಿನವಾಗಿತ್ತು. ಭಾರತದ ಪ್ರತಿಭಾನ್ವಿತ ಗ್ರ್ಯಾಂಡ್‌ಮಾಸ್ಟರ್‌ಗಳಾದ ಆರ್. ಪ್ರಜ್ಞಾನಂದ ಮತ್ತು ಡಿ.ಗುಕೇಶ್ ಅವರು ಎರಡನೇ ಸ್ಥಾನದಲ್ಲಿದ್ದು, ಎಂಟನೇ ಸುತ್ತಿನಲ್ಲಿ ಅಗ್ರಸ್ಥಾನದಲ್ಲಿರುವ ಇಯಾನ್ ನೆಪೊಮ್‌ನಿಯಾಚಿ ಅವರನ್ನು ಸರಿಗಟ್ಟಲು ಪ್ರಯತ್ನಿಸಲಿದ್ದಾರೆ.

ವಿಶ್ವಕಪ್ ರನ್ನರ್ ಅಪ್ ಆಗಿರುವ ಪ್ರಜ್ಞಾನಂದ ಅವರಿಗೆ ಎಂಟನೇ ಸುತ್ತಿನಲ್ಲಿ ಫ್ರಾನ್ಸ್‌ನ ಅಲಿರೇಝಾ ಫಿರೋಜ್ ಎದುರಾಳಿ. ಗುಕೇಶ್ ಅವರಿಗೆ ಸ್ವದೇಶದ ವಿದಿತ್ ಗುಜರಾತಿ ಅವರು ಮುಖಾಮುಖಿಯಾಗಿದ್ದಾರೆ.

ಎರಡು ಬಾರಿ ಕ್ಯಾಂಡಿಡೇಟ್ಸ್ ಟೂರ್ನಿ ಗೆದ್ದಿರುವ ರಷ್ಯಾದ ನೆಪೊಮ್‌ನಿಯಾಚಿ, ಹ್ಯಾಟ್ರಿಕ್ ಪ್ರಯತ್ನದಲ್ಲಿದ್ದು, ಆ ನಿಟ್ಟಿನಲ್ಲಿ ಹೆಜ್ಜೆಯಿಟ್ಟಿದ್ದಾರೆ. ಅವರು ನಾಲ್ಕೂವರೆ ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಪ್ರಜ್ಞಾನಂದ, ಗುಕೇಶ್ ಮತ್ತು ಅಗ್ರ ಶ್ರೇಯಾಂಕದ ಫ್ಯಾಬಿಯಾನೊ ಕರುವಾನಾ (ಅಮೆರಿಕ) ಅವರು ನಾಲ್ಕು ಪಾಯಿಂಟ್‌ಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ.

ಗುಜರಾತಿ 3.5 ಪಾಯಿಟ್ಸ್ ಸಂಗ್ರಹಿಸಿದ್ದಾರೆ. ಅವರು ಸಾಮಾನ್ಯವಾಗಿ ಕೊನೆಯ ಕೆಲವು ಸುತ್ತುಗಳಿರುವಾಗ ಪುಟಿದೇಳುವ ಛಾತಿವುಳ್ಳ ಆಟಗಾರ. ಅಮೆರಿಕದ ಹಿಕಾರು ನಕಾಮುರಾ ಅವರು ಗುಜರಾತಿ ಜೊತೆ ಐದನೇ ಸ್ಥಾನ ಹಂಚಿಕೊಂಡಿದ್ದಾರೆ.

ಭಾರತದ ಆಟಗಾರರು ಗೆಲ್ಲುವ ಭರದಲ್ಲಿ, ಒಂದೊ ಡ್ರಾ ಅಥವಾ ಸೋತು ಅಮೂಲ್ಯ ಪಾಯಿಂಟ್ಸ್ ಕಳೆದುಕೊಂಡಿದ್ದು ಇದೆ. ವಿದಿತ್ ಗುಜರಾತಿ, ಕರುವಾನಾ ವಿರುದ್ಧ ಪಂದ್ಯದಲ್ಲಿ ಮೇಲುಗೈ ಸಾಧಿಸಿದ್ದರು. ಅಬಸೋವ್ ವಿರುದ್ಧವೂ ಅವರ ಪ್ರಾಬಲ್ಯ ಸ್ಪಷ್ಟವಾಗಿತ್ತು. ಆದರೆ ಅಂತಿಮವಾಗಿ ಅವರು ಎರಡೂ ಪಂದ್ಯಗಳಲ್ಲಿ ತಲಾ ಅರ್ಧ ಪಾಯಿಂಟ್ ಅಷ್ಟೇ ಗಳಿಸಲು ಶಕ್ತರಾದರು.

ಪ್ರಜ್ಞಾನಂದ ಪಿಟಿಐ ಚಿತ್ರ

ಗುಕೇಶ್ ಪಿಟಿಐ ಚಿತ್ರ

ಗುಕೇಶ್, ಅಲಿರೇಝಾ ವಿರುದ್ಧದ ಪಂದ್ಯದಲ್ಲಿ ಮೇಲುಗೈ ಸಾಧಿಸಿದ್ದರು. ಫ್ರಾನ್ಸ್‌ನ ಆಟಗಾರ ಸಮಯದ ಒತ್ತಡಕ್ಕೂ ಸಿಲುಕಿದ್ದರು. ಆದರೆ ಗುಕೇಶ್ ಕೆಲವು ಗಂಭೀರ ಪ್ರಮಾದಗಳನ್ನು ಎಸಗಿದ್ದರಿಂದ ಇರಾನ್ ಸಂಜಾತ ಆಟಗಾರನೆದುರು ಸೋಲನ್ನು ಕಂಡರು.

